ಅಧ್ಯಕ್ಷರು :- ರೇವಣ್ಣನವರೆ, ಸಂಕ್ಷಿಪ್ತವಾಗಿ ಹೇಳಿ. ಆಮೇಲೆ ಇದರ ಬಗ್ಗೆ ವಿವರವಾಗಿ ಹೇಳುವಿರಂತೆ. ಇದನ್ನು ರೂಲ್ 69 ರಲ್ಲಿ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ :- ಮಾನ್ಯ ಅಧ್ಯಕ್ಷರೆ, ಮೇ 13ನೇ ದಿನಾಂಕದಿಂದ ಇದುವರೆಗೆ 30 ಸಾವಿರ ಟನ್ ಆಲೂಗೆಡ್ಡೆ ಬಿತ್ತನೆ ಬೀಜವೆಂದು ಹೇಳಿ ಮಾರಾಟ ಮಾಡಿದ್ದಾರೆ. ಆದರೆ ಅದು certified seeds ಅಲ್ಲ. ಅದರಲ್ಲಿ ಏನಾದರೂ ಒಂದು ಮೂಟೆ certified seeds ಆಗಿದ್ದರೆ ನೀವು ಹೇಳುವುದಕ್ಕೆ ನಾನು ಭಾಗಿಯಾಗುತ್ತೇನೆ. ಈಗ ಮೇ 15 ರಿಂದ ಜೂನ್ 15 ರೊಳಗೆ ಬಿತ್ತನೆ ಕಾರ್ಯವನ್ನು ಮಾಡಬೇಕು. ಈಗಾಗಲೇ ಪ್ರಾರಂಭವಾಗಿ ಕೆಲವು ಕಡೆ ಆಲೂಗೆಡ್ಡೆ ಬಿತ್ತನೆ ಬೀಜವನ್ನೇನು ತರಲಾಗಿತ್ತೋ ಅದೆಲ್ಲವೂ ಹಾಳಾಗಿದೆ. ವರ್ತಕರು, ಎ.ಪಿ.ಎಂ.ಸಿ.ಯವರು, ಅಧಿಕಾರಿಗಳು ಶಾಮೀಲಾಗಿದ್ದಾರೆ. ಕಳೆದ ಸಾರಿ ಸುಮಾರು 300 ರಿಂದ 400 ಕೋಟಿ ರೂ.ಗಳ ಬೆಳೆ ನಾಶವಾಗಿದೆ. ಇವತ್ತು ಮತ್ತೆ ಅದೇ ರೀತಿಯಾಗಿದೆ. ತೋಟಗಾರಿಕಾ ಇಲಾಖೆಯವರಿಗೆ ಹಲವಾರು ಬಾರಿ ನಾವು ತಿಳಿಸಿದ್ದೇವೆ. ಆಲೂಗೆಡ್ಡೆ ಬೆಳೆ ನಾಶಕ್ಕೆ ಪರಿಹಾರವನ್ನು ಕೊಡಬೇಕೆಂದು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ನಾವು ಕೇಳಿದೆವು. ಆಗಲಿಲ್ಲ. ಮುಖ್ಯಮಂತ್ರಿಗಳ ಹತ್ತಿರ ಹೋಗಿದ್ದೆವು. ಆದಕಾರಣ ಇದರ ಬಗ್ಗೆ ತುರ್ತಾಗಿ ಚರ್ಚೆಯಾಗಬೇಕಿದೆ.

ಅಧ್ಯಕ್ಷರು :- ನಾಳೆಯೇ ನಿಯಮ 69 ರಡಿಯಲ್ಲಿ ತೆಗೆದುಕೊಳ್ಳೋಣ. ಈಗ ರಾಜ್ಯಪಾಲರ ಭಾಷಣದ ಮೇಲೆ ಶ್ರೀಮಾನ್ ಕಾರಜೋಳ್‌ರವರು ಮಾತನಾಡಬೇಕು. ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರು ಹೆಚ್ಚು ಸಮಯ ತೆಗೆದುಕೊಳ್ಳದೆ ಹತ್ತು ನಿಮಿಷದಲ್ಲಿ ಮಾತನಾಡಿ ಮುಕ್ತಾಯ ಮಾಡಬೇಕು.

2. **ಘನತೆವೆತ್ತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮುಂದುವರಿದ ಚರ್ಚೆ.**

ಶ್ರೀ ಗೋವಿಂದ ಎಂ. ಕಾರಜೋಳ್ :- ನನಗೆ ಇಪ್ಪತ್ತು ನಿಮಿಷ ಕೊಡಿ ಅಧ್ಯಕ್ಷರೆ.

ಅಧ್ಯಕ್ಷರು :- ಇಪ್ಪತ್ತು ನಿಮಿಷ ಆಗುವುದಿಲ್ಲ. ಮಾತನಾಡುವವರು ಇನ್ನೂ ಬಹಳ ಸದಸ್ಯರಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕು. ದಯವಿಟ್ಟು ಅರ್ಥ ಮಾಡಿಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) :- ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕದಲ್ಲಿ ಸುಮಾರು 35-40 ವರ್ಷಗಳಿಂದ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿ ಇವತ್ತು ಈ ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿದಂಥ ಮುಖ್ಯಮಂತ್ರಿಗಳಿಗೆ ಮತ್ತು ಅವರ ಸಚಿವ ಸಂಪುಟಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸರ್ಕಾರ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸಿದೆ. ಬಹಳ ಪ್ರಮುಖವಾದ ವಿಚಾರಗಳನ್ನು ಬಿಟ್ಟಿದ್ದೀರಿ. ಇವತ್ತು ಕರ್ನಾಟಕದಲ್ಲಿ ಆಹಾರ ಧಾನ್ಯದ ಉತ್ಪಾದನೆ ಕುಸಿಯುತ್ತಿದೆ. ಆಹಾರ ಧಾನ್ಯಗಳು ಮುಂದೊಂದು ದಿನ ಕೊರತೆಯಾಗುವಂಥ ಸಂಭವವಿದೆ. ಏಕೆಂದರೆ ಜೋಳ ಬೆಳೆಯತಕ್ಕಂಥವರಿಗೆ ಜೋಳಕ್ಕೆ ರೇಟ್ ಇಲ್ಲ, ಕೇವಲ 1500 ರೂಪಾಯಿ. ಭತ್ತ ಬೆಳೆಯತಕ್ಕಂಥವರಿಗೆ ಭತ್ತಕ್ಕೆ 1200 ರೂಪಾಯಿಗಳ ರೇಟ್ ಕೊಟ್ಟರೆ ಯಾವ ರೈತ ಒಕ್ಕಲುತನ ಮಾಡಿ ಲಾಭ ಗಳಿಸುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, 25% ಜೋಳ ಬೆಳೆಯತಕ್ಕಂಥ ಪ್ರದೇಶ ಇಂದು 13% ಗೆ ಬಂದಿದೆ. ಭತ್ತ ಬೆಳೆಯತಕ್ಕಂಥ ಪ್ರದೇಶ ಇವತ್ತು 8% ಗೆ ಬಂದಿದೆ. ಈ ರೀತಿ ಪ್ರತಿ ವರ್ಷ ಕಡಿಮೆಯಾಗುತ್ತಾ ಹೋಗುತ್ತಿದೆ. ಇಷ್ಟೇ ಅಲ್ಲದೆ ಕೃಷಿ ಭೂಮಿ ಕೂಡ ಇವತ್ತಿನ ದಿವಸ ಕಡಿಮೆಯಾಗುತ್ತಾ ಹೋಗುತ್ತಿದೆ. ಒಂದು ಕಡೆ ಇಂಡಸ್ಟ್ರಿ ಮಾಡುತ್ತೇವೆಂದು ಹೇಳಿ ಸಾವಿರ ಸಾವಿರ ಎಕರೆ ತೆಗೆದುಕೊಳ್ಳತಕ್ಕಂಥವರು ಇಂಡಸ್ಟ್ರಿಯನ್ನೂ ಮಾಡುವುದಿಲ್ಲ, ರೈತರ ಮಕ್ಕಳಿಗೂ ಉದ್ಯೋಗವನ್ನು ಕೊಡುವುದಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ದಯಮಾಡಿ ಈ KIADB ಮುಖಾಂತರ ಲ್ಯಾಂಡ್ ಪರ್ಚೇಸ್ ಮಾಡಿ ಕೊಡತಕ್ಕಂಥದ್ದನ್ನು ದಯವಿಟ್ಟು ನಿಲ್ಲಿಸಬೇಕು. ಇಲ್ಲಿದಿದ್ದರೆ ನಮಗೆ ಕೃಷಿಗೆ ಭೂಮಿಯೇ ಉಳಿಯುವುದಿಲ್ಲ. ಯಾವ ಕಾರ್ಖಾನೆಯಲ್ಲಿ ಮಣ್ಣು ತಯಾರು ಮಾಡಿಕೊಡುವುದಕ್ಕೆ ಸಾಧ್ಯವಿದೆ ಹೇಳಿ? ಯಾವ ಕಾರ್ಖಾನೆಯಲ್ಲಿ ಜೋಳ, ಗೋಧಿಯನ್ನು ತಯಾರು

ಮಾಡಿಕೊಡುವುದಕ್ಕೆ ಸಾಧ್ಯವಿದೆ ಹೇಳಿ? ಇವತ್ತು ಕಾರ್ಖಾನೆಗಳನ್ನು ಪ್ರಾರಂಭ ಮಾಡುತ್ತೇವೆಂದು ಕಾರ್ಖಾನೆಗಳ ಹೆಸರು ಹೇಳಿಕೊಂಡು ರಿಯಲ್ ಎಸ್ಟೇಟ್ ದಂಧೆ ಮಾಡತಕ್ಕಂಥವರು ಸಾವಿರ ಸಾವಿರ ಎಕರೆ, ಒಂದೊಂದು ಕಡೆ ನಾಲ್ಕು ಸಾವಿರ ಎಕರೆ, ಐದು ಸಾವಿರ ಎಕರೆ ಭೂಮಿ ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ದಯವಿಟ್ಟು ಕೃಷಿ ಭೂಮಿಯನ್ನು acquisition ಮಾಡುವುದನ್ನು ನಿಲ್ಲಿಸಿಬಿಡಿ. ಯಾವ ಕೈಗಾರಿಕೆಗಳೂ ಬರಬೇಕಾಗಿಲ್ಲ. 6 ಕೋಟಿ ಜನರು ಇವತ್ತು ಅನ್ನ ಇಲ್ಲದೆ ಬದುಕುವಂಥ ಪರಿಸ್ಥಿತಿಯಿಲ್ಲ. ಎಲ್ಲರಿಗೂ ಅನ್ನ ಬೇಕು. ಶ್ರೀಮಂತರಿಗೂ ಅನ್ನ ಬೇಕು, ಬಡವರಿಗೂ ಅನ್ನ ಬೇಕು. ಅದಕ್ಕಾಗಿ ಮೊದಲು ಕೃಷಿಗೆ ಆದ್ಯತೆಯನ್ನು ಕೊಡಬೇಕು. ಇವತ್ತು ನಮ್ಮ ರೈತರು ಆಹಾರ ಧಾನ್ಯಗಳನ್ನು ಬೆಳೆಯುವುದನ್ನು ಬಿಟ್ಟು Commercial crop ಬೆಳೆಯುವ ಕಡೆ ಹೋಗುತ್ತಿದ್ದಾರೆ. ಇಂದು ಕೃಷಿಗೆ ಪ್ರಥಮ ಆದ್ಯತೆಯನ್ನು ಕೊಡಬೇಕು. ಕೃಷಿಗೆ ಆದ್ಯತೆಯನ್ನು ಕೊಡದಿದ್ದರೆ ನಾವು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಒಂದು ಕಡೆ ದೊಡ್ಡ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೀರಿ. ಉದಾಹರಣೆಗೆ Upper krishna Project ನಿಂದಾಗಿ 230 ಹಳ್ಳಿಗಳು ಮುಳುಗಿವೆ. ನಾಲ್ಕು ಲಕ್ಷ ಎಕರೆ ಭೂಮಿ ಮುಳುಗಿದೆ. ಇವತ್ತು ಪ್ರತಿನಿತ್ಯ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಅದಕ್ಕಾಗಿ ಸರ್ಕಾರ ಬಹಳ ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು. ನನಗೆ ಟೈಂ ಕಡಿಮೆ ಕೊಟ್ಟಿರುವುದರಿಂದ ನಾನು ಹೇಳುವ ವಿಚಾರವನ್ನು ಶಾರ್ಟ್ ಆಗಿ ಹೇಳುತ್ತೇನೆ. ಇವತ್ತು ಹಾಸ್ಟೆಲ್‌ಗಳಿವೆ, ಪ್ರತಿಯೊಬ್ಬ ವಿದ್ಯಾರ್ಥಿಯ ಮೆಸ್ ಚಾರ್ಜಸ್ ಎಂದು ಸರ್ಕಾರಿ ಪ್ರಿ-ಮೆಟ್ರಿಕ್ ಹಾಸ್ಟೆಲ್ ಮತ್ತು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗೆ ನಾವು ಕೆಲವೊಂದು ಕಡೆ 800/- ರೂ.ಗಳನ್ನು ಕೊಡುತ್ತೇವೆ, ಕೆಲವೊಂದು ಕಡೆ 1,000/- ರೂ.ಗಳನ್ನು ಕೊಡುತ್ತೇವೆ. ಎಲ್ಲೆಲ್ಲಿ ಸರ್ಕಾರಿ ಹಾಸ್ಟೆಲ್‌ಗಳಿಲ್ಲವೋ ಅಂಥ ಕಡೆಗಳಲ್ಲಿ ಪ್ರೈವೇಟ್ ಹಾಸ್ಟೆಲ್‌ಗಳಿವೆ. ಅಂಥ ಹಾಸ್ಟೆಲ್‌ಗಳಿಗೆ ಪ್ರತಿಯೊಂದು ವಿದ್ಯಾರ್ಥಿಗೆ ಮೆಸ್ ಚಾರ್ಜಸ್ ಎಂದು ಕೇವಲ 500/- ರೂ.ಗಳನ್ನು ನಿಗದಿ ಮಾಡಿದ್ದೇವೆ, Establishment charges ಕೊಡುವುದಿಲ್ಲ. ಹೀಗಾದರೆ ಅಲ್ಲಿ ಬಡವರ ಮಕ್ಕಳು ಊಟ ಮಾಡುವುದು ಹೇಗೆ? ಇದರಿಂದಾಗಿ ಬಹಳಷ್ಟು ಪ್ರೈವೇಟ್ ಹಾಸ್ಟೆಲ್‌ಗಳನ್ನು ಮುಚ್ಚಲಾಗಿದೆ.

ನೀವು ಒಂದು ಕೆಲಸ ಮಾಡಿ, ಯಾರು ಪ್ರೈವೇಟ್ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದಾರೋ ಅವರು ಈ 500/-ರೂ.ಗಳನ್ನು ತೆಗೆದುಕೊಂಡು ಹಾಸ್ಟೆಲ್ ನಡೆಸುವುದಕ್ಕೆ ಆಗುವುದಿಲ್ಲ. ಆದುದರಿಂದ ಅಂಥ ಹಾಸ್ಟೆಲ್‌ಗಳನ್ನು ಸರ್ಕಾರವೇ take over ಮಾಡಿ ಸರ್ಕಾರವೇ ಅದನ್ನು ತೆಗೆದುಕೊಂಡು ನಡೆಸಲಿ. ಬಡವರ ಮಕ್ಕಳಿಗೆ ಈಗ ಅನ್ಯಾಯವಾಗುತ್ತಿದೆ. ಇನ್ನೊಂದು ಬಹಳಷ್ಟು ಮಹತ್ವದ ವಿಚಾರವೆಂದರೆ, ಇವತ್ತು ಎಸ್.ಸಿ/ಎಸ್.ಟಿ. ಜನಾಂಗದ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುತ್ತೇವೆ. ಸ್ಕಾಲರ್‌ಶಿಪ್ ಕೊಡತಕ್ಕಂಥ ಪ್ರೈವೇಟ್ ಇನ್ಸ್‌ಟಿಟ್ಯೂಶನ್‌ನಲ್ಲಿ ಅವರು ಸರ್ಕಾರದಿಂದ ಇನ್ನೂ ಬಂದಿಲ್ಲವೆಂದು ಹೇಳಿ ಮಕ್ಕಳ ಪಾಲಕರ ಕಡೆಯಿಂದ ಫೀಸ್‌ನ್ನು ಮೊದಲೇ ತುಂಬಿಸಿಕೊಂಡು ಬಿಡುತ್ತಾರೆ. ಯಾವಾಗ ರೀ-ಇಂಬರ್ಸ್‌ಮೆಂಟ್ ಹಣ ಸರ್ಕಾರದಿಂದ ಬರುತ್ತದೋ ಆ ಹಣವನ್ನು ಇನ್ಸ್‌ಟಿಟ್ಯೂಶನ್‌ನವರು ತೆಗೆದುಕೊಂಡು ಬಿಡುತ್ತಾರೆ. ಆ ಮಕ್ಕಳ ಪಾಲಕರಿಗೆ ಆ ಹಣವನ್ನು ಕೊಡುವುದಿಲ್ಲ. ಎಷ್ಟೋ ಕಡೆ ಬಡವರ ಮಕ್ಕಳಿಗೆ ಎಕ್ಸಾಮಿನೇಷನ್‌ಗೆ ಕೂರಿಸುತ್ತಿಲ್ಲ. ಪ್ರೈವೇಟ್ ಇನ್ಸ್‌ಟಿಟ್ಯೂಶನ್‌ನವರು ನೀವು ಫೀಸ್ ಕಟ್ಟದೇ ಹೋದರೆ ನಿಮ್ಮನ್ನು ಎಕ್ಸಾಮಿನೇಷನ್‌ಗೆ ಕೂರಿಸುವುದಕ್ಕೆ allow ಮಾಡುವುದಿಲ್ಲವೆನ್ನುತ್ತಾರೆ. ಇದಕ್ಕಾಗಿ ಸರ್ಕಾರ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಯಾವ institutionನವರು ಆ ರೀತಿ ಮಾಡಿದ್ದಾರೆಂದು complaint ಬರುತ್ತದೆ, ಆ institution ನ ಮಾನ್ಯತೆ ರದ್ದು ಮಾಡಬೇಕು, ಇಲ್ಲದಿದ್ದರೆ ಸರ್ಕಾರ ಆ institution ಅನ್ನು take over ಮಾಡಬೇಕು. ಇಲ್ಲದಿದ್ದರೆ ಬಡವರ ಮಕ್ಕಳಿಗೆ ಅನ್ಯಾಯವಾಗುತ್ತದೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಅಂಬೇಡ್ಕರ್ ನಿಗಮದಿಂದ, ಎಸ್‌ಸಿ/ಎಸ್‌ಟಿ ನಿಗಮದಿಂದ ರಾಜ್ಯದಲ್ಲಿ 1984ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರು ಇದ್ದರು, ಆ ಸಂದರ್ಭದಲ್ಲಿ ಪ್ರಾರಂಭವಾದಂತಹ Scheme. 1980ರಿಂದ ಇಲ್ಲಿಯವರೆಗೆ 64,000 ಕೊಳವೆ ಬಾವಿಗಳನ್ನು ಕೊರೆದಿದ್ದು, ಅದಕ್ಕೆ 538 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. 17,000 ಕೊಳವೆ ಬಾವಿಗಳಿಗೆ 4-5 ವರ್ಷಗಳಿಂದ ವಿದ್ಯುತ್ ಸಂಪರ್ಕ ಮಾಡಿಕೊಟ್ಟಿಲ್ಲವೆಂದರೆ ಅದರ ಪ್ರಯೋಜನ ಏನು?

ಅಧ್ಯಕ್ಷರು :- ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ?

ಶ್ರೀ ಗೋವಿಂದ ಎಂ. ಕಾರಜೋಳ : ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊರೆದಂತಹ 17,000 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ, IP setಗಳಿಗೆ Power supply ಕೊಟ್ಟಿಲ್ಲ. ಒಂದು ಕಡೆ ಅವರಿಗೆ ಲಾಭವಾಗಲಿಲ್ಲ, ಸರ್ಕಾರದ ಹಣ ಖರ್ಚಾಯಿತು. ಇನ್ನೊಂದು ಕಡೆ ಬಡವರಿಗೆ ಸಬ್ಸಿಡಿ ಹಣ ಬಿಟ್ಟು ಉಳಿದ ಹಣವನ್ನು loan ಎಂದು treat ಮಾಡುತ್ತಾರೆ.

ಅಧ್ಯಕ್ಷರು : ಇದು ಮೂರು corporationಗಳಿಂದಲೋ ಅಥವಾ ಒಂದೇ corporation ನಿಂದ ಕೊರೆದಿರುವುದಾ?

ಶ್ರೀ ಗೋವಿಂದ ಎಂ. ಕಾರಜೋಳ : ದೇವರಾಜು ಅರಸು ನಿಗಮ, ಅಂಬೇಡ್ಕರ್ ನಿಗಮ ಮತ್ತು ಎಸ್‌ಸಿ/ಎಸ್‌ಟಿ ನಿಗಮ, ಈ ಮೂರು corporationಗಳು ಸೇರಿ ಕೊರೆದಿರುವುದು.

ಅಧ್ಯಕ್ಷರು : ಅಲ್ಪಸಂಖ್ಯಾತರದ್ದು ಸೇರುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ಅಲ್ಪಸಂಖ್ಯಾತರದ್ದು ಸೇರುತ್ತದೆ, ಅವರದ್ದು ಬಹಳ ಸಣ್ಣ ಪ್ರಮಾಣದಲ್ಲಿ ಇದೆ. ಅಲ್ಲಿ ಜಾಸ್ತಿ ಇಲ್ಲ. ಅದರಲ್ಲಿ ನಾವು ಕೊರೆದಿರುವುದೇ ಕಡಿಮೆ. ಅದಕ್ಕೆ 5-6 ವರ್ಷಗಳಿಂದ ನಾವು ವಿದ್ಯುತ್ ಸಂಪರ್ಕ ಕೊಡದಿದ್ದರೆ, ಒಂದು ಕಡೆ ಆ ಬಡವರಿಗೆ ನೀರಾವರಿ ಸೌಲಭ್ಯ ಸಿಗಲಿಲ್ಲ, ಇನ್ನೊಂದು ಕಡೆ ಉಲ್ಟಾ ಆಗಿ ಆ ಜಮೀನು ಹೋಗಿಬಿಡುತ್ತದೆ. ಏಕೆಂದರೆ ಬಡವರು ಆ ಸಾಲ ಏನಾದರೂ...

ಅಧ್ಯಕ್ಷರು : ನೀವೇ ಅಧಿಕಾರದಲ್ಲಿ ಇದ್ದಿರಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಅದ್ಭುತವಾದಂತಹ ಕೆಲಸ ಮಾಡಿದ್ದೇನೆ. ನನ್ನ ಬಜೆಟ್ ಸಣ್ಣದಿರುತ್ತಿತ್ತು. ನನ್ನ ಕಾಲದಲ್ಲಿ ಸಣ್ಣ ನೀರಾವರಿಯಿಂದ ಇಡೀ ರಾಜ್ಯದಲ್ಲಿ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಸೌಲಭ್ಯವನ್ನು pipeline ಸಹಿತ ವಿದ್ಯುತ್ ಸಂಪರ್ಕ ಕಲ್ಪಿಸಿ ಮಾಡಿಕೊಟ್ಟಿದ್ದೇನೆ. ಯಾರಾದರೂ ಇಲ್ಲವೆಂದರೆ ಎದ್ದು ಹೇಳಲಿ. ಅದರ ಸಂಬಂಧಪಟ್ಟ ಮಂತ್ರಿಗಳೇ ಹೇಳಲಿ.

ಅಧ್ಯಕ್ಷರು : ಅದಕ್ಕೆ ಅಲ್ಲ ಕೇಳಿದ್ದು.

ಶ್ರೀ ಗೋವಿಂದ ಎಂ. ಕಾರಜೋಳ : ನನಗೆ ಕೊಟ್ಟಿದ್ದು ಸಣ್ಣ ನೀರಾವರಿ ಇಲಾಖೆಯಲ್ಲಿ ಬರುವಂತಹ ಗಂಗಾಕಲ್ಯಾಣ ಯೋಜನೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ : ಅದೂ ಆಯಿತು, ಅದನ್ನು ಮಾಡಿ, ನಾವು ಇಲ್ಲವೆನ್ನುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರೇ ಮಾತನಾಡಿ. ಅವರು ಹೇಳುತ್ತಾರೆ, ನಾನು ಹೇಳಿದ್ದೇನೆ ಬಿಡಿ, ಈಗ ಸಮಯವಿಲ್ಲ.

(ಗೊಂದಲ)

ಶ್ರೀ ಈಶ್ವರ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಇವರು ಎಂಟು ವರ್ಷ ಆಯಿತು, ವಿದ್ಯುತ್ ಸಂಪರ್ಕ ಕೊಟ್ಟಿಲ್ಲ, ಇನ್ನೂ ಇದೆ. ಹೇಳಿ ಎಂದು ನೀವೇ ಹೇಳಿದಿರಲ್ಲ, ಅದಕ್ಕೆ ಹೇಳುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾವು ಮಾಡಿದ ಹಾಗೆ ನೀವು ಮಾಡಿದರೆ ನೀವು ಮೂರೇ ದಿನದಲ್ಲಿ ಇಲ್ಲಿಗೆ ಬರುತ್ತೀರಿ. ಅದಕ್ಕೆ ಹಾಗೆ ಮಾಡಬೇಡಿ. ಜನ ನಿಮಗೆ ಅಧಿಕಾರ ಕೊಟ್ಟಿದ್ದಾರೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ : ನಮಗೆ ಮಾಡುವುದಕ್ಕೆ ಅವಕಾಶ ಈಗ ಬಂದಿದೆ, ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಸಮಯವಿಲ್ಲ, ಸಮಯವನ್ನು ಹಾಳು ಮಾಡಬೇಡಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾವು ತಪ್ಪು ಮಾಡಿದ್ದಕ್ಕೆ ಜನ ನಮಗೆ ತೀರ್ಪು ಕೊಟ್ಟಿದ್ದಾರೆ, ನೀವೂ ಅದೇ ಮಾಡಬೇಕೇ? ನೀವು ಸಾಮಾಜಿಕ ಕಳಕಳಿ ಬಗ್ಗೆ ಅರ್ಥ ಮಾಡಿಕೊಂಡು ಮಾತನಾಡಿ.

ಅಧ್ಯಕ್ಷರು : ನೀವು ಅವರ ಕಡೆ ನೋಡಬೇಡಿ, ಈ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲಿ 54 ಜನ ಸದಸ್ಯರು ಎಸ್‌ಸಿ/ಎಸ್‌ಟಿ ಯವರಿದ್ದೀರಿ, ಸಾಮಾಜಿಕ ಕಳಕಳಿಯನ್ನು ಅರ್ಥ ಮಾಡಿಕೊಂಡು ಮಾತನಾಡಿ. ಮಾನ್ಯ ಮುಖ್ಯಮಂತ್ರಿಯವರಿಗೆ ಸಾಮಾಜಿಕ ಕಳಕಳಿ ಎಂದರೆ ಏನು ಎಂದು ಗೊತ್ತಿದೆ. ಅದಕ್ಕೆ ಅರ್ಥ ಮಾಡಿಕೊಂಡು

ಮಾತನಾಡಿ. ನಾನು ಮಾತನಾಡುವಾಗ ಸುಮ್ಮನೆ ಎದ್ದು ಗಲಾಟೆ ಮಾಡಬಾರದು. ಮಾನ್ಯ ಸಭಾಧ್ಯಕ್ಷರೆ, ಇವತ್ತು ಅದನ್ನು ಕೊಡಿಸತಕ್ಕಂಥ ಕೆಲಸವಾಗಬೇಕು.

ಅಧ್ಯಕ್ಷರು : ಖಂಡಿತ.

ಶ್ರೀ ಗೋವಿಂದ ಎಂ. ಕಾರಜೋಳ : ಇಲ್ಲದಿದ್ದರೆ ಬಡವರ ಹೊಲ ಹೋಗಿಬಿಡುತ್ತದೆ. ಏಕೆಂದರೆ ಅದು ಪೂರ್ಣ ಪ್ರಮಾಣದ ಸಬ್ಸಿಡಿ ಇಲ್ಲ. ಸಾಲದ ಪ್ರಮಾಣ ಇದ್ದು, ಸಾಲಕ್ಕೆ ಬಡ್ಡಿ ಸೇರುತ್ತದೆ. ಅವರಿಗೆ ನೀರಾವರಿ ಆಗಲಿಲ್ಲ, ಹೊಲ ಕೂಡ ಕಳೆದುಕೊಳ್ಳುವುದಾಗುತ್ತದೆ. ಅದಕ್ಕೆ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇನ್ನೊಂದು ಬಹಳ ಮಹತ್ವದ ವಿಷಯವಿದೆ. ಸಮಾಜ ಕಲ್ಯಾಣ ಇಲಾಖೆಯವರು ಏಕೆ ಆ ರೀತಿ ಮಾಡಿದ್ದಾರೋ ಗೊತ್ತಿಲ್ಲ. ಖಾಸಗಿ ಸಂಸ್ಥೆಯವರು ಬಹಳ ಪ್ರತಿಷ್ಠಿತ ವಸತಿ ಶಾಲೆಗಳನ್ನು ನಡೆಸುತ್ತಾರೆ. ಅಲ್ಲಿ select ಆದಂತಹ ಹುಡುಗರಿಗೆ ಖಾಸಗಿ ವಸತಿ ಶಾಲೆಗಳಲ್ಲಿ boarding, tuition fee ಎಂದು ಒಬ್ಬೊಬ್ಬ ಮಕ್ಕಳಿಗೆ ಏನು 70–80 ಸಾವಿರ charge ಮಾಡುತ್ತಿದ್ದರು, ಅದನ್ನು ಸರ್ಕಾರದಿಂದ ಕೊಡುತ್ತಿದ್ದರು. ಅದನ್ನು ಇವತ್ತು ನಿಲ್ಲಿಸಿಬಿಟ್ಟಿದ್ದಾರೆ. ಹೀಗಾಗಿ ಪ್ರತಿಷ್ಠಿತ ಶಾಲೆಗಳಿಗೆ ಬಡವರ ಮಕ್ಕಳು ಹೋಗುವ ಹಾಗೆ ಇಲ್ಲ. ಅದಕ್ಕೆ ಅದನ್ನು ಮುಂದುವರೆಸಬೇಕು ಎಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ನಾನು ಇದನ್ನು specific ಆಗಿ ಏಕೆ ಹೇಳುತ್ತಿದ್ದೇನೆಂದರೆ ಬಡವರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕು, ಇಲ್ಲದಿದ್ದರೆ ಅವರು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಾರೆ. ಆ ರೀತಿ ವಂಚಿತರಾಗುವುದಕ್ಕೆ ಈ ಸರ್ಕಾರಿ ಅವಕಾಶ ಮಾಡಿಕೊಡಬಾರದು. ಅದರಲ್ಲೂ ಅದು ಮಾನ್ಯ ಸಿದ್ಧರಾಮಯ್ಯನವರ ಕಾಲದಲ್ಲಿ ಆಗಬಾರದು. ಏಕೆಂದರೆ ಬಡವರ ಮಕ್ಕಳನ್ನು ಓದಿಸತಕ್ಕಂಥದ್ದು ಎಷ್ಟು ಕಷ್ಟ ಎಂದು ಅವರಿಗೆ ಗೊತ್ತಿದೆ. ಅದಕ್ಕೆ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಭೂ ಒಡೆತನ ಯೋಜನೆ ಎಂದು ಇದೆ. ಮೊದಲು ಎಕರೆಗೆ 30,000 ಇತ್ತು, ನಂತರ 60,000 ಆಯಿತು. ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಾಗ 2.50 ಲಕ್ಷ ರೂಪಾಯಿಯಿಂದ 5.00 ಲಕ್ಷ ರೂಪಾಯಿ ಮಾಡಿದರು. ಇವತ್ತು ಹಿಂದಿನ ಸರ್ಕಾರ 5.00 ಲಕ್ಷ ರೂಪಾಯಿ ಮಾಡಿದರು. ಐದು ಲಕ್ಷ ರೂಪಾಯಿ ಕೊಟ್ಟರೂ ಇವತ್ತು ಒಂದು ಎಕರೆ ಭೂಮಿ ಸಿಗುತ್ತಿಲ್ಲ. ಒಣ ಬೇಸಾಯ

ಜಮೀನು 10 ಲಕ್ಷ ಇದ್ದರೆ, ನೀರಾವರಿ ಜಮೀನು 15 ಲಕ್ಷ ರೂಪಾಯಿ ಇದೆ. ಅದಕ್ಕೆ ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ ಭೂ ಒಡೆತನ ಸ್ಕೀಮ್‌ನಲ್ಲಿ ಹಣವನ್ನು ಹೆಚ್ಚು ಮಾಡತಕ್ಕಂಥ ಕೆಲಸ ಮಾಡಿ 10 ಲಕ್ಷ ರೂಪಾಯಿಗೆ ಏರಿಸಿ ಕನಿಷ್ಠ ಒಂದು ಎಕರೆ ಒಣ ಬೇಸಾಯವಾದರೂ ಅವರಿಗೆ ಸಿಗಬೇಕು. ಇವತ್ತು ಭೂ ಒಡೆತನ ಎಂದರೆ ಅದು ಹೆಸರಿಗೆ ಮಾತ್ರ. ಇಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಇದ್ದಾರೆ. ನಾನು ಅವರಿಗೆ ವಿನಂತಿ ಮಾಡುತ್ತೇನೆ. ನಿಮ್ಮ ಅಧಿಕಾರಿಗಳಿಗೆ ಸ್ವಲ್ಪ liberal ಆಗಿ ರೇಟ್ ಫಿಕ್ಸ್ ಮಾಡುವಂತಹ ಕೆಲಸ ಮಾಡುವುದಕ್ಕೆ ತಾವು ಆದೇಶವನ್ನು ಮಾಡಬೇಕು. ಇನ್ನೊಂದು ಬಹಳ ಮಹತ್ವದ ವಿಚಾರ ಇದೆ. ನೀವು ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ಎತ್ತಬೇಡಿ. ಬಡವರಿಗೆ ಅನ್ಯಾಯವಾದದ್ದನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ಇವತ್ತು ಎರಡು ಲಕ್ಷಕ್ಕಿಂತಲೂ ಹೆಚ್ಚು ಜನ ಮೆಡಿಕಲ್ ಸೀಟು, ಇಂಜಿನಿಯರಿಂಗ್ ಸೀಟು ತೆಗೆದುಕೊಂಡಿದ್ದಾರೆ, ಜಡ್ಜ್‌ಗಳು, ಚೀಫ್ ಇಂಜಿನಿಯರ್ ಮತ್ತು ರಾಜ್ಯದಲ್ಲಿ Head of the Department ಆಗಿದ್ದಾರೆ. ಇವತ್ತು ವಿಧಾನಸಭೆಗೂ ಆಯ್ಕೆಯಾಗಿ ಬಂದಿರುವ ವಿವಾದವನ್ನು ನಾವು ನೋಡುತ್ತಿದ್ದೇವೆ. ಹಿಂದಿನ ಸರ್ಕಾರದಲ್ಲಿ ಆಗಿತ್ತು, ಮೊನ್ನೆ ಕೋರ್ಟ್ ಆರ್ಡರ್ ಆಗಿ ಐದು ವರ್ಷ ಎಂಎಲ್ಎ ಆಗಿ ಏನು ಬೆನಿಫಿಟ್ ತೆಗೆದುಕೊಂಡಿದ್ದಾರೆ, ಅವೆಲ್ಲವನ್ನು ಅವರಿಂದ ಮಾಡಬೇಕೆಂದು ಆದೇಶ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಹಿಂದೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಎಸ್‌ಸಿ/ಎಸ್‌ಟಿ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದೆವು. ಮೊದಲು certificate ಕೊಡತಕ್ಕಂಥ ಅಧಿಕಾರಿಗೆ ಯಾವುದೇ ನಿರ್ಬಂಧ ಇರಲಿಲ್ಲ, ಒಂದು ಘೋಷಣಾ ಪತ್ರ ಅಥವಾ ಒಂದು affidavit ಕೊಟ್ಟರು ಎಂದರೆ certificate ಕೊಟ್ಟು ಕಳುಹಿಸಿ ಬಿಡುತ್ತಿದ್ದರು. ಆದರೆ ಈಗ ಆಗಿಲ್ಲ. ಜಾತಿ ಪ್ರಮಾಣ ಪತ್ರವನ್ನು ಕೊಡುವವನು confirm ಮಾಡಿಕೊಂಡೇ ಕೊಡಬೇಕು. ಆ ರೀತಿ ಕೊಡದಿದ್ದರೆ ಅವನಿಗೆ ಆರು ತಿಂಗಳು ಶಿಕ್ಷೆ ಎಂದು ಕಾನೂನು ತಿದ್ದುಪಡಿ ಮಾಡಿದ್ದೇವೆ. ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ, ಅವರಿಗೆ ವಿನಂತಿ ಮಾಡುತ್ತೇನೆ. ದಯಮಾಡಿ ತಾವು bogus caste certificate ಕೊಟ್ಟಂತಹ ಹತ್ತು ಮಂದಿ ತಹಶೀಲ್ದಾರ್ ಅನ್ನು ಒಳಗೆ ಹಾಕಿ. ಈ ಪರಿಸ್ಥಿತಿ ಆಯಿತು ಎಂದರೆ ಈ ದೇಶದಲ್ಲಿ ಮೀಸಲಾತಿ

ಅವಶ್ಯಕತೆಯೇ ಇಲ್ಲ. ಎಲ್ಲರೂ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡು ಮೀಸಲಾತಿ ಕಬಳಿಸುವುದಾದರೆ ಇಂತಹ ಮೀಸಲಾತಿ ಏಕೆ? ಮೀಸಲಾತಿ ತರುವಂತಹ ಉದ್ದೇಶ ಏನಿತ್ತು? ಯಾರು ಅಸ್ಪೃಶ್ಯರಿದ್ದಾರೆ, ಶೋಷಿತ ವರ್ಗದವರಿದ್ದಾರೆ, ಯಾರನ್ನು ಹೊಲೆ-ಮಾದಿಗರು ಎಂದು ಊರ ಹೊರಗೆ ಇಟ್ಟಿದ್ದರು, ಯಾರನ್ನು ಹಟ್ಟಿಗಳಲ್ಲಿ ಮತ್ತು ತಾಂಡಾಗಳಲ್ಲಿ ಇಟ್ಟಿದ್ದರು, ಅಂತಹ ಬಡವರನ್ನು ಮೇಲಕ್ಕೆ ಎತ್ತಬೇಕು, ಅವರಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು, ಅವರು ಮುಖ್ಯವಾಹಿನಿಗೆ ಬರಬೇಕೆಂದು ತಂದಂತಹ ಉದ್ದೇಶದಿಂದ ಮಾಡಿರುವಂತಹ ಸಂವಿಧಾನದ ಅವಕಾಶವನ್ನು ದುರುಪಯೋಗ ಮಾಡಿಕೊಂಡರೆ, ಕೇವಲ ಮಾಡಿಕೊಂಡವರಿಗೆ ಅಷ್ಟೇ ಅಲ, ಕೊಟ್ಟವರಿಗೂ ಶಿಕ್ಷೆ ಆಗಬೇಕೆಂದು ಕಾನೂನು ಮಾಡಿ. ದಯಮಾಡಿ ನಾನು ಸರ್ಕಾರಕ್ಕೆ ವಿಂತಿ ಮಾಡುವುದೇನೆಂದರೆ ಹತ್ತಿಪ್ಪತ್ತು ಮಂದಿಯನ್ನಾದರೂ ಜೈಲಿಗೆ ಹಾಕಿ. ಮೆಸೇಜ್ ಹೋಗಲಿ, ಕೊಡತಕ್ಕಂಥಾದ್ದನ್ನು ನಿಲ್ಲಿಸತಕ್ಕಂಥ ಕೆಲಸವಾಗಬೇಕು. ಇಲ್ಲದಿದ್ದರೆ ಈ ಮೀಸಲಾತಿಗೆ ಅರ್ಥವಿರುವುದಿಲ್ಲ. ದುಡ್ಡಿದ್ದವರೆಲ್ಲರೂ ಕೂಡ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ತೆಗೆದುಕೊಂಡು ಒಳಗಡೆ ಬಂದು ಕುಳಿತುಕೊಂಡರು ಎಂದರೆ, ಮಾನ್ಯ ತಂಗಡಗಿಯವರೆ, ಇವತ್ತು 54 ಜನರಲ್ಲಿ ಮುಂದೆ 5 ಜನ ಕೂಡ ಬರುವುದಕ್ಕೆ ಆಗುವುದಿಲ್ಲ. ಯಾರು ಶೋಷಿತರಿದ್ದಾರೆ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ, ಅಂತಹ ಜನಾಂಗವನ್ನು ಮೇಲೆತ್ತುವಂತಹ ಕೆಲಸವಾಗಬೇಕು. ಆದರೆ ಇವತ್ತು ಆ ಕೆಲಸವಾಗುತ್ತಿಲ್ಲ. ಅದಕ್ಕೆ ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಾನು ನಿರೀಕ್ಷೆ ಮಾಡಿದೆ, ಬಹಳಷ್ಟು ಜನ ಎಸ್‌ಸಿ/ಎಸ್‌ಟಿ ಜನಾಂಗದವರಲ್ಲಿ, ಹಿಂದುಳಿದವರಲ್ಲಿ ವಿದ್ಯಾವಂತರಾಗಿದ್ದಾರೆ, ಪದವೀಧರರಾಗಿದ್ದಾರೆ, ಅವರು ಉದ್ಯೋಗವಿಲ್ಲದೆ ಅಲೆಯುತ್ತಿದ್ದಾರೆ. ಅವರಿಗೆ ಉದ್ಯೋಗ ಕೊಡುವುದಕ್ಕೆ ವಿಶೇಷವಾದಂತಹ ಯೋಜನೆಯನ್ನು ಕಲ್ಪಿಸುವಂತಹ ಕೆಲಸವನ್ನು ಹೊಸ ಸರ್ಕಾರ ಮಾಡುತ್ತದೆನ್ನುವ ನಿರೀಕ್ಷೆಯನ್ನು ಇಟ್ಟಿದ್ದೆ. ಆದರೆ ಅದು ಆಗಲಿಲ್ಲ. ನನ್ನ ನಿರೀಕ್ಷೆ ಸುಳ್ಳಾಯಿತು. ದಯಮಾಡಿ ಬಜೆಟ್ ಅಧಿವೇಶನದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಅವರಿಗೆ ಉದ್ಯೋಗ ಕೊಡಿಸುವುದಕ್ಕೆ ಏನಾದರೂ ಮಾಡಿ. ಅವರಿಗೆ ಉದ್ಯೋಗ ಎಂದರೆ ಸರ್ಕಾರ ನೌಕರಿಯೇ ಕೊಡಬೇಕೆಂದೇನೂ ಇಲ್ಲ. ದುಡಿಯತಕ್ಕಂಥ ಕೈಗಳಿಗೆ ಕೆಲಸ

ಕೊಡತಕ್ಕಂಥಾದ್ದು ಆಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಹಿಂದೆ Speaker ಆಗಿದ್ದಂಥ ಮಾನ್ಯ ರಮೇಶ್‌ಕುಮಾರ್‌ರವರು ನಿನ್ನೆ ಮಾತನಾಡುವ ಸಂದರ್ಭದಲ್ಲಿ Agriculture Schools ಇರಬೇಕೆಂದು ಪ್ರಸ್ತಾಪ ಮಾಡಿದರು. ಪ್ರಾಥಮಿಕ ಹಂತದಿಂದಲೇ ಒಕ್ಕಲುತನ ಪ್ರಾರಂಭವಾಗಬೇಕೆಂದು ಹೇಳುತ್ತೇನೆ. ಹಿಂದೆ ನಾವು ಓದುವಂಥ ಸಂದರ್ಭದಲ್ಲಿ Agriculture Schools ಎಂದು ಇದ್ದವು, ಅಲ್ಲಿ Agriculture subject ಇತ್ತು. ಈ subject ಶುಕ್ರವಾರ, ಶನಿವಾರದಂದು ಎರಡು period ಇರುತ್ತಿತ್ತು. ಆಗ ನಮಗೆ ಎರಡು ದಿವಸ ಕುರುಪಿ ತೆಗೆದುಕೊಂಡು ಪೊರಕೆ ತೆಗೆದುಕೊಂಡು ಕಸ ತೆಗೆಯಲು ಕಳುಹಿಸುತ್ತಿದ್ದರು. ಆ ವ್ಯವಸ್ಥೆ ಇತ್ತು, ಈಗ ಆದೆಲ್ಲವೂ ಬಂದ್ ಆಗಿದೆ, ಇದನ್ನು ಪುನಃ ಪ್ರಾರಂಭ ಮಾಡಿದರೆ, ಇವತ್ತು ರೈತರ ಮಕ್ಕಳು ಒಕ್ಕಲುತನದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನಿನ್ನೆ ದಿವಸ ಹೇಳಿದಂತೆ M.Sc.(Agri), B.Sc.(Agri), ಆಗಿರುವವರು fertilizer ಕಂಪನಿಗಳಲ್ಲಿ ಮ್ಯಾನೇಜರ್‌ಗಳು, ಸೂಪರ್‌ವೈಸರ್‌ಗಳು ಆಗಿ ಸೇಲ್ಸ್‌ಮನ್‌ಗಳಾಗಿ ಹೋಗುತ್ತಾರೆ. ಬೆಂಗಳೂರು ಸಿಟಿಯಲ್ಲಿರುವಂಥವರ ಮಕ್ಕಳು ಖರ್ಚು ಮಾಡಿ ಓದಿ, ಅಲ್ಲಿಗೆ ಹೋದರೆ ಕೃಷಿ ಇಲಾಖೆಗೆ ಏನು ಮಹತ್ವ ಬರುತ್ತದೆ? ದಯಮಾಡಿ, ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಸರ್ಕಾರ ಪರಿಗಣಿಸಬೇಕು. ಮತ್ತೆ ಪ್ರತಿಯೊಂದು ಸರ್ಕಾರಿ, ಅರೆ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೂ ಕೃಷಿ subjectಗಳನ್ನು ತರಬೇಕು. ಅವರಿಗೆ fieldನಲ್ಲಿ ಕೆಲಸ ಮಾಡುವಂಥದ್ದನ್ನು ಕಲಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ತಾವು ಮಾತನಾಡಲು ಪ್ರಾರಂಭ ಮಾಡಿ 15 ನಿಮಿಷಗಳು ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಇನ್ನು ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ. ನಾನು ಇನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದಿಸಿಲ್ಲ. ಅವರು ಸಾಮಾಜಿಕ ನ್ಯಾಯದ ಹಿನ್ನಲೆಯಲ್ಲಿ ಮುಖ್ಯಮಂತ್ರಿಯಾಗಿ ಬಂದವರು, ಅವರನ್ನು ಅಭಿನಂದಿಸುವುದು ನನ್ನ ಕರ್ತವ್ಯ, ನಾನೂ ಸಹ ಆ ಜನಾಂಗದಿಂದ ಬಂದಿದ್ದೇನೆ. ಕರ್ನಾಟಕದಲ್ಲಿ Tribalsಗೆ

Central Act ತಂದಿದ್ದಾರೆ. ಇವತ್ತು 50 ಜಾತಿಗಳು Tribal ಜನರಿದ್ದಾರೆ. ನಮ್ಮಲ್ಲೆ ಇದ್ದಾರೆ, ಜೇನು ಕುರುಬರು, ಕಾಡು ಕುರುಬರು, ಹೆರವರು, ಸೋಲಿಗರು, ಸಿದ್ದಿಗಳು, ಕೊಡಗಿನ ಕುರುಬರು, ಹಕ್ಕಿಪಿಕ್ಕಿ ಜನಾಂಗದವರು, ಇಂಥ ಅನೇಕ ಜಾತಿ ಜನಾಂಗದವರನ್ನು ಇವತ್ತು ಒಕ್ಕಲೆಬ್ಬಿಸುವಂಥ ಕೆಲಸ ಬಹಳಷ್ಟು ಕಡೆ ಬಹಳ ಗಂಭೀರವಾಗಿ ನಡೆದಿದೆ. ಇವತ್ತು ನನ್ನ ಮತಕ್ಷೇತ್ರದಲ್ಲಿ ಆಗಿರುವ ಘಟನೆ ಬಗ್ಗೆ ನಾನು ಮೊನ್ನೆ ಗಲಾಟೆ ಮಾಡಿದೆ. ಇವತ್ತು ಮೀಟಿಂಗ್ ಕರೆದಿದ್ದಾರೆ. ಅಲ್ಲಿ ಫಾರೆಸ್ಟ್‌ನವರು ಲೋಕಾಪುರ ಎನ್ನುವ ಹಳ್ಳಿಗೆ ಹೋಗಿ ತೆರೆವು ಮಾಡಿಸುವುದಕ್ಕೆ ಹೋಗಿದ್ದಾರೆ. ಈ ರೀತಿ ಬಡವರ ಮೇಲೆ ಅನ್ಯಾಯ ಆದರೆ ಒಳ್ಳೆಯದಾಗುವುದಿಲ್ಲ. ಅವರು ತಪ್ಪು ಮಾಡಿರಬಹುದು, ಅವರು ಫಾರೆಸ್ಟ್ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಳ್ಳಬಾರದಿತ್ತು, ಒತ್ತುವರಿ ಮಾಡಬಾರದಿತ್ತು. ಅವರು ಅಲ್ಲಿ ಜಾಗ ಖಾಲಿ ಇದ್ದದ್ದಕ್ಕೆ ನೂರಾರು ವರ್ಷದಿಂದ ಇದ್ದಾರೆ. ಅವರಿಗೆ ರಕ್ಷಣೆ ಕೊಡುವ ಬಗ್ಗೆ ಈ ಸರ್ಕಾರ ಏಕೋ ಮನಸ್ಸು ಮಾಡುತ್ತಿಲ್ಲ. ಇವತ್ತು ಇಲ್ಲಿ ಮಾನ್ಯ ಅರಣ್ಯ ಸಚಿವರು ಇಲ್ಲ, ಬಹುಶಃ ಅರಣ್ಯ ಸಚಿವರು ಸಮುದ್ರ ದಂಡೆಯಲ್ಲಿರುವುದರಿಂದ ಅವರಿಗೆ ಅದರ ಸಮಸ್ಯೆ ಗೊತ್ತಿಲ್ಲವೆಂದು ಕಾಣುತ್ತದೆ. ಏಕೆಂದರೆ, ಸಮುದ್ರದಲ್ಲಿ ಯಾರು ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು ಇದನ್ನು ಸರಿಯಾಗಿ ಅರ್ಥ ಮಡಿಕೊಂಡು ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆನ್ನುವಂಥ ಮಾತನ್ನು ಹೇಳುತ್ತೇನೆ. ತಾವು ಟೈಮ್ ಆಯಿತು, ಟೈಮ್ ಆಯಿತು ಎಂದು ಹೇಳುತ್ತಿದ್ದೀರಿ, ನಾನು ಇನ್ನು ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು. ನಾನು ತಮಗೆ ಗೌರವ ಕೊಟ್ಟು ಹೇಳುವಂಥ ಕೆಲಸವನ್ನು ನಿಲ್ಲಿಸುತ್ತೇನೆ. ಇನ್ನು ಮಾನ್ಯ ಸಿದ್ಧರಾಮಯ್ಯನವರು ಮತ್ತು ನಾನು ಒಂದೇ ಪಕ್ಷದಿಂದ ಬೆಳೆದು ಬಂದಂಥವರು. ಅವರು ಸಾಮಾಜಿಕ ನ್ಯಾಯಕ್ಕಾಗಿ 40 ವರ್ಷಗಳ ಕಾಲ ಸಿದ್ದರಾಮನಹುಂಡಿಯಿಂದ ಬೆಂಗಳೂರಿನವರೆಗೂ ಅಂಬೆಗಾಲೂರಿ ಬಂದಿದ್ದಾರೆ. ಅವರು ನಡೆದುಕೊಂಡು ಬಂದಿಲ್ಲ, ಅಂಬೆಗಾಲೂರಿ ಇವತ್ತು ವಿಧಾನಸಭೆಯ ಮೆಟ್ಟಿಲನ್ನು ಹತ್ತಿದ್ದಾರೆ. ಅವರು ಬಹಳ ಸಾಮಾಜಿಕ ಕಳಕಳಿಯಿಂದ, ಕಾಳಜಿಯಿಂದ ಮಾಡಿದ್ದಾರೆ. ಮಾನ್ಯ ಸಿದ್ದರಾಮಯ್ಯಮನವರು ಮುಖ್ಯಮಂತ್ರಿಯಾದ ದಿವಸದಂದೂ ಇಡೀ ರಾಜ್ಯ ನೋಡುತ್ತಿತ್ತು, ಅವರು ಮಂತ್ರಮಂಡಲ Expension ಮಾಡುವ ಸಮಯದಲ್ಲಿ 3–4 ಜನ

ಕುರುಬರನ್ನು ಮಂತ್ರಿಗಳನ್ನಾಗಿ ಮಾಡುತ್ತಾರೆಂದು ಹೇಳುತ್ತಿದ್ದರು. ಆದರೆ ಮಾನ್ಯ ಸಿದ್ದರಾಮಯ್ಯನವರು ತಾವು ಮುಖ್ಯಮಂತ್ರಿಯಾಗಿ ಇನ್ನೊಬ್ಬರನ್ನು ಮಂತ್ರಿಯನ್ನಾಗಿ ಮಾಡಲಿಲ್ಲ. ಇಲ್ಲಿ ಸ್ವಜನ ಪಕ್ಷಪಾತವಿಲ್ಲ, ಅಂಬಿಗರು ಸಾಮಾಜಿಕ ನ್ಯಾಯಕ್ಕೆ ಬೆಲೆ ನೀಡಿದರು. ಇವತ್ತು ಮಡಿವಾಳ ಸಮಾಜದವರನ್ನು, ಸಣ್ಣ ಸಣ್ಣ ಸಮಾಜದವರನ್ನು ಗುರುತಿಸಿ ಮಂತ್ರಿಗಳನ್ನಾಗಿ ಮಾಡಿದರು. ಇದನ್ನು ಪ್ರತಿಯೊಬ್ಬ ರಾಜಕೀಯ ನಾಯಕರು ಅರ್ಥ ಮಾಡಿಕೊಳ್ಳಬೇಕು. ಇದು ಸಾಮಾಜಿಕ ನ್ಯಾಯ, ಇವರು ಒಂದೂ ಜನಾಂಗದವರನ್ನು ಬಿಡಲಿಲ್ಲ. ಬೋವಿ ಜನಾಂಗದವರು ಒಬ್ಬರೇ ಬಂದಿದ್ದಾರೆಂದರೆ, ಅವರ ಸಂಖ್ಯೆ ದಾಟುವ ಹಾಗೆ ಇಲ್ಲ, ಇಲ್ಲಿ ಬೋವಿ ಜನಾಂಗದವರಾದ ಮಾನ್ಯ ಶಿವರಾಜ ತಂಗಡಗಿಯವರನ್ನು ಮಂತ್ರಿಯನ್ನಾಗಿ ಮಾಡಿದರು. ಅಂಬಿಗ ಜನಾಂಗದವರು ಹೆಚ್ಚಿಗೆ ಬಂದಿದ್ದಾರೆಂದು ಬಿಡಲಿಲ್ಲ, ಮಾನ್ಯ ಬಾಬುರಾವ್ ಚಿಂಚನಸೂರುರವರನ್ನು ಮಂತ್ರಿಯನ್ನಾಗಿ ಮಾಡಿದರು. ಸಾಮಾಜಿಕ ನ್ಯಾಯ ಎಲ್ಲಿದೆಯೆಂದರೆ, ಕಂದಾಯ ಮಂತ್ರಿಯವರಾದ ಮಾನ್ಯ ಶ್ರೀನಿವಾಸ ಪ್ರಸಾದ್‌ರವರ ಅರ್ಹತೆಯನ್ನು ಪರಿಗಣಿಸಿ, ಕಂದಾಯ ಮಂತ್ರಿಯನ್ನಾಗಿ ಮಾಡಿದರು, ಮತ್ತೆ ಡಾ:ಮಹದೇವಪ್ಪನವರನ್ನು ಪಿ.ಡ.ಬ್ಲ್ಯೂ.ಡಿ. ಮಂತ್ರಗಳನ್ನಾಗಿ ಮಾಡಿದರು. ರಾಜ್ಯದಲ್ಲಿ ಮಾನ್ಯ ಕೆ.ಹೆಚ್.ರಂಗನಾಥ್‌ರವರ ನಂತರ ಎಸ್.ಸಿ./ಎಸ್.ಟಿ, ಜನಾಂಗದವರು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆಗಿರಲಿಲ್ಲ. ಅಂಥ ಕೆಲಸವನ್ನು ಮಾನ್ಯ ಸಿದ್ದರಾಮಯ್ಯನವರು ಮಾಡಿದ್ದಾರೆ. ಅವರಿಗೆ ನಾನು ಅಭಿನಂದಿಸುತ್ತೇನೆ, ಏಕೆಂದರೆ, ಸಾಮಾಜಿಕ ನ್ಯಾಯವೆಂದರೆ ಬರೀ ಭಾಷಣವಾಗಬಾರದು. ಸಾಮಾಜಿಕ ನ್ಯಾಯವೆಂದರೆ ಅದನ್ನು ವಸ್ತುನಿಷ್ಠವಾಗಿ ಜಾರಿಗೊಳಿಸುವಂಥ ಕೆಲಸವಾಗಬೇಕು. ಬಡವರನ್ನು ಎತ್ತಿ ಹಿಡಿಯುವಂಥ ಕೆಲಸವಾಗಬೇಕು, ಬಡವರನ್ನು ಗೌರವಿಸುವಂಥದ್ದು ಆಗಬೇಕು. ಅದಕ್ಕಾಗಿ ನಾನು ಮಾನ್ಯ ಸಿದ್ದರಾಮಯ್ಯನವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಮುಖ್ಯಮಂತ್ರಿಯಾದ ಮೇಲೆ ಇನ್ನೊಬ್ಬರು ಏಕೆ ಬೇಕೆನ್ನುವಂಥ ಅಚಲ ನಿರ್ಧಾರವನ್ನು ನೋಡಿದರೆ, ಇಲ್ಲಿ ಕುರುಬರ ಸಂಖ್ಯೆ ನೋಡಿದರೆ 3–4 ಜನರನ್ನು ಮಂತ್ರಿಯನ್ನಾಗಿ ಮಾಡಬೇಕಾಗಿತ್ತು. ನಾನೇ ಮುಖ್ಯಮಂತ್ರಿಯಾಗಿದ್ದೇನೆ, ಏಕೆ ಎಂದು ಅವರು ಒಬ್ಬರೇ ಇದ್ದಾರೆ. ಇನ್ನು ಉಳಿದ ಜಾತಿಯವರಿಗೆ ಆ ಸ್ಥಾನವನ್ನು ಕೊಟ್ಟಿದ್ದಾರೆ. ಇಂಥ ಕೆಲಸವನ್ನು

ಪ್ರತಿಯೊಂದು ಪಕ್ಷದವರು, ಪ್ರತಿಯೊಬ್ಬ ರಾಜಕೀಯ ನಾಯಕರು ಮಾಡಿದಾಗ ಮಾತ್ರ ಸಾಮಾಜಿಕ ನ್ಯಾಯಕ್ಕೆ ಬೆಲೆ ಬರುತ್ತದೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ, ಮಾನ್ಯ ಸಿದ್ದರಾಮಯ್ಯನವರು ನುಡಿದಂತೆ ನಡೆದಿದ್ದಾರೆ, ಸಾಮಾಜಿಕ ನ್ಯಾಯಕ್ಕೆ ಅರ್ಥ ಕೊಟ್ಟಿದ್ದಾರೆ, 'ಸರ್ವರಿಗೂ ಸಮ ಪಾಲು, ಸಮ ಬಾಳು' ಎನ್ನುವಂಥದ್ದನ್ನು ಅರ್ಥಪೂರ್ಣವಾಗಿ ತಮ್ಮ ಅಧಿಕಾರದಲ್ಲಿ ಮಾಡಿ ತೋರಿಸಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಿ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ (ಕಡೂರು): ಮಾನ್ಯ ಅಧ್ಯಕ್ಷರೆ, ನನಗೆ ಮೊಟ್ಟಮೊದಲಿಗೆ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಏಕೆಂದರೆ, ನಾನು ವಿಧಾನಸಭೆಯ ಸದಸ್ಯನಾಗಿ ಮೊದಲ ಅನುಭವ ಆಗಿದ್ದು, '18 ವರ್ಷಕ್ಕೆ ನನ್ನ ಮಗ ದಂಟು ಎಂದ' ಎನ್ನುವ ಹಾಗೆ, ಈಗ ನನಗೆ 60 ವರ್ಷವಾಗಿದ್ದು, ಈಗ ಮೊದಲ ಬಾರಿಗೆ ಎಂ.ಎಲ್.ಎ. ಆಗಿ ಇಲ್ಲಿಗೆ ಬಂದಿದ್ದೇನೆ. ಹಾಗಾಗಿ ನನ್ನ ಹೊಸ ಅನುಭವದಲ್ಲಿ ಏನಾದರೂ ತಪ್ಪು ಆಗಿದ್ದರೆ ಆಡಳಿತ ಪಕ್ಷದವರು ಕ್ಷಮಿಸಬೇಕು, ತಾವು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೊಟ್ಟ ಮೊದಲನೆಯದಾಗಿ ಈ ಹೊಸ ಸರ್ಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅದಕ್ಕೆ ಕಾರಣವೇನೆಂದರೆ, ಸ್ಪಷ್ಟ ಜನಾದೇಶವನ್ನು ಪಡೆದುಕೊಂಡು ಅಧಿಕಾರಕ್ಕೆ ಬಂದಿದ್ದಾರೆ. ಹಾಗೆ ನಮ್ಮೆಲ್ಲರ ಆಸೆ, ನಿರೀಕ್ಷೆಗಳು ಕೂಡ ಈ ಸರ್ಕಾರದ ಬಗ್ಗೆ ಅಧಿಕವಾಗಿದೆ. ನಮ್ಮೆಲ್ಲರ ಆಸೆ-ನಿರೀಕ್ಷೆಗಳಿಗೆ ತಕ್ಕ ಹಾಗೆ ಸರ್ಕಾರ ಕೆಲಸ ಮಾಡುತ್ತದೆಂಬ ವಿಶ್ವಾಸ ಇಟ್ಟುಕೊಂಡು ನಾನು ಇನ್ನೊಮ್ಮೆ ಹೊಸ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರಲ್ಲೂ ವಿಶೇಷವಾಗಿ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿರುವುದಕ್ಕೆ ನಾನು ಬಹಳ ಖುಷಿ ಪಟ್ಟಿದ್ದೇನೆ. ಇದಕ್ಕೆ ಕಾರಣ ಎಷ್ಟೇ ಆಗಲಿ ನಮ್ಮವರು, ತಮ್ಮವರು ಎಂದು, ಅವರು ಎಲ್ಲೇ ಇರಲಿ ನಮ್ಮವರು ತಮ್ಮವರು ಎಂಬುದು ಇರುತ್ತದೆ. ಒಂದು ಥರ ಜನತಾ ಪರಿವಾರದ ರಕ್ತದ ಛಾಯಮಾನವೇ ಅಂಥಾದ್ದು, blood is thicker than water ಎಂದು. ಹಾಗಾಗಿ ಅವರು

ಮುಖ್ಯಮಂತ್ರಿಯಾಗಿರುವುದಕ್ಕೆ ನನಗೆ ತುಂಬಾ ಸಂತೋಷವಿದೆ. ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಅಷ್ಟೆ.

ಶ್ರೀ ಟಿ.ಬಿ.ಜಯಚಂದ್ರ: ತಾವು ನಮ್ಮವರು, ತಮ್ಮವರು ಎಂದು ಹೇಳಿ blood is thicker than water ಎಂದು ಹೇಳುತ್ತಿದ್ದೀರಿ. Blood ಇದ್ದಿದ್ದರೆ ಇಲ್ಲಿ ಏಕೆ ಇರುತ್ತಿದ್ದರು? ಅವರು ನಮ್ಮವರಾಗಿದ್ದಾರೆ, ನಿಮ್ಮವರಲ್ಲ.

ಶ್ರೀ ವೈ.ಎಸ್.ವಿ.ದತ್ತ : ಅವರು ನಮ್ಮವರು ಎಂದು ಹೇಳಿಕೊಳ್ಳುವುದಕ್ಕೆ ಅಷ್ಟೂ ಸ್ವಾತಂತ್ರ್ಯ ಬೇಡವೇ? ಇರಲಿ ಬಿಡಿ.

ಶ್ರೀ ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ...

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ವೆಂಕಟೇಶ್‌ರವರೆ, ತಾವು ಬೇಜಾರು ಮಾಡಿ ಕೊಳ್ಳಬೇಡಿ, ನೀವು ನಮ್ಮವರೆ.. ..

ಅಧ್ಯಕ್ಷರು : ಆಯಿತು, ತಾವು ಹೇಳಿ.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನಾನು ಮೊದಲಿಗೆ ಮುಖ್ಯವಾಗಿ ನೀರಾವರಿ ಬಗ್ಗೆ ಮಾತ್ರ ಮಾತನಾಡುವುದು. ಆದರೆ ಒಂದೊಂದೆ ಪಾಯಿಂಟ್ ಹೇಳುವುದಕ್ಕೂ ಮುಂಚೆ, ಇಲ್ಲಿ ಒಂದು ಮಾತು ಇದೆ. ನಾನು ನಮ್ಮ ವಿರೋಧಪಕ್ಷದ ನಾಯಕರ ಬಗ್ಗೆ ಹೇಳುತ್ತಿದ್ದೇನೆ. ನಮ್ಮ ನಾಯಕರಾದ ಮಾನ್ಯ ಕುಮಾರಸ್ವಾಮಿಯವರು ಕೂಡ ಅಷ್ಟೆ, ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಸದನದಲ್ಲಿ ಅವರು ರಾಜಕೀಯವನ್ನು ಬೆರೆಸದೇ ಹೇಗೆ ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ, ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡೂ ಕೂಡ ಜನತಂತ್ರದ ಗಾಲಿಗಳು ಎನ್ನುವ ರೀತಿಯಲ್ಲಿ, ಅವರು ಒಬ್ಬ ಮುತ್ಸದ್ದಿಯಾಗಿ ಅವರು ವಿಷಯವನ್ನು ಮಂಡಿಸಿದ ರೀತಿಗೆ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ನಮ್ಮ ನಾಯಕರಾದ ಮಾನ್ಯ ಕುಮಾರಸ್ವಾಮಿಯವರಿಗೆ ಸಲ್ಲಿಸುತ್ತೇನೆ. ಇಲ್ಲಿ ಒಂದು ಮಾತು ಇದೆ, ಜನರು ಬದಲಾವಣೆಯನ್ನು ಬಯಸಿದ್ದಾರೆ. ಕೇವಲ ಬದಲಾವಣೆ ಅಲ್ಲ, ಎಲ್ಲರ ಕಣ್ಣಿಗೆ ಕಾಣುವಂಥ ಬದಲಾವಣೆಯನ್ನು ತರುವುದು ನನ್ನ ಸರ್ಕಾರದ ಉದ್ದೇಶವೆಂದು ಹೇಳಿದ್ದಾರೆ. ಸರ್ಕಾರ ಎಲ್ಲರ ಕಣ್ಣಿಗೆ ಕಾಣುವಂಥ ಬದಲಾವಣೆಯನ್ನು ತಂದರೆ ಖಂಡಿತವಾಗಿಯೂ ಕೂಡ ನಾವು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ನಮ್ಮ ಆಸೆಯೂ ಅದೇ, ನಮ್ಮ ನಿರೀಕ್ಷೆಯೂ ಅದೇ ಆಗಿದೆ. ಅದನ್ನು ತರುತ್ತಾರೋ ಬಿಡುತ್ತಾರೋ, ಅದಕ್ಕೆ ಇನ್ನೂ 5 ವರ್ಷಗಳ ಸಮಯವಿದೆ, ನಾವು

ಕಾದು ನೋಡುತ್ತೇವೆ. ಆದರೆ ಒಂದಂತೂ ಸತ್ಯ. ಸರ್ಕಾರದಲ್ಲಿ ಜನಗಳ ದೃಷ್ಟಿಯಲ್ಲಿ ಕಣ್ಣಿಗೆ ಕಾಣುವಂಥ ಬದಲಾವಣೆಯನ್ನು ತರುವುದು ಬೇರೆ. ಸಿದ್ದರಾಮಯ್ಯನವರು ಮಾಡಿದ ಅವರ ಸರ್ಕಾರದ ರಚನೆಯಲ್ಲಿ ಮಾತ್ರ ಕಣ್ಣಿಗೆ ಕಾಣುವಂಥ ಬದಲಾವಣೆ ತಂದಿರುವುದು ಸತ್ಯ. ಕಣ್ಣಿಗೆ ಕಾಣುವುದಷ್ಟೇ ಅಲ್ಲ, ಕಣ್ಣಿಗೆ ರಾಚುವಂಥ ಬದಲಾವಣೆಯನ್ನು ಸರ್ಕಾರದ ರಚನೆಯಲ್ಲಿ ಸಿದ್ದರಾಮಯ್ಯನವರು ಮಾಡಿದ್ದಾರೆ. ನನಗೆ ಈ ಸಂದರ್ಭದಲ್ಲಿ ದೇವರ ದಾಸಿಮಯ್ಯನವರ ಒಂದು ವಚನ ಜ್ಞಾಪಕಕ್ಕೆ ಬರುತ್ತದೆ. ಎಷ್ಟು ಜಾಣ್ಮೆಯಿಂದ, ಎಷ್ಟು ಚತುರತೆಯಿಂದ ಸಿದ್ದರಾಮಯ್ಯನವರು ಸರ್ಕಾರ ರಚನೆ ಮಾಡಿರುವುದನ್ನು ನೋಡಿದರೆ ದೇವರದಾಸಿಮಯ್ಯನವರ ಒಂದು ವಚನ ಜ್ಞಾಪಕಕ್ಕೆ ಬರುತ್ತದೆ. ಆ ವಚನದಲ್ಲಿ ವಚನಕಾರು ಹೀಗೆ ಹೇಳಿದ್ದಾರೆ:

"ಮರದೊಳಗೆ ಮಂದಾಕಿನಿಯ ಉರಿಯದಂತಿರಿಸಿದೆ,
ನೊರೆ ಹಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ,
ಶರೀರದೊಳಗೆ ಆತ್ಮವ ಕಾಣದಂತಿರಿಸಿದೆ,
ನೀ ಬೆರೆಸುವ ಪರಿಗೆ ಬೆರಗಾದೆನಯ್ಯ ರಾಮನಾಥ"

ಅಂದರೆ ಮರದಲ್ಲಿ ಬೆಂಕಿ ಇರುತ್ತದೆ, ಆದರೆ ದೇವರು ಅದು ಯಾರಿಗೂ ಕಾಣದ ಹಾಗೆ ಇಟ್ಟುಬಿಟ್ಟಿದ್ದಾರೆ, ಹಾಲೊಳಗೆ ತುಪ್ಪ ಇರುತ್ತದೆ, ಆದರೆ ಅದೂ ಕೂಡ ಯಾರ ಕಣ್ಣಿಗೂ ಕಾಣುವುದಿಲ್ಲ, ದೇವರು ಅದನ್ನು ಹಾಲೊಳಗೆ ಇಟ್ಟುಬಿಟ್ಟಿದ್ದಾರೆ, ಹಾಗೆಯೇ ಶರೀರದೊಳಗೆ ಆತ್ಮವಿದ್ದರೂ ಅದು ಯಾರ ಕಣ್ಣಿಗೂ ಕಾಣುವುದಿಲ್ಲ, ಹೀಗೆ ನೀನು ಬೆರೆಸುವ ಪರಿಗೆ ಬೆರಗಾದೆನು ಎಂದು ದೇವರಿಗೆ ವಚನಕಾರನಾದ ದಾಸಿಮಯ್ಯ ಹೇಳುತ್ತಾನೆ. ಈ ರೀತಿಯಲ್ಲಿ, ಸಿದ್ದರಾಮಯ್ಯನವರು ಎಂಥ ಬುದ್ಧಿವಂತಿಕೆಯಿಂದ ಸರ್ಕಾರ ರಚನೆ ಮಾಡಿದ್ದಾರೆ ಎಂದರೆ, ಆ ವಚನದ ಪ್ರೇರಣೆಯಿಂದ ನಾನು ಒಂದು ಹೊಸ ವಚನವನ್ನು ಹೇಳಬೇಕು ಎನಿಸುತ್ತದೆ. ಅದೇನೆಂದರೆ:

"ಕಾಂಗ್ರೆಸ್ ಸರ್ಕಾರದಲ್ಲಿ ಜನತಾ ಪರಿವಾರವ ಕಾಣದಂತೆ ತುರುಕಿದೆ,
ಆಪ್ತರಿಗೆ ಆಯಕಟ್ಟಿನ ಖಾತೆಗಳನ್ನು ಸದ್ದಿಲ್ಲದಂತೆ ನೀಡಿದೆ,
ಹಿರಿಯ ಕಾಂಗ್ರೆಸ್ಸಿಗರನ್ನು ಅಲಕ್ಷಿಸಿಯೂ ಅಮ್ಮನ ಅಂಕಿತ ಪಡೆದುಕೊಂಡುಬಿಟ್ಟೆ
ನೀ ಸರ್ಕಾರ ರಚಿಸಿದ ಪರಿಗೆ ಬೆರಗಾದೆನೋ ಅಣ್ಣ ಸಿದ್ದರಾಮಣ್ಣ"

ಎಂದು ಹೊಸ ವಚನ ಬರೆಯಬೇಕು ಅನಿಸುತ್ತದೆ.

ಶ್ರೀ ಎನ್.ಚಲುವರಾಯಸ್ವಾಮಿ : ಸಿದ್ದರಾಮಯ್ಯನವರು ಕೇಳಿಸಿ-ಕೊಳ್ಳಲಿಲ್ಲವೆಂದು ಕಾಣುತ್ತದೆ.

ಶ್ರೀ ವೈ.ಎಸ್.ವಿ.ದತ್ತ : ಸಿದ್ದರಾಮಯ್ಯನವರು ಕೇಳಿಸಿಕೊಳ್ಳಲಿಲ್ಲವೇ? ಹಾಗಾದರೆ, ಸಿದ್ದರಾಮಯ್ಯನವರೇ, ಇನ್ನೊಂದು ಸಲ ಹೇಳುತ್ತೇನೆ. ದೇವರ ದಾಸಿಮಯ್ಯನವರ ಒಂದು ವಚನವಿದೆ:

"ಮರದೊಳಗೆ ಮಂದಾಕಿನಿಯ ಉರಿಯದಂತಿರಿಸಿದೆ,
ನೊರೆ ಹಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ,
ಶರೀರದೊಳಗೆ ಆತ್ಮವ ಕಾಣದಂತಿರಿಸಿದೆ,
ನೀ ಬೆರೆಸುವ ಪರಿಗೆ ಬೆರಗಾದೆನಯ್ಯ ರಾಮನಾಥ"

ಅಂದರೆ ಮರದಲ್ಲಿ ಬೆಂಕಿ ಇರುತ್ತದೆ, ಆದರೆ ದೇವರು ಅದು ಯಾರಿಗೂ ಕಾಣದ ಹಾಗೆ ಇಟ್ಟುಬಿಟ್ಟಿದ್ದಾರೆ, ಹಾಲೊಳಗೆ ತುಪ್ಪ ಇರುತ್ತದೆ, ಆದರೆ ಅದೂ ಕೂಡ ಯಾರ ಕಣ್ಣಿಗೂ ಕಾಣುವುದಿಲ್ಲ, ದೇವರು ಅದನ್ನು ಹಾಲೊಳಗೆ ಇಟ್ಟುಬಿಟ್ಟಿದ್ದಾರೆ, ಹಾಗೆಯೇ ಶರೀರದೊಳಗೆ ಆತ್ಮವಿದ್ದರೂ ಅದು ಯಾರ ಕಣ್ಣಿಗೂ ಕಾಣುವುದಿಲ್ಲ, ಹೀಗೆ ನೀನು ಬೆರೆಸುವ ಪರಿಗೆ ಬೆರಗಾದೆನು ಎಂದು ದೇವರಿಗೆ ವಚನಕಾರನಾದ ದಾಸಿಮಯ್ಯ ಹೇಳುತ್ತಾನೆ. ನಾನು ಸಿದ್ದರಾಮಯ್ಯನವರಿಗೆ ಏನು ಹೇಳುತ್ತಿದ್ದೇನೆ ಎಂದರೆ ನೀವು ಅದೇ ರೀತಿ ಸರ್ಕಾರವನ್ನು ಎಷ್ಟು ಚೆನ್ನಾಗಿ ರಚನೆ ಮಾಡಿದ್ದೀರಿ ಎಂದರೆ:

"ಕಾಂಗ್ರೆಸ್ ಸರ್ಕಾರದಲ್ಲಿ ಜನತಾ ಪರಿವಾರವ ಕಾಣದಂತೆ ತುರುಕಿದೆ,
ಆಪ್ತರಿಗೆ ಆಯಕಟ್ಟಿನ ಖಾತೆಗಳನ್ನು ಸದ್ದಿಲ್ಲದಂತೆ ನೀಡಿದೆ,
ಹಿರಿಯ ಕಾಂಗ್ರೆಸ್ಸಿಗರನ್ನು ಅಲಕ್ಷಿಸಿಯೂ ಅಮ್ಮನ ಅಂಕಿತ ಪಡೆದುಕೊಂಡುಬಿಟ್ಟೆ
ನೀ ಸರ್ಕಾರ ರಚಿಸಿದ ಪರಿಗೆ ಬೆರಗಾದೆನೋ ಅಣ್ಣ ಸಿದ್ದರಾಮಣ್ಣ"

ಎಂದು ಹೇಳಿ ತಮಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ವಚನವನ್ನು ರಚನೆ ಮಾಡಿರುವುದಕ್ಕೆ ದತ್ತರವರಿಗೆ ಮೆಚ್ಚುಗೆಯನ್ನು ಕೊಡಬೇಕು. ಆದರೆ ಆ ವಚನದಲ್ಲಿ ಇರುವ ವಿಷಯ ಸತ್ಯಕ್ಕೆ ದೂರವಾದುದು. ಅದು ಸತ್ಯವಲ್ಲ. ನಮ್ಮಲ್ಲಿ ಒಡಕು ಉಂಟು ಮಾಡುವಂಥ ಪ್ರಯತ್ನ ಮಾಡುತ್ತಿದ್ದೀರಲ್ಲ,- ದುರುದ್ದೇಶದಿಂದ

ಇದನ್ನು ಮಾಡುತ್ತಿದ್ದೀರಿ. ಇಂಥ ಪ್ರಯತ್ನಗಳನ್ನು ನಾನು ದತ್ತಾರವರಿಂದ ನಿರೀಕ್ಷೆ ಮಾಡಿರಲಿಲ್ಲ. ದತ್ತ ನನಗೆ ಬಹಳ ಒಳ್ಳೆಯ ಸ್ನೇಹಿತ, ಒಬ್ಬ ಆತ್ಮೀಯ ಎಂದುಕೊಂಡರೂ ನೀವು ನಮ್ಮಲ್ಲೇ ಒಡಕು ಉಂಟು ಮಾಡುವಂಥ ಪ್ರಯತ್ನ ಮಾಡುತ್ತಿದ್ದೀರಲ್ಲ? ಇದನ್ನು ಮಾಡುವಂಥ ಪ್ರಯತ್ನ ಮಾಡಬೇಡಿ. ನಮ್ಮವರೆಲ್ಲರಿಗೂ ನನ್ನ ಬಗ್ಗೆ ಅರ್ಥವಾಗಿದೆ. ನಾವೆಲ್ಲ ಕಾಂಗ್ರೆಸ್ಸಿನವರು.

(ಸಭೆಯಲ್ಲಿ ನಗು)

ನೀವು ಏಕೆ ನಗುತ್ತಿದ್ದೀರೆಂದು ನನಗೆ ಅರ್ಥವಾಗಲಿಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ : ಮರೆತು ಕಾಂಗ್ರೆಸ್ಸಿನವರು, ನಾವು ಎಂದು ಹೇಳುವುದಕ್ಕೆ ಹೋಗಿಬಿಟ್ಟರಿ.

ಶ್ರೀ ಬಿ.ಜಡ್.ಜಮೀರ್ ಅಹಮ್ಮದ್ ಖಾನ್ : ಮನಸ್ಸಿನಲ್ಲಿ ಇರುವುದು ಯಾವತ್ತೂ ಹೋಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಪ್ಪಾ, ನೀನೂ ಅಲ್ಲಿಂದ ಬಂದುಬಿಡುವುದಕ್ಕೆ ಹೊರಟಿದ್ದೆ.

ಶ್ರೀ ಬಿ.ಜಡ್.ಜಮೀರ್ ಅಹಮ್ಮದ್ ಖಾನ್ : ನಾನು ಯಾವತ್ತು ಹೊರಟಿದ್ದೆ?

ಶ್ರೀ ಸಿದ್ದರಾಮಯ್ಯ : ಯಾವತ್ತು ಹೊರಟಿದ್ದಿರಿ ಎಂದು ಹೇಳಲೇ? ಬೇಡ, ಈಗ ಸದ್ಯಕ್ಕೆ ಅಲ್ಲೇ ಇರಿ. ನಿಮ್ಮನ್ನು ಬಹಳ ನಂಬಿಕೊಂಡಿದ್ದಾರೆ, ಮುಸ್ಲಿಂ ಓಟನ್ನು ಕೊಡಿಸುತ್ತಾರೆ ಎಂದು ಬಹಳ ಪ್ರೀತಿಯಿಂದ ಕಾಣುತ್ತಿದ್ದಾರೆ, ನೀವು ಸದ್ಯಕ್ಕೆ ಅಲ್ಲೇ ಇರಿ.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಸಿ.ಟಿ.ರವಿಯವರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು : ರವಿಯವರೇ ಕುಳಿತುಕೊಳ್ಳಿ, ಅವರು ಮಾತನಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ರವಿಯವರಿಗೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ವೈ.ಎಸ್.ವಿ.ದತ್ತ : ನಾನು ಸಿದ್ದರಾಮಯ್ಯನವರಿಗೆ ಹೇಳುತ್ತೇನೆ, ನಾನು ಅವರ ಮೇಲೆ ಪ್ರೀತಿಯಿಂದ ಹೇಳಿದೆನೇ ಹೊರತು ಅವರ ಪಕ್ಷ ಒಡೆಯುವ ಉದ್ದೇಶ ನನಗಿಲ್ಲ.

ರೂಪಾಯಿಗಳು ಬೇಕೆಂದು ಬರೆದುಕೊಟ್ಟರು. ಆಗ ಸರ್ಕಾರದ ಒಂದು ವರ್ಷದ ಒಟ್ಟು ಆದಾಯವು ಎಷ್ಟು ಇತ್ತು ಗೊತ್ತೇ ಕೇವಲ 250 ಲಕ್ಷ ರೂಪಾಯಿಗಳು. ಆದರೆ ವಿಶ್ವೇಶ್ವರಯ್ಯನವರು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಬೇಕಾದರೆ 267 ಲಕ್ಷ ರೂಪಾಯಿಗಳು ಬೇಕೆಂದು ಹೇಳಿದರು. ಆಗ ಅವರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ವಿಶ್ವೇಶ್ವರಯ್ಯನವರು estimate ಮಾಡಿ proposal ಅನ್ನು ಕಳುಹಿಸಿಕೊಟ್ಟರೆ ಅವರು ಕೇಳಿದ್ದಕ್ಕೆ ಆಗಿನ Finance Secretary ಯವರು strongly worded note ಅನ್ನು ಹಾಕಿದರು. ನಾನು ಅವರ ಹೆಸರನ್ನು ಮರೆತಿದ್ದೇನೆ. ಈ ಬಗ್ಗೆ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ವಿಶ್ವೇಶ್ವರಯ್ಯನವರು ಹೇಳಿದ ಹಾಗೇ ನೀವು ಕನ್ನಂಬಾಡಿ ಅಣೆಕಟ್ಟನ್ನು ಕಟ್ಟಿದರೆ ನಮ್ಮ ದುಡ್ಡನ್ನು ತೆಗೆದುಕೊಂಡು ಹೋಗಿ ಸುರಿದರೆ ದುಡ್ಡು ಎಲ್ಲವೂ ನೀರು ಪಾಲು ಆಗುತ್ತದೆ ಎಂದು ಈ ಪದವನ್ನು ಬಳಸಿ ಬರೆದರು. ನೀವು ನನ್ನನ್ನು Chief Engineer ಆಗಿ ಏತಕ್ಕಾಗಿ ಕರೆಸಿಕೊಂಡಿರಿ, ನಾನು ಅಲ್ಲಿಯೇ ಇದ್ದೆ, ನಾನು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದರು. ಕೊನೆಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಇಲ್ಲ ನೀವು ಮಾಡಿ ನಾನು ದುಡ್ಡನ್ನು ಕೊಡುತ್ತೇನೆಂದು ಹೇಳಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರನ್ನು ಕರ್ನಾಟಕ ರಾಜ್ಯದ ಜನರು, ಕಾವೇರಿ ಕೊಳ್ಳದ ಜನರು, ಇವತ್ತು ಅವರನ್ನು ಜ್ಞಾಪಿಸಿಕೊಳ್ಳಬೇಕಾಗುತ್ತದೆ ಮತ್ತು ಅವರನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಮಂಡ್ಯದವರಂತೂ ಮರೆಯುವ ಹಾಗಿಲ್ಲ. ಹಾಗಾಗಿ 267 ಲಕ್ಷ ರೂಗಳನ್ನು ಖರ್ಚು ಮಾಡಿ ಅಣೆಕಟ್ಟನ್ನು ಕಟ್ಟಿದರಲ್ಲಾ ಈ ತೀರ್ಮಾನ ನನಗೆ ಬೇಕಾಯಿತು. ನಾನು ಅದಕ್ಕಾಗಿ ಹೇಳುತ್ತಿದ್ದೇನೆ. ಈ ಬಗ್ಗೆ ಮಾಧ್ಯಮಗಳು ಅಷ್ಟೇ. ಮಾನ್ಯ ರಮೇಶ್ ಕುಮಾರ್‌ರವರು ಮಾಧ್ಯಮಗಳ ಬಗ್ಗೆ ಬಹಳ ನೊಂದುಕೊಂಡರು. ನಾವು ಎಲ್ಲಿ ಹೇಗೆ ಯಾವುದನ್ನು ತೆಗೆದುಕೊಳ್ಳಬೇಕು. ನಮ್ಮ ಆತ್ಮಶುದ್ಧಿ ಇತ್ತು. ನಾವು ಮಾಡುತ್ತಿರುವಂತಹ ಕೆಲಸವು ಜನಪರವಾಗಿದ್ದರೆ ಅದರಲ್ಲಿ ಯಾವುದೇ ದೋಷವಿಲ್ಲವೆಂದರೆ ನಾವು ಧೈರ್ಯವಾಗಿ ಯಾರಿಗೂ ಅಂಜಿಕೊಳ್ಳಬೇಕಾಗಿಲ್ಲ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಇದೇ ವಿಶ್ವೇಶ್ವರಯ್ಯನವರು ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಮಾಡಿದರು. ಅಲ್ಲಿಯ ಸದಸ್ಯರಾದ ಶ್ರೀ ಎಂ.ಜಿ.ಅಪ್ಪಾಜಿಯವರು ಇದ್ದಾರೆ. ಇವತ್ತು ನಾವು ಅವರನ್ನು ಸ್ಮರಿಸಿಕೊಳ್ಳಬೇಕು.

ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಮಾಡಿದರು. ಅಲ್ಲಿ ಎಷ್ಟು ಜನರು ಕೆಲಸವನ್ನು ಮಾಡುತ್ತಿದ್ದಾರೆ. ಕಾರ್ಖಾನೆಯನ್ನು ಮಾಡಿದಾಗ ಅಲ್ಲಿ ಕಲ್ಲಿದ್ದಿಲ್ಲಿನಲ್ಲಿ ಕಬ್ಬಿಣವನ್ನು ಕಾಯಿಸುತ್ತಿದ್ದರು. ಯುದ್ಧವು ಬಂದು ಕಲ್ಲಿದ್ದಲು supply ಬರುವುದು ನಿಂತುಹೋಯಿತು. ಆದರೆ ಸರ್.ಎಂ.ವಿ.ರವರು ಎಷ್ಟು ಹಠಗಾರರು ಎಂದರೆ ಕಲ್ಲಿದ್ದಲು ಬಾರದೇ ಇರುವುದರಿಂದ ಭದ್ರಾವತಿಯ ಕಾರ್ಖಾನೆಯನ್ನು close ಮಾಡಿಬಿಡಿ ಎಂದು ಸರ್ಕಾರವು ಹೇಳಿತು. 'ನಾನು ಕಬ್ಬಿಣದ ಕಾರ್ಖಾನೆಯನ್ನು close ಮಾಡುವುದಿಲ್ಲ. ನಾನು ಕಾರ್ಖಾನೆಯನ್ನು ನಡೆಸುತ್ತೇನೆ' ಎಂದು ಹೇಳಿದರು. ಏನು ಮಾಡುತ್ತೀರಿ ಎಂದರೆ ನಾನು ಸೌದೆ ಒಳಗಡೆ ಕಬ್ಬಿಣವನ್ನು ಕಾಯಿಸಿ factory ಅನ್ನು ನಡೆಸುತ್ತೇನೆಂದು ಹೇಳಿದರು. ಇದು ಎಂತಹ ತೀರ್ಮಾನ ಮಾನ್ಯ ಸಭಾಧ್ಯಕ್ಷರೆ, 'ಸೌದೆಯನ್ನು ಸುಟ್ಟು ಸೌದೆಯಲ್ಲಿ ಕಬ್ಬಿಣವನ್ನು ಕರಗಿಸಿ ನಾನು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ನಡೆಸುತ್ತೇನೆ' ಎಂದು ಹೇಳಿದರು. ಅವರು ತೀರ್ಮಾನವನ್ನು ಮಾಡಿ ಸೌದೆ ಒಳಗಡೆ ಕಾಯಿಸಿ ಕಾರ್ಖಾನೆಯನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿದರು. ಈ ಬಗ್ಗೆ ಪತ್ರಿಕೆಯವರು ಬರೆದರು, ಬರೆದರು ಮಾಧ್ಯಮದವರು ವಿಶ್ವೇಶ್ವರಯ್ಯನವರನ್ನೇ ಬಿಟ್ಟಿಲ್ಲ. ಈ ಬಗ್ಗೆ ಅನೇಕ ಸಂಪಾದಕೀಯ ಬಂದುಬಿಟ್ಟಿತು. ವಿಶ್ವೇಶ್ವರಯ್ಯನವರು ಇದರಲ್ಲಿ ಭ್ರಷ್ಟಾಚಾರ ನಡೆಸಿರುವ ಸಾಧ್ಯತೆ ಇದೆ. ವಿಶ್ವೇಶ್ವರಯ್ಯನವರ ಬಗ್ಗೆ ಸಂಪಾದಕೀಯದಲ್ಲಿ ಗ್ಯಾರಂಟಿಯಾಗಿ factory ನಷ್ಟಕ್ಕೆ ಈಡಾಗುತ್ತದೆ ಎಂದು ಸಂಪಾದಕೀಯದಲ್ಲಿ ಬಂತು. ಆದರೆ ಮಾನ್ಯ ಸಭಾಧ್ಯಕ್ಷರೆ, ತಮಾಷೆ ಏನೆಂದರೆ ಸತ್ಯ ಅವತ್ತಿನ ಸಂಪಾದಕೀಯದಲ್ಲಿತ್ತು. ಈ ಬಗ್ಗೆ ಸತ್ಯ ಆಮೇಲೆ ಗೊತ್ತಾಯಿತು. ವಿಶ್ವೇಶ್ವರಯ್ಯನವರು ಸೌದೆಯನ್ನು ಸುಟ್ಟರು, ಕಬ್ಬಿಣವನ್ನು ಕರಗಿಸಿದರು, ಕಾರ್ಖಾನೆಯನ್ನು ನಡೆಸಿದರು, ಕಾರ್ಖಾನೆ ಲಾಭವನ್ನು ಮಾಡಿಬಿಟ್ಟಿತು. ಕಾರ್ಖಾನೆಯು ಲಾಭವನ್ನು ಮಾಡಿದ ಮೇಲೆ ವಿಶ್ವೇಶ್ವರಯ್ಯನವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಸನ್ಮಾನ ಮಾಡಿ ನೀವು ಮಾಡಿರುವಂತಹ ಅದ್ಭುತವಾದಂತಹ ಸಾಧನೆಗೆ ನಾವು ದುಡ್ಡು ಕೊಡುತ್ತಿದ್ದೇವೆ. ನಮ್ಮದು ತಪ್ಪಾಯಿತು ಎಂದು ಹೇಳಿ ಅವರಿಗೆ ಕಾಣಿಕೆಯನ್ನು ಕೊಟ್ಟು ಸನ್ಮಾನವನ್ನು ಮಾಡಿದರು. ಅದೇ ದುಡ್ಡನ್ನು ವಿಶ್ವೇಶ್ವರಯ್ಯನವರು ಕೆ.ಆರ್.ಸರ್ಕಲ್‌ನಲ್ಲಿ ಇವತ್ತು ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜನ್ನು ಕಟ್ಟವುದಕ್ಕೆ ಕೊಟ್ಟರು. ಇದು ಇತಿಹಾಸವಿದೆ. ಹಾಗಾಗಿ

ದಿಟ್ಟನಾಗಿರುವಂತಹ ಆಡಳಿತಗಾರ ನೇತೃತ್ವವನ್ನು ವಹಿಸಿದರೆ ದುಡ್ಡು ಕಾಸು ಹೊಂಚುಕೊಂಡು ಮಾಡುತ್ತಾನೆ. ಮಾನ್ಯ ಯಡಿಯೂರಪ್ಪನವರ ಒಂದು ಇಷ್ಟವಾದ ವಚನ. "ಕೊಟ್ಟ ಕುದುರೆಯನ್ನು ಏರಲರಿಯದವನು ವೀರನ್ನೂ ಅಲ್ಲ ಧೀರನೂ ಅಲ್ಲ"ಈ ಮಾತನ್ನು ಮಾನ್ಯ ಯಡಿಯೂರಪ್ಪನವರು ಸದಾ ಹೇಳುತ್ತಿರುತ್ತಾರೆ. ಇದು ಅಲ್ಲಮ ಪ್ರಭುವಿನ ವಚನವಾಗಿದೆ. ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಹೇಳುತ್ತೇನೆ ನೀವು ವೀರರೂ ಮತ್ತು ಧೀರೂ ಎಂದು ಅಂದುಕೊಂಡಿದ್ದೇನೆ. ಬಿಜೆಪಿ ಸರ್ಕಾರವು ನಿಮಗೆ ಎಂತಹ ಕುದುರೆಯು ಕೊಟ್ಟು ಹೋಗಿದೆಯೋ ನನಗೆ ಗೊತ್ತಿಲ್ಲ. ಅದು ಸತ್ತ ಕುದುರೆಯೋ, ಸೋತ ಕುದುರೆಯೋ, ಸೊರಗಿದ ಕುದುರೆಯೋ ನನಗೆ ಗೊತ್ತಿಲ್ಲ. ಅವರು ಬರಿದಾದ ಬೊಕ್ಕಸವನ್ನು ನನಗೆ ಬಿಟ್ಟುಹೋಗಿದ್ದಾರೆ ಏನು ಮಾಡೋಣವೆಂದು ನೆಪ ಹೇಳುತ್ತಾರೆ. ಅವರು ಎಂತಹ ಕುದುರೆಯನ್ನು ಕೊಟ್ಟು ಹೋಗಿದ್ದಾರೆಯೋ ನನಗೆ ಗೊತ್ತಿಲ್ಲ. ನಾನು ನೀವು ವೀರ, ಧೀರ ಸವಾರ ಎಂದು ಅಂದುಕೊಂಡಿದ್ದೇನೆ. ಆದ್ದರಿಂದ "ಕೊಟ್ಟ ಕುದುರೆಯನ್ನು ಏರಲರಿಯದವನು ಧೀರನೂ ಅಲ್ಲ ಶೂರನೂ ಅಲ್ಲ" ಎಂದು ನೀವು ಅಂದುಕೊಳ್ಳಬೇಡಿ. ಎಂತಹ ಕುದುರೆಯನ್ನು ಕೊಟ್ಟಿದ್ದಾರಪ್ಪ ಆದರೂ ನೋಡೋಣ ಸವಾರಿಯನ್ನು ಮಾಡಿ ತೋರಿಸುತ್ತೇನೆಂದು ಹೇಳಿ ನೀವು ನಮ್ಮೆಲ್ಲರ ಆಸೆ ನಿರೀಕ್ಷೆಯನ್ನು ಪೂರೈಸಿ ಎಂದು ಹೇಳಿ ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ. ನಾನು ಹಣಕಾಸಿನ ಬಗ್ಗೆ ಒಂದು ಪಾಯಿಂಟ್ ಅನ್ನು ಹೇಳುತ್ತೇನೆ. ಜಾಗತಿಕ ಬಂಡವಾಳ ಹೂಡಿಕೆಯ ಬಗ್ಗೆ ಒಂದು ಲೈನ್ ಹೇಳುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ. ಕಾರಜೋಳರವರು ಪಾಪ ಆತ್ಮ ವಂಚನೆಯಿಂದ ಹೇಳಿದರು. ಹಿಂದೆ ಜಾಗತಿಕ ಬಂಡವಾಳ ಹೂಡಿಕೆಯ ಒಳಗಡೆ ನಾನು documents ಅನ್ನು ತರಲಿಲ್ಲ ಮಾನ್ಯ ಸಭಾಧ್ಯಕ್ಷರೆ, ಬೇಕಾದರೆ ನಾಳೆ ಇದ್ದರೆ ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ನಾನು ಈ ಬಗ್ಗೆ ಒಂದು ಪಟ್ಟಿಯನ್ನು ಮಾಡಿದ್ದೇನೆ. ಈ ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಎಷ್ಟೆಷ್ಟು ಘೋಷಣೆಗಳು ಆಯಿತು, ಎಷ್ಟೆಷ್ಟು ಸಾವಿರ ಎಕರೆ ರೈತರ ಫಲವತ್ತಾದ ಜಮೀನುಗಳು acquire ಆಯಿತು, ಅವುಗಳಿಗೆ ಎಷ್ಟೆಷ್ಟು ಬಂಡವಾಳ ಹೂಡಿ ಎಷ್ಟೆಷ್ಟು ಜನರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಯಾವ ಯಾವ ಕಂಪನಿಗಳು ಬಂದಿದ್ದವು, ಅವುಗಳ ಹಣೆಬರಹ ಎಲ್ಲಿಗೆ ಬಂದು

ನಿಂತುಕೊಂಡಿದೆ ಎನ್ನುವುದರ ಬಗ್ಗೆ ಒಂದು ಸಮಗ್ರವಾದ ಮಾಹಿತಿಯನ್ನು ಮಾಡಿಬಿಟ್ಟಿದ್ದೇನೆ. ಅದು ಅಧಿಕೃತವಾದ ಅಂಕಿ ಅಂಶಗಳು ಆಗಿದೆ ಅದನ್ನು ನಾನು ತಮಗೆ ನಾಳೆ ದಿವಸ ತಲುಪಿಸುತ್ತೇನೆ. ಇದನ್ನು ತಾವು ಸರ್ಕಾರಕ್ಕೆ ಮುಟ್ಟಿಸಬೇಕು ಏಕೆಂದರೆ ಮುಂದಿನ ಸಲ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶವನ್ನು ಮಾಡುತ್ತಿದ್ದಾರೆ. ಅದಕ್ಕಿಂತ ಮುಂಚೆ ಈ ಬಗ್ಗೆ ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಒಳ್ಳೆಯದಾಗುತ್ತದೆ. ಏಕೆಂದರೆ ಒಂದು ಅಂಕಿ ಅಂಶದ ಬಗ್ಗೆ ಹೇಳುತ್ತೇನೆ. 1,79,000 ಎಕರೆ ರೈತರ ಫಲವತ್ತಾದ ಕಬ್ಬಿನ ಗದ್ದೆ, ಅಡಿಕೆ ತೋಟ, ತೆಂಗಿನ ತೋಟ ನೀರಾವರಿ ಜಮೀನುಗಳ ಆದಿಯಾಗಿ acquire ಮಾಡಿಕೊಂಡುಬಿಟ್ಟಿದರು. ಅದರ ಫಲ ಎಲ್ಲಿಯಾದರೂ ಬಂದಿದೆಯೇ ಎಂದಾರೂ ನೋಡಬೇಕಲ್ಲವೇ? ರೈತರಿಂದ ಆ ಜಮೀನುಗಳನ್ನು ಕಿತ್ತುಕೊಂಡುಬಿಟ್ಟಿದ್ದಾರೆ. ಅದರಿಂದ ಏನಾದರೂ ಬಂದಿದೆಯೇ ಎಂದು ನೋಡಬೇಕಲ್ಲವೇ? ಆದ್ದರಿಂದ ಇದನ್ನು ಗಮನಿಸಬೇಕೆಂದು ಹೇಳಿ ಇದರ ಬಗ್ಗೆ ತಮಗೆ ಕಳುಹಿಸಿಕೊಡುತ್ತೇನೆ. ತಾವು ಸರ್ಕಾರಕ್ಕೆ ಕಳುಹಿಸಿಕೊಡಿ.

ಅಧ್ಯಕ್ಷರು: ಮಾನ್ಯ ದತ್ತರವರೆ, ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧ ಗಂಟೆಯಾಗಿದೆ.

ಶ್ರೀ ವೈ.ಎಸ್.ವಿ.ದತ್ತ: ಮಾನ್ಯ ಸಭಾಧ್ಯಕ್ಷರೆ, ಬೇಕಾದರೆ ನಾನು ನಮ್ಮ ಪಕ್ಷದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ತಾವು ಬೇಗ ಭಾಷಣವನ್ನು ಮುಗಿಸಿ.

ಶ್ರೀ ವೈ.ಎಸ್.ವಿ.ದತ್ತ: ಮಾನ್ಯ ಸಭಾಧ್ಯಕ್ಷರೆ, ಹೈದರಾಬಾದ್-ಕರ್ನಾಟಕಕ್ಕೆ 371(ಜೆ) ಪ್ರಕಾರ ಈಗ ವಿಶೇಷ ಸ್ಥಾನಮಾನವು ಸಿಕ್ಕಿದೆ. ನಾನು ಒಂದು ಅನುಮಾನವನ್ನು ವ್ಯಕ್ತಪಡಿಸುತ್ತಿದ್ದೇನೆ. ಡಾ||ಡಿ.ಎಂ.ನಂಜುಂಡಪ್ಪನವರ ವರದಿಯ ಒಳಗಡೆ ಅದು ಇವತ್ತು ನಮ್ಮ ಮುಂದಿದೆ. ಇದುವರೆಗೂ ನಾವು ಏನು ಮಾಡುತ್ತಿದ್ದೇವೆಂದರೆ, ಡಾ||ಡಿ.ಎಂ.ನಂಜುಂಡಪ್ಪನವರ ವರದಿಯನ್ನು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಅದು ಒಂದು doctrine ಅಥವಾ? Bible ಎಂದಾದರೂ ಇಟ್ಟುಕೊಳ್ಳಿ. ಈಗ ಎಲ್ಲಾ ಸರ್ಕಾರಗಳು ಕೂಡ ಡಾ||ಡಿ.ಎಂ.ನಂಜುಂಡಪ್ಪನವರ ವರದಿಯ ಅನುಷ್ಠಾನಕ್ಕೆ ಹಣ ಬಿಡುಗಡೆ ಎಂದು ಬಜೆಟ್‌ನಲ್ಲಿ ಹೇಳಿದರು. ಇಲ್ಲಿ ನನ್ನ ಪ್ರಶ್ನೆ ಮತ್ತು ಅನುಮಾನವೇನೆಂದರೆ, ಡಾ||ಡಿ.ಎಂ.ನಂಜುಂಡಪ್ಪನವರ ವರದಿಯೊಳಗಡೆ ಹೈದರಾಬಾದ್-ಕರ್ನಾಟಕದ

ಎಷ್ಟು ಪ್ರದೇಶಗಳು, ಎಷ್ಟು ಹೋಬಳಿಗಳು, ಎಷ್ಟು ಹಳ್ಳಿಗಳು, ಯಾವ ಯಾವ ತಾಲ್ಲೂಕುಗಳು, ಹೋಬಳಿಗಳು ಹಿಂದುಳಿದಿವೆ ಎಂದು ಬಂದ ಮೇಲೆ ಅವುಗಳಿಗೆ ವಿಶೇಷವಾದಂತಹ ಸ್ಥಾನಮಾನವನ್ನು ಮತ್ತೊಂದು ರೂಪದಲ್ಲಿ ನೀವು ಕೊಡುವಾಗ ಆ ವರದಿಯ ಒಳಗಡೆ ಹೈದರಾಬಾದ್-ಕರ್ನಾಟಕದ ಒಳಗಡೆ ನನ್ನ ಕ್ಷೇತ್ರವಾಗಿರುವಂತಹ ಕಡೂರು ಸಹ ಸೇರಿಕೊಂಡಂತೆ ಈ ಕಡೆ ಹಳೆ ಮೈಸೂರಿನ ಅನೇಕ ತಾಲ್ಲೂಕು ಮತ್ತು ಹೋಬಳಿಗಳು ಕೂಡ ಹಿಂದುಳಿದಿವೆ. ಹಾಗಾಗಿ ಈ ಬಗ್ಗೆ ನಾನು ಹೇಳುತ್ತೇನೆ. ಡಾ॥ಡಿ.ಎಂ.ನಂಜುಂಡಪ್ಪನವರ ವರದಿಯನ್ನು ಏನಾದರೂ ಪುನರ್ ಪರಿಶೀಲನೆಗೆ ಒಳಪಡಿಸುವುದು ಒಳ್ಳೆಯದಲ್ಲವೇ? ಹೈದರಾಬಾದ್-ಕರ್ನಾಟಕಕ್ಕೆ ನೀವು ವಿಶೇಷವಾದಂತಹ ಸ್ಥಾನಮಾನವನ್ನು ಕೊಟ್ಟಮೇಲೆ ಮಾಡುವುದು ಒಳ್ಳೆಯದಲ್ಲವೇ? ಆಗ ಅಲ್ಲಿಗೆ ಕೊಟ್ಟಿರುವಂತಹ ಹೆಚ್ಚಿಗೆ ಸವಲತ್ತನ್ನು ಅವರಿಗೆ ಕೊಡುವುದಾದರೆ ಡಾ॥ಡಿ.ಎಂ.ನಂಜುಂಡಪ್ಪನವರ ವರದಿಯಲ್ಲಿ ಕೊಟ್ಟಿರುವಂತಹ ಸವಲತ್ತನ್ನು ಸ್ವಲ್ಪ ಉಳಿದ ಕಡೆಗೆ ಏತಕ್ಕಾಗಿ ಹಂಚಬಾರದು ಎಂದು ನನ್ನ ಒಂದು ಆಶಯ ಮತ್ತು ಸಲಹೆಯಾಗಿದೆ.

ಅಧ್ಯಕ್ಷರು : ಮಾನ್ಯ ದತ್ತರವರೆ ತಾವು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧ ಗಂಟೆಯಾಯಿತು. ಇನ್ನು ಬಹಳ ಜನರು ಈ ಬಗ್ಗೆ ಮಾತನಾಡುವವರು ಇದ್ದಾರೆ. ಕೆಲವರಿಗೆ ಒಂದೊಂದು ಗಂಟೆಗಳ ಕಾಲ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ವೈ.ಎಸ್.ವಿ.ದತ್ತ : ನಾನು main ವಿಷಯಕ್ಕೆ ಇನ್ನೂ ಬಂದಿರುವುದಿಲ್ಲ. ಮಾನ್ಯ ಸಭಾಧ್ಯಕ್ಷರೆ, ಕಾವೇರಿ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಾನು ಉತ್ಸುಕನಾಗಿ ಬಂದಿರುವುದು ಅದು ಬಹಳ Important. ಅದನ್ನು ಮಾತನಾಡುವುದಕ್ಕಾಗಿ ನಾನು ಉತ್ಸುಕನಾಗಿ ಬಂದಿದ್ದೇನೆ. ದಯವಿಟ್ಟು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ತಮಗೆ ನಾನು ಕೈಮುಗಿಯುತ್ತೇನೆ. ಕಾವೇರಿ ವಿಷಯ ಬಹಳ important ಆಗಿದೆ.

ಅಧ್ಯಕ್ಷರು : ನೀವು ಕಥೆಯನ್ನು ಹೇಳಿಯೇ ಕಾಲವನ್ನು ಕಳೆಯುತ್ತಿದ್ದೀರಿ.

ಶ್ರೀ ವೈ.ಎಸ್.ವಿ.ದತ್ತ : ನಾನು ಕಥೆಯನ್ನು ಹೇಳುತ್ತಿಲ್ಲ ಸತ್ಯವನ್ನು ಹೇಳುತ್ತಿದ್ದೇನೆ. ಈ ಕಾವೇರಿಯ ವಿಷಯದ ಒಳಗಡೆ ಸರ್ಕಾರವು ಒಂದು

ಪದವನ್ನು ಸೇರಿಸಿತ್ತು. ಅದಕ್ಕೆ ನಾವು ಒಂದು ತಿದ್ದುಪಡಿಯನ್ನು ತಂದೆವು. ಅದಕ್ಕೆ ತಾವು ಒಂದು ruling ಅನ್ನು ಕೊಟ್ಟಿದ್ದೀರಿ. ಇದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯನ್ನು ಕೊಟ್ಟ ತಕ್ಷಣವೇ ಎಲ್ಲವೂ ಸರಿಯಾಗಿಬಿಟ್ಟಿತೇ? ಅದು ಸರಿಯಾದರೆ ಸಂತೋಷ. ಅದು ಸರಿಯಾಗಲಿಲ್ಲವೆಂದರೆ, ನಾಳೆ ದಿವಸ ಅದೇ ಒಂದು ನಮಗೆ ಮಾರಕವಾದರೆ ಅದರಿಂದ ಒಂದು ಗುರುತರವಾದಂತಹ ಘೋರ ದುಷ್ಪರಿಣಾಮ ತಲತಲಾಂತರಕ್ಕೆ ನಮ್ಮನ್ನು ಕಾಡಿದರೆ 'ರೆ' ಗಳೇ ಎಲ್ಲಾ ಹೇಳಬೇಕಲ್ಲಾ? ಈಗ ಏತಕ್ಕಾಗಿ ಅಣೆಕಟ್ಟಿನ ವ್ಯವಸ್ಥೆಯನ್ನು ಮಾಡುತ್ತೀಯಾ? ಎಲ್ಲವೂ ನಿಮ್ಮ ಕಲ್ಪನೆ ಎಂದು ಅನ್ನಬೇಡಿ. ನಾವು ಕಲ್ಪಿಸಿಕೊಳ್ಳುವುದಕ್ಕೆ ಸಕಾರಣಗಳು ಇವೆ. ಹೀಗಾದರೆ ಹೇಗಪ್ಪಾ ಎಂದು ಯೋಚನೆಯನ್ನು ಮಾಡುವುದಕ್ಕೆ ನಮ್ಮ ಹಳೆಯ ಕಹಿ ಅನುಭವಗಳು ನಮ್ಮನ್ನು ಕಾಡುತ್ತವೆ. ಅದು ನಮ್ಮನ್ನು ಕಾಡುವುದರಿಂದಲೇ ನಾವು ಕಂಡುಕಂಡು ತಪ್ಪನ್ನು ಮಾಡುತ್ತಿದ್ದೇವಲ್ಲಾ, ನಾನು ಈ ವಿಷಯವನ್ನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾವೇರಿ ಎಂದ ತಕ್ಷಣ ನನಗೆ ಜ್ಞಾಪಕಕ್ಕೆ ಬರುವುದು 1892 ಮತ್ತು 1924. ನಾನು ಒಂದೇ ಮಾತನ್ನು ಹೇಳುತ್ತೇನೆ. 1892 ಮತ್ತು 1924, ಇವೆರಡು ಇಸ್ಪಿ ಇಟ್ಟುಕೊಂಡು ನಮ್ಮನ್ನು ತಮಿಳುನಾಡಿನವರು ಇವತ್ತಿನವರೆವಿಗೂ ಅರೆದರೆದು ಹುಡಿಯುತ್ತಿದ್ದಾರೆ. ಅವರಿಗೆ ಇರುವುದೇ ಇದೊಂದು ಪಾಯಿಂಟ್. ಇಷ್ಟೆಲ್ಲಾ ಸುಪ್ರೀಂ ಕೋರ್ಟು, ಆ ಕೋರ್ಟು, ಈ ಕೋರ್ಟು ತಿರುಗಿದ್ದೇವೆ, 1892 ಮತ್ತು 1924 ರ ಆ ಒಪ್ಪಂದ ಸಿಂಧುವಾಗಿದೆ, ಆ ಒಪ್ಪಂದ ಅಸ್ತಿತ್ವದಲ್ಲಿದೆ, ಆ ಕಾರಣಕ್ಕಾಗಿ ಕರ್ನಾಟಕ ಹೀಗೆ ನಡೆದುಕೊಳ್ಳಬೇಕೆಂದು ಹೇಳಿಕೊಂಡು ಬಂದಿದ್ದಾರೆ. ನಾನು ಏನು ಹೇಳುತ್ತೇನೆಂದರೆ, 1892 ಮತ್ತು 1924 ಯಾವುದೋ ಬ್ರಿಟಿಷರ ಓಬೀರಾಯನ ಕಾಲದ ಕಾನೂನು, ನಾವು ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿ, ರಾಜ್ಯ ಪುನರ್‌ವಿಂಗಡಣೆಯಾಗಿದೆ, ಆದರೂ ಇನೂ ಅದನ್ನೇ ಏಕೆ ಹಿಡಿದುಕೊಂಡು ಹೋಗುತ್ತೀರಾ ಎಂದು ನಾವು ಕೇಳುತ್ತೇವೆ, ಒಪ್ಪಿಕೊಳ್ಳುತ್ತಿಲ್ಲ, ಸುಪ್ರೀಂ ಕೋರ್ಟಿನವರು ಒಪ್ಪುತ್ತಿಲ್ಲ ತಮಿಳುನಾಡಿನವರಂತೂ ಮೊದಲೇ ಒಪ್ಪಿಕೊಳ್ಳುತ್ತಿಲ್ಲ. ಸರ್ಕಾರಕ್ಕೆ ಅವಕಾಶವಿದ್ದರೆ ಮಾಡಬಹುದಾಗಿತ್ತು. ಒಂದು ಗಂಭೀರವಾದ ವಿಚಾರ ಹೇಳುತ್ತೇನೆ, ಸರ್ಕಾರ ಬೇಕಾದರೆ ಕಡತ ತೆಗೆದು ನೋಡಬೇಕು. ನಾನೊಂದು ಡೇಟ್ ಹೇಳುತ್ತೇನೆ. 04-08-1958, ನಮ್ಮ ರಾಜ್ಯ

ಪುನರ್‌ವಿಂಗಡಣೆಯಾಗಿ ಎರಡು ವರ್ಷವಾಗಿತ್ತು. ಆಗಸ್ಟ್ ನಾಲ್ಕರಂದು ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಒಂದು ಲೆಟರ್ ಬಂತು. ಆಗ ಕೇಂದ್ರ ಸರ್ಕಾರದಲ್ಲಿ ಆಸೀಪ್ ಮಹಮದ್ ಇಬ್ರಾಹಿಂ ಎನ್ನುವವರು ನೀರಾವರಿ ಸಚಿವರಾಗಿದ್ದರು. ಅವರೊಂದು ಕಾಗದ ಬರೆದರು, ನೋಡಿ ಈಗ ರಾಜ್ಯ ಪುನರ್‌ವಿಂಗಡಣೆಯಾಗಿದೆ, 1892 ಮತ್ತು 1924 ರ ಒಪ್ಪಂದಗಳ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನೆಂದು ಕೇಳಿದರು. ಸಭಾಧ್ಯಕ್ಷರೆ, ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಇವೆಲ್ಲಾ ಚರ್ಚೆಯಾಗಿ ಹೋಗಿದೆ. ಯಾವ ಹೊಸ ವಿಷಯ?

ಶ್ರೀ ವೈ.ಎಸ್.ವಿ.ದತ್ತ : ಎಲ್ಲಿ ಆಗಿದೆ ಚರ್ಚೆ? ಇದು ಆಗಿಲ್ಲ. ಹೊಸ ವಿಷಯ ಸದನಕ್ಕೆ ಹೇಳುತ್ತಿದ್ದೇನೆ. 1892 ಮತ್ತು 1924 ರ ವಿಷಯ ಏನಾಯಿತು ಎಂದು ಹೇಳುತ್ತಿದ್ದೇನೆ. ಇಲ್ಲಿ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅದಕ್ಕೆ ಉತ್ತರ ಕೊಡಲಿಲ್ಲ, ಎಂಥ ಅವಕಾಶ, ಅಲ್ಲಿಗೆ ನಮ್ಮ ಕೈಯಲ್ಲಿದ್ದ ಒಂದು ಅವಕಾಶ ತಪ್ಪಿತು. ಅವರೇ ನಿಮ್ಮ ನಿಲುವು ಏನೆಂದು ಕೇಳಿದ್ದು. ನಮ್ಮ ಸರ್ಕಾರ ನಮ್ಮ ನಿಲುವು ಏನೆಂಬುದನ್ನು ಹೇಳಲೇ ಇಲ್ಲ. 1961 ರಲ್ಲಿ ಇನ್ನೊಂದು D.O. ಲೆಟರ್‌ನ್ನು ನಮ್ಮ ಸರ್ಕಾರಕ್ಕೆ ಕೇಂದ್ರದ ನೀರಾವರಿ ಮಂತ್ರಿಗಳು ಬರೆದರು. ಆ ಪತ್ರದಲ್ಲಿ ಎನಿತ್ತೆಂದರೆ, ನಾನು, ಕಾಮರಾಜ ನಾಡಾರ್‌ರವರು ತಮಿಳುನಾಡಿನ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿಕೊಂಡು ಬಂದಿದ್ದೇನೆ. ಅವರೇ ಒಪ್ಪಿದ್ದಾರೆ 1892 ಮತ್ತು 1924 ರ ಒಪ್ಪಂದಗಳ ಬಗ್ಗೆ ಆಗಿನ ಮೈಸೂರು ಮತ್ತು ಮದ್ರಾಸು ಸರ್ಕಾರಗಳ ನಡುವೆ ಮಾತುಕತೆಗೆ ಸೇರಿಸುವುದಕ್ಕೆ ಅವರೊಂದು ಡೇಟ್ ಫಿಕ್ಸ್ ಮಾಡಿ ಎಂದು ಒಪ್ಪಿದ್ದಾರೆ, ನೀವು ಒಂದು ಡೇಟ್ ಕೊಟ್ಟರೆ ಕಾಮರಾಜ್ ನಾಡರ್‌ರವರನ್ನು ಕರೆಸುತ್ತೇನೆ, ನಿಮ್ಮನ್ನು ಕರೆಸುತ್ತೇನೆ ಒಂದು ಇತ್ಯರ್ಥ್ಯ ಮಾಡಿ ಬಿಡೋಣ ಎಂದರು. ಆದರೆ, ಅದಕ್ಕೂ ನಮ್ಮ ಸರ್ಕಾರ ಉತ್ತರ ಕೊಡಲಿಲ್ಲ. ಅಂದರೆ, ನಮ್ಮ ಕೈಯಲ್ಲಿದ್ದ ಎರಡು ಅವಕಾಶಗಳು ತಪ್ಪಿದವು. ರಿಪ್ಲೈ ಬರೆಯುವುದು ಸಣ್ಣ ವಿಚಾರ ಇರಬಹುದು. ರಿಪ್ಲೈ ಬರೆಯದೇ ಇದ್ದುದ್ದರಿಂದ ಎಂಥ ಪ್ರಮಾದ ಎನ್ನುವುದಕ್ಕೆ ಈ ವಿಚಾರ ಹೇಳಿದೆ. ಈ ಮಾತನ್ನು ನಾನು ಹೇಳುತ್ತಿಲ್ಲ. Tribunal Form ಆಯಿತು. ಇದು ಆಗಬೇಕಾದರೆ, ಜಡ್ಜ್ ರಂಗನಾಥ್ ಮಿಶ್ರಾರವರು ಹೇಳುತ್ತಾರೆ, ಈಗಾಗಲೇ

ನಾನು ಏನು ಹೇಳಿದೆ, 1958 ಮತ್ತು 1961 ರಲ್ಲಿ ಇಲ್ಲಿ ಮೈಸೂರಿನಲ್ಲಿಯೂ ಕಾಂಗ್ರೆಸ್ ಸರ್ಕಾರ ಇತ್ತು. ಕೇಂದ್ರದಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಮದ್ರಾಸಿನಲ್ಲಿಯೂ ಕಾಂಗ್ರೆಸ್ ಸರ್ಕಾರವಿತ್ತು. ಮೂರು ಕಾಂಗ್ರೆಸ್ ಸರ್ಕಾರಗಳೇ, ನಮ್ಮ ಸರ್ಕಾರದ ನಮ್ಮ ಮುಖ್ಯಮಂತ್ರಿಗಳು ಆ ತರಹದ ಒಂದು ನಿಲುವು ತೆಗೆದುಕೊಂಡಿದ್ದರೆ ಈ ಸಮಸ್ಯೆ ಬಗೆಹರಿಯುತ್ತಿತ್ತು. ಅದಕ್ಕೆ Tribunal Form ಆದಾಗ ನಾವೆಲ್ಲಾ ಓಹೋ Tribunal Form ಆಯಿತು ಎಂದಾಗ, ಏಕೆ ಇದನ್ನು ಮಾಡಬೇಕಾಗಿ ಬಂತು ಎನ್ನುವುದಕ್ಕೆ ಜಸ್ಟಿಸ್ ರಂಗನಾಥ್ ಮಿಶ್ರಾ, ಪಿ.ಡಿ.ಸಾವರ್ಕರ್, ಜಸ್ಟಿಸ್ ಜಸ್ಟಿಸ್ ಕೆ.ರಾಮಸ್ವಾಮಿ ಮೂರು ಜನ ನ್ಯಾಯಾಧೀಶರ ಪೀಠ ಹೇಳುತ್ತದೆ,

"There was a time after the dispute arose when the Government in the States of Karnataka and Tamil Nadu as also at the Centre was run by one political party."

ಈ ಮಾತನ್ನು ನಾನು ಹೇಳುತ್ತಿಲ್ಲ. ಸಭಾಧ್ಯಕ್ಷರೆ, ಜಸ್ಟಿಸ್ ರಂಗನಾಥ್ ಮಿಶ್ರಾ, ಜಸ್ಟಿಸ್ ಜಸ್ಟಿಸ್ ಪಿ.ಡಿ.ಸಾವರ್ಕರ್, ಕೆ.ರಾಮಸ್ವಾಮಿಯವರ ಪೀಠ ಹೇಳುತ್ತಿದೆ.

"Perhaps, if the Centre had intervened in an effective way, during that period, there was considerable chance of settlement by negotiation. No serious attempt seems to have been made at that time to have the dispute resolved and it has been shelved and allowed to catch up the momentum and give rise issues of sensitivity."

ಮಾನ್ಯ ಸಭಾಧ್ಯಕ್ಷರೆ, ಅರ್ಥವಾಯಿತೆ? ನಾವು ಈ ಸರ್ಕಾರಕ್ಕೆ ಏಕೆ ಹೇಳುತ್ತೇವೆಂದರೆ, ಒಂದು ಸಣ್ಣ ತಪ್ಪು ಮಾಡಿ ಬಿಡುತ್ತೇವೆ, ತೃಣ ಮಾತ್ರ ತಪ್ಪು ಮಾಡಿ ಬೆಟ್ಟ ಮೈಮೇಲೆ ಕೆಡವಿಕೊಂಡು ಬಿಡುತ್ತೇವೆ.

ಅಧ್ಯಕ್ಷರು: ಈಗ ಏನು ಮಾಡಬೇಕೆಂದು ಹೇಳಿ.

ಶ್ರೀ ವೈ.ಎಸ್.ವಿ.ದತ್ತ: ಅಷ್ಟು ಸುಲಭವಾಗಿ ಹೇಳುವುದಕ್ಕಾಗುತ್ತದೆಯೆ?

(ಗೊಂದಲ)

ಶ್ರೀ ವೈ.ಎಸ್.ರುದ್ರೇಶ್‌ಗೌಡ: ಸಂಧಾನಕ್ಕೆ ಬೆಂಗಳೂರಿಗೆ ಬಂದಂಥ ಜಯಲಲಿತಾರವರು ವಾಪಸ್ ಹೋದರು.

ಶ್ರೀ ಸಿ.ಎನ್.ಬಾಲಕೃಷ್ಣ : ಮಾನ್ಯ ಸಭಾಧ್ಯಕ್ಷರೆ, ತಮ್ಮನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ ಮಾನ್ಯ ರುದ್ರೇಶ್‌ಗೌಡರವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು : ಆಯಿತು ಬಿಡಿ. Please co-operate. ತಾವು ಮುಗಿಸಿ.

ಶ್ರೀ ವೈ.ಎಸ್.ವಿ.ದತ್ತ : 1991ರೊಳಗೆ Tribunal ಆಯಿತು, ನಾವು ಹೋಗುವುದಿಲ್ಲ, Interim Award ಬಂತು, ನಾವು ಹೋಗುವುದಿಲ್ಲ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಎಲ್ಲೆಲ್ಲಿ ತಪ್ಪುಗಳನ್ನು ಮಾಡಿದ್ದೇವೆ ಪುನಃ ಪುನಃ ಅದೇ ತಪ್ಪುಗಳನ್ನು ಮಾಡಬಾರದು ಎನ್ನುವುದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. Interim Award ಬಂದಿದ್ದು ಬಿಡಿ. ಇದು ಅಂತರರಾಜ್ಯ ಜಲವಿವಾದಗಳಲ್ಲಿ ಯಾವುದೇ ಅಂಥ ನ್ಯಾಯ ಮಂಡಳಿ ಮಧ್ಯಂತರ ತೀರ್ಪು ಕೊಟ್ಟಿರುವ ನಿದರ್ಶನವೇ ಇಲ್ಲ. ಆದರೂ ಅದು ಒಂತು, ಅದನ್ನು ಬಿಡಿ ಈಗಾಗಲೇ ಸಾಕಷ್ಟು ಅದರ ಬಗ್ಗೆ ಚರ್ವಿತಚರ್ವಣ ಆಗಿ ಹೋಗಿದೆ. ನಾನು ಆ ಬಗ್ಗೆ ಹೇಳುವುದಿಲ್ಲ. ಆದರೆ, ಆ Interim Award ಬಂದ ಮೇಲೆ 1995 ರಲ್ಲಿ ಒಂದು ಪ್ರಸಂಗವಾಯಿತು. ನಾನು ಈ ಸಂದರ್ಭದಲ್ಲಿ ಇದನ್ನು ಹೇಳಲೇಬೇಕು. ಏಕೆಂದರೆ, ಇವತ್ತು ಒಂದು ಪದ ಸೇರಿಸಿದ್ದಕ್ಕೆ, ನಮ್ಮ ಪಕ್ಷದ, ಪ್ರತಿ ಪಕ್ಷದ ನಾಯಕರಾದ ಕುಮಾರಸ್ವಾಮಿಯವರು ಏಕೆ ಈ ರಗಳೆ ತೆಗೆದು ಈ ಪದ ಸೇರಿಸಿರುವುದು ಸರಿಯಿಲ್ಲ ಎಂದು ಹೇಳಿರುವುದಕ್ಕೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1995, ಆಗಸ್ಟ್ 21 ನೇ ತಾರೀಖು ಈ ವಿಧಾನ ಮಂಡಲದಲ್ಲಿ ನಡೆದಿರುವ ಚರ್ಚೆ. ರೆಕಾರ್ಡ್ಸ್‌ನಲ್ಲಿರುವುದನ್ನು ನಾನು ಹೇಳುತ್ತೇನೆ. ಈಗಾಗಲೇ ತೀರಿಕೊಂಡಿರುವಂಥ ಹೆಚ್.ಎನ್.ನಂಜೇಗೌಡರವರು ಅದ್ಭುತವಾದ ನೀರಾವರಿ ಪಂಡಿತರು ಎಂದು ಜನರೆಲ್ಲಾ ಮಾತನಾಡಿಕೊಳ್ಳುತ್ತಾರೆ. ಅವರೊಂದು ಇಲ್ಲಿ ಖಾಸಗಿ ಬಿಲ್ ತಂದರು. ಅದರೊಳಗಡೆ ಒಂದು ಪದ ಹಾಕಿದ್ದರು. ನಾನು ಆ ಪದ ಹೇಳುವುದಕ್ಕೆ ಹೋಗುವುದಿಲ್ಲ. ಆ ಪದ ಹೇಳುವುದು ಕೂಡ ತಪ್ಪಾಗುತ್ತದೆ. ಏಕೆಂದರೆ, ಆ ಪದ ಮತ್ತೆ ಈ ಹೌಸ್‌ನಲ್ಲಿ ಅಪ್ರೂವ್ ಆಗಲಿಲ್ಲ. ಅವರು ತಂದಿರುವ ಖಾಸಗಿ ಬಿಲ್‌ನಲ್ಲಿ 'this House

urges upon' ಒಂದು ಪದ ಹಾಕಿದ್ದರು. ಮಾನ್ಯ ಕುಮಾರಣ್ಣನವರು ಈ ಸರ್ಕಾರಕ್ಕೆ, ನೋಡಿ "ಐತೀರ್ಪಿಗೆ ಅನುಸಾರವಾಗಿ" ಎನ್ನುವ ಆ ಪದ ತೆಗೆಯಿರಿ ಎಂದು ಏಕೆ ಹೇಳಿದರು ಎಂದರೆ, ಏಕೆ ಇದನ್ನು ಅಷ್ಟು ಒತ್ತಿ ಹೇಳುತ್ತಿದ್ದೇವೆಂದರೆ, ಖಂಡಿತ ಇದರಲ್ಲಿ ರಾಜಕೀಯವಿಲ್ಲ. ನಮಗೆ ಪೆಟ್ಟು ತಿಂದು ತಿಂದು ಅನುಭವವಾಗಿರುವ ಹೊತ್ತಿಗೆ ಪುನಃ ಅದನ್ನು ಮಾಡಿಕೊಳ್ಳುವುದು ಬೇಡ ಎಂದು ಒಂದು ಸಲಹೆ ಕೊಟ್ಟಿರುವುದು. ಅದಕ್ಕಾಗಿಯೇ ರಾಜ್ಯದ ಹಿತದೃಷ್ಟಿಯಿಂದ ನಮ್ಮ ಕುಮಾರಣ್ಣನವರು ಅಷ್ಟೊಂದು ಜಾಗ್ರತೆ ವಹಿಸಿ ಹೇಳಿದರು. ಹಿಂದೆ ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿರುವ ಎರಡು ಮಾತುಗಳನ್ನು ನಾನು ಇಲ್ಲಿ ಓದಿ ಬಿಡುತ್ತೇನೆ. ಏಕೆಂದರೆ, ವೀರಪ್ಪ ಮೊಯಿಲಿಯವರು ನಮ್ಮ ಪಕ್ಷದವರಿಲ್ಲ, ಕಾಂಗ್ರೆಸ್ ಪಕ್ಷದವರು. ಅಂದು ವೀರಪ್ಪ ಮೊಯಿಲಿಯವರು ಏಕೆ ಹುಷಾರಾಗಿರಬೇಕು ಎನ್ನುವುದಕ್ಕೆ ಈ ಸದನದಲ್ಲಿ ಏನು ಮಾತನಾಡಿದರು ಎಂದು ಹೇಳುತ್ತೇನೆ. "ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರವರು ಬಹಳ ಅನುಭವಿಗಳು, ಅದರಲ್ಲೂ ನೀರಾವರಿ ವಿಚಾರದಲ್ಲಿ ಸಾಕಷ್ಟು ಪರಿಗಣಿತಿಯನ್ನು ಪಡೆದಿದ್ದಾರೆ. ಇದು ಬಹಳ ಗಂಭೀರವಾದ ವಿಷಯ. ಒಂದು ಕಡೆ ತಾಂತ್ರಿಕವಾಗಿ ನಮ್ಮ ತಂತ್ರಜ್ಞರು ಮತ್ತೊಂದು ಕಡೆ ನಮ್ಮ ವಕೀಲರು. ಇಲ್ಲಿ ಪ್ರಶ್ನೆ ಏನಾಗುತ್ತದೆ ಎಂದರೆ, ನಂಜೇಗೌಡರೆ, ಈ ಸದನದಲ್ಲಿ ಒಂದು ನಿರ್ಣಯವನ್ನು ಮಾಡುವಾಗ the matter which is pending or issues ಇದೆಯೋ ಅದಕ್ಕೆ ಸಂಬಂಧಪಟ್ಟಿದ್ದು ಇದೆಯೋ" ಏಕೆಂದರೆ ವೀರಪ್ಪ ಮೊಯಿಲಿಯವರು ಬಹಳ important ಪದ ಹೇಳಿದ್ದಾರೆ. "ಏಕೆಂದರೆ, ಒಂದು ಶಬ್ದದಲ್ಲಿಯೂ ಕೂಡ ನಮ್ಮ ಕೇಸಿಗೆ ಆಘಾತ ಕೆಲವು ಸಾರಿ ಬರುತ್ತದೆ, ಕಾನೂನಿನ ದೃಷ್ಟಿಯಲ್ಲಿ ಬರಬಹುದು, ತಾಂತ್ರಿಕತೆಯ ದೃಷ್ಟಿಯಿಂದ ಬರಬಹುದು, ಇದು ಬಹಳ ಗಂಭೀರವಾದದ್ದು, to that extent ನಂಜೇಗೌಡರೆ, it will have evidentiary value. He is a very senior leader, has held irrigation portfolio, proceedings of this House ill become one of the evidences for or against our case." ಸಭಾಧ್ಯಕ್ಷರೆ, ನಾನು ಇದನ್ನು ಯೋಚನೆ ಮಾಡಿ ಹೇಳುತ್ತಿದ್ದೇನೆ, ತಮಗೆ ಅರ್ಥವಾಯಿತೆ?

ಅಧ್ಯಕ್ಷರು : ಆಯಿತು ಬೇಗ ಮುಗಿಸಿ ಎಂದು ನಾನು ಅಷ್ಟೆ ನಿಮಗೆ ಹೇಳುವುದು.

ಶ್ರೀ ವೈ.ಎಸ್.ವಿ.ದತ್ತ : ಆದುದರಿಂದ, ಇಷ್ಟು ಗಂಭೀರವಾದ ವಿಷಯ ಹೇಳಿದ್ದೇನೆ.

ಅಧ್ಯಕ್ಷರು : ನಿಮಗೋಸ್ಕರ ಇಷ್ಟೊಂದು ಅವಕಾಶ ಮಾಡಿ ಕೊಟ್ಟಿದ್ದೇನೆ.

ಶ್ರೀ ವೈ.ಎಸ್.ವಿ.ದತ್ತ : ನಾನು ಆ ಕಾರಣಕ್ಕಾಗಿ ಹೇಳುವುದೇನೆಂದರೆ, ಒಂದು ಶಬ್ದ ಕೂಡ ಎಂದರಲ್ಲ. ಇದನ್ನು ನಾನು ಹೇಳಿದ್ದರೆ ಬೇಕಾದರೆ ಅವರು ತಿರಸ್ಕಾರ ಮಾಡಲಿ.

ಅಧ್ಯಕ್ಷರು : ಆಯಿತು, ಹೇಳಿದ್ದೀರಲ್ಲಾ, ಬಿಡಿ.

ಶ್ರೀ ವೈ.ಎಸ್.ವಿ.ದತ್ತ : ಅವರ ನಾಯಕರಾದ ವೀರಪ್ಪ ಮೊಯಿಲಿಯವರು ಹೇಳಿರುವುದರಿಂದ ನಾವು ಏಕೆ ಇದರ ಬಗ್ಗೆ ಇಷ್ಟು ಹೇಳುತ್ತಿದ್ದೇವೆಂದು ಅವರು ಗಂಭೀರವಾಗಿ ಪರಿಗಣಿಸಬೇಕು. ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :– ಈಗಾಗಲೇ ಸಮಯ ಆಗುತ್ತಾ ಇದೆ. ನಿಮಗೆ ಕೊಟ್ಟಿರುವ ಸಮಯ ಆಗಿ ಹೋಗಿದೆ. ನಿಮಗೋಸ್ಕರ ಹೆಚ್ಚು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ವೈ.ಎಸ್.ವಿ.ದತ್ತ :– ಮಾನ್ಯ ಸಭಾಧ್ಯಕ್ಷರೆ, ಕೆಲವು ಮಾನ್ಯ ಸದಸ್ಯರು ಎರಡು, ಮೂರು ಗಂಟೆ ಮಾತನಾಡಿದ್ದಾರೆ.

ಅಧ್ಯಕ್ಷರು :– ಅದು ಇರಬಹುದು. ಟೈಂ ಇದ್ದರೆ ಮಾತನಾಡಬಹುದಾಗಿತ್ತು.

ಶ್ರೀ ವೈ.ಎಸ್.ವಿ.ದತ್ತ : ಮಾನ್ಯ ಅಧ್ಯಕ್ಷರೆ, ನಾನೇನಾದರೂ ವಿಷಯ ಬಿಟ್ಟು ಹೋಗಿದ್ದರೆ ತಾವು ಹೇಳಿ.

ಅಧ್ಯಕ್ಷರು :– ಆ ರೀತಿ ಇಲ್ಲ.

ಶ್ರೀ ವೈ.ಎಸ್.ವಿ.ದತ್ತ :– ವಿಷಯ ಬಿಟ್ಟು ಹೋಗಿದ್ದರೆ ಅಥವಾ ತಪ್ಪಾಗಿ ಮಾತನಾಡಿದ್ದರೆ ತಾವು ಹೇಳಿ ಕೂರಿಸಿ.

ಅಧ್ಯಕ್ಷರು :– ನಿಮ್ಮ ಹಾಗೆ ಬಹಳ ಜನ ಮಾತನಾಡುವವರಿದ್ದಾರೆ. ಆಯಿತು, ಬೇಗ ಮುಗಿಸಿ.

ಶ್ರೀ ವೈ.ಎಸ್.ವಿ.ದತ್ತ :– ಮಾನ್ಯ ಅಧ್ಯಕ್ಷರೆ, 10–06–2006, ಇದು ಬಹಳ ಮುಖ್ಯವಾಗಿದೆ. ತಪ್ಪುಗಳು ಯಾವ ರೀತಿಯಾಗಿವೆ ಎಂಬುದನ್ನು ಮತ್ತು

ಅವುಗಳನ್ನು ಮತ್ತೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ ಎಂಬ ಬಗ್ಗೆ ನಾನು ಕೇವಲ ಸಜೆಸ್ಟ್ ಮಾತ್ರ ಕೊಡುತ್ತಿದ್ದೇನೆ. 2007ರಲ್ಲಿ ಅಂತಿಮ ಐತೀರ್ಪು ಬಂತು. 2006ರಲ್ಲಿ ಒಂದು ಪ್ರಶ್ನೆ ಬಂತು. ಅದೇನೆಂದರೆ, ಕಾವೇರಿ ಬೇಸಿನ್ ರಾಜ್ಯಗಳಲ್ಲಿನ situation ಅನ್ನು ಅಸೆಸ್ ಮಾಡುವುದಕ್ಕೆ observers ಅನ್ನು ಕಳುಹಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಮೂರು ಜನ ಜಡ್ಜ್‌ಗಳ ಪೈಕಿ ಇಬ್ಬರು ಜಡ್ಜ್‌ಗಳು ಒಂದು ತರಹ ಹೇಳಿದರು. ಆದರೆ, ಅದರ ಛೇರ್ಮನ್‌ರವರು ಅವರ ವಿರುದ್ಧವಾಗಿ ಹೇಳಿದರು. ಆಗ ಅವರಲ್ಲಿಯೇ ಒಡಕು ಬಂತು. ಒಡಕು ಬಂದಿರುವುದನ್ನು ನಾವು ಬಳಸಿಕೊಳ್ಳಬಹುದಾಗಿತ್ತಲ್ಲವೇ?

ಅಧ್ಯಕ್ಷರು :- ಇದೆಲ್ಲ ಆಯಿತು. ಈಗ ಏನು ಮಾಡಬೇಕೆಂದು ಹೇಳಿ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಅವರಲ್ಲಿ ಬಂದಿದ್ದಂಥ ಒಡಕನ್ನು ಬಳಸಿಕೊಳ್ಳಬಹುದಿತ್ತಲ್ಲವೇ? ಅಂದರೆ, ನಿಮ್ಮ ಟ್ರಿಬ್ಯುನಲ್ ಒಡೆದು ಹೋಗಿದೆ, ಅಲ್ಲಿನ ಜಡ್ಜ್‌ಗಳಲ್ಲಿ ಒಮ್ಮತ ಇಲ್ಲ ನೀವೇ ಜಗಳ ಆಡುತ್ತಿದ್ದೀರೆಂದು ನಾನು ಹೇಳುತ್ತಿಲ್ಲ. ತಮಿಳುನಾಡಿನ ಹಿರಿಯ Counsel ಆಗಿರುವ ಶ್ರೀ ಪರಾಶರನ್ ಹೇಳಿದ್ದಾರೆ.

ಅಧ್ಯಕ್ಷರು :- ಈ ಸಮಸ್ಯೆಗೆ ಎಲ್ಲರೂ ಸೌಟನ್ನು ಆಡಿಸಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತ:- ಮಾನ್ಯ ಅಧ್ಯಕ್ಷರೆ, ನಾನು ಆ ರೀತಿಯಾಗಿ ಹೇಳುತ್ತಿಲ್ಲ. ನಮ್ಮ ಹತ್ತಿರ ಇರುವ ಅವಕಾಶವನ್ನು ಬಳಸಿಕೊಳ್ಳಲಿಲ್ಲವೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು :- ಆಯಿತು. ದಯವಿಟ್ಟು ಬೇಗ ಮುಗಿಸಿ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಮಾನ್ಯ ಪರಾಶರನ್‌ರವರು ಏನು ಹೇಳಿದ್ದಾರೆಂದರೆ,

"The Judges are there to resolve the differences among Then selves in the cabin, But, the Bar is not there to solve your differences. Please solve all your differences in your cabin. I have never seen this bitterness or experienced this in my 56 years as an Advocate."

ಇಷ್ಟು ಜಗಳವಾಗಿದೆ ಎಂದು ಮತ್ತು ಆ ಟ್ರಿಬ್ಯುನಲ್ ಒಡೆದು ಹೋಗಿದೆ ಎಂದು ಎಲ್ಲರಿಗೂ ಸಹ ಗೊತ್ತಾಯಿತು. ಆಗ ಇದನ್ನೇ ಒಂದು ಅವಕಾಶವಾಗಿಟ್ಟುಕೊಂಡು ಕರ್ನಾಟಕ ರಾಜ್ಯದ ಗಾಂಧಿ ಸಾಹಿತ್ಯ ಸಂಘದವರು ಸುಪ್ರೀಂ ಕೋರ್ಟ್‌ನಲ್ಲಿ ಒಂದು Public Interest Litigation ಹಾಕಿದರು. ಸರ್ಕಾರ ಎಂಥೆಂಥ ಸುವರ್ಣ ಸಮಯಗಳನ್ನು ಕಳೆದುಕೊಂಡಿತ್ತೆಂಬ ಬಗ್ಗೆ ನಾನು ಹೇಳುತ್ತಿದ್ದೇನೆ. 2006ರಲ್ಲಿ ನಾವು ಇದ್ದಾಗ ಏನು ಮಾಡಿದ್ದೇವೆಂದರೆ, ಗಾಂಧಿ ಸಾಹಿತ್ಯ ಸಂಘದವರು ಹಾಕಿದಂಥ.....

ಅಧ್ಯಕ್ಷರು :– ದಯವಿಟ್ಟು ಇವೆಲ್ಲ ಬೇಡ. ನೀವು ಹಳೆಯ ಕತೆಯನ್ನು ಹೇಳಿಕೊಂಡು ಕುಳಿತರೆ ಹೇಗೆ? ಊರಿಗೆಲ್ಲ ಒಂದೇ ಮನೆ ಅಲ್ಲ, ನೀವು ಬೇಗ ಮಾತನಾಡಿ ಮುಗಿಸಿ. ಸರ್ಕಾರಕ್ಕೆ ಇದರ ಬಗ್ಗೆ ಏನಾದರೂ ಸಲಹೆ ಕೊಡುವುದಾದರೆ ಕೊಡಿ.

ಶ್ರೀ ವೈ.ಎಸ್.ವಿ.ದತ್ತ : - ಮಾನ್ಯ ಅಧ್ಯಕ್ಷರೆ, ಹಾಗಾದರೆ ಬಿಡಿ, ನಾನು ಏನ್ನನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು :– OK, ಆಯಿತು.

ಶ್ರೀ ವೈ.ಎಸ್.ವಿ.ದತ್ತ :– ಹಾಗಾದರೆ ಬಿಡಿ. ನನಗೆ ಮಾತನಾಡುವ ಆಸಕ್ತಿಯೇ ಹೋಯಿತು. ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದೇನೆಂದರೆ, ಕಾವೇರಿ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ತುಂಬಾ ಅನ್ಯಾಯವಾಗಿದೆ. ಐತೀರ್ಪಿನ ಅನುಸಾರವಾಗಿ ತೀರ್ಪು ಬಂದಿರತಕ್ಕಂಥದ್ದು ಸರಿಯಿಲ್ಲವೆಂದು ಹೇಳಿ ಬಿಟ್ಟುಬಿಡುತ್ತೇನೆ. ಬೇರೆ ವಿಷಯವೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಎಷ್ಟೋ ತಪ್ಪುಗಳಾಗಿವೆ ಆದರೂ ಕೂಡ ನಾವು ಪಾಠ ಕಲಿಯದೇ ಮತ್ತೇ ನಾವು ತಪ್ಪು ಮಾಡುತ್ತಿದ್ದೇವೆಂದು ಬಹಳ ಗಂಭೀರತೆಯಿಂದ ನಾನು ಹೇಳುವುದಕ್ಕೆ ಹೋದರೆ ಇವೆಲ್ಲವನ್ನು ಯಾರು ಕೇಳುತ್ತಾರೆ, ಯಾರು ಬಿಡುತ್ತಾರೆಂದು ಹೇಳಿದರೆ ಹೇಗೆ? ಹಾಗಾದರೆ, ಈ ಬಗ್ಗೆ ಮಾನ್ಯ ವೀರಪ್ಪ ಮೊಯಿಲಿಯವರು ಏಕೆ ಹೇಳಿದರು?

ಅಧ್ಯಕ್ಷರು :– ನನಗೆ ಇರುವುದು ಮುಖ್ಯವಾಗಿ ಸಮಯದ ಅಭಾವವಷ್ಟೆ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಸಮಯದ ಅಭಾವದ ಪ್ರಶ್ನೆ ಅಲ್ಲ. ಹಾಗಾದರೆ, ನಾನು ಮುಕ್ತಾಯ ಮಾಡುತ್ತೇನೆ ಬಿಡಿ. ನನಗೆ ಆಸಕ್ತಿ ಹೋಯಿತು.

ಅಧ್ಯಕ್ಷರು :- OK. ಈಗಾಗಲೇ ನಿಮಗೆ 45 ನಿಮಿಷ ನೀಡಲಾಗಿದೆ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ನಾನು ಹೇಳುವ ವಿಚಾರವನ್ನು ಬಹುಶಃ ಸರ್ಕಾರ ನಿಜವಾಗಿಯೂ ಕೂಡ ಸಕಾರಾತ್ಮಕವಾಗಿ ಮತ್ತು ಆರೋಗ್ಯಕರವಾಗಿ ಸ್ವೀಕರಿಸುವಂಥ ಸಲಹೆಗಳನ್ನು ಹೇಳೋಣವೆಂದು ನಾನು ಬಂದನೇ ಹೊರತು ಸುಮ್ಮನೆ ಹೇಳಿಕೊಳ್ಳುವುದಕ್ಕೆ ನಾನೇನು ಇಲ್ಲಿಗೆ ಬಂದಿಲ್ಲ. ನನಗೆ ಆಸಕ್ತಿ ಇಲ್ಲ ಬಿಡಿ.

ಅಧ್ಯಕ್ಷರು :- ನಿಲ್ಲಿಸುವುದು ಬೇಡ. ಹೇಳುವುದನ್ನು ಇನ್ನು ಎರಡು ನಿಮಿಷದಲ್ಲಿ ಹೇಳಿಬಿಡಿ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಗಾಂಧಿ ಸಾಹಿತ್ಯ ಸಂಘದವರು ಹಾಕಿದಂಥ ಪಿ.ಐ.ಎಲ್. ರಿಜೆಕ್ಟ್ ಆಯಿತು. ಪಿ.ಐ.ಎಲ್. ಏಕೆ ರಿಜೆಕ್ಟ್ ಆಯಿತೆಂದು ಜಡ್ಜ್‌ಗಳು ಕಾರಣ ಸಹ ಕೊಟ್ಟರು. ಅದೇನೆಂದರೆ, ಸಾರ್ವಜನಿಕರು ಬಂದು ಪಿ.ಐ.ಎಲ್. ಹಾಕಿದ್ದೀರಿ. ನಿಮಗೆ ಸಪೋರ್ಟ್ ಆಗಿ ನಿಮ್ಮ ಸರ್ಕಾರವೇ ನಿಂತುಕೊಂಡಿಲ್ಲವೆಂದು ಹೇಳಿದರು. ಮಾನ್ಯ ಸಭಾಧ್ಯಕ್ಷರೆ, ಇದನ್ನು ಅರ್ಥಮಾಡಿಕೊಳ್ಳಿ. ಗಾಂಧಿ ಸಾಹಿತ್ಯ ಸಂಘದವರು ಹಾಕಿದಂಥ ಪಿ.ಐ.ಎಲ್.ಗೆ ಅವತ್ತಿನದಿವಸ ಇದ್ದಂಥ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಸಪೋರ್ಟ್ ಮಾಡಿದ್ದರೆ ಖಂಡಿತವಾಗಿ ಕೂಡ ಈ ಅವಸ್ಥೆ ಬರುತ್ತಿತ್ತಾ? ಅವತ್ತು ಸುಪ್ರೀಂ ಕೋರ್ಟ್ Tribunal ಜಡ್ಜ್‌ಗಳ ಬಗ್ಗೆ ಬಹಳ ಕೆಟ್ಟದಾಗಿ ಕಾಮೆಂಟ್ ಮಾಡಿತ್ತು. ಅದೇನೆಂದರೆ, ಇಂಥ ಕೆಟ್ಟ ಜಡ್ಜ್‌ಗಳನ್ನು ನಾನು ಇವತ್ತಿನವರೆಗೆ ಕಂಡಿಲ್ಲ, ಇವರುಗಳೇ ಇಷ್ಟೊಂದು ಕಚ್ಚಾಡುತ್ತಿರುವಾಗ ಅವರ ನ್ಯಾಯ ಮಂಡಳಿಯಿಂದ ಯಾವ ರೀತಿಯ ನ್ಯಾಯ ಬರುತ್ತದೆಂದು ನಾನು ಹೇಳಲಿ, ಈ ರೀತಿಯಾಗಿ ಸುಪ್ರೀಂ ಕೋರ್ಟ್ ಶಂಕೆ ವ್ಯಕ್ತಪಡಿಸಿತು. ಕೊನೆಗೆ ನಮ್ಮ ಕೈಗೆ ಒಂದು ಪತ್ರವನ್ನೂ ಸಹ ಕೊಟ್ಟಿತು. ಗಾಂಧಿ ಸಾಹಿತ್ಯ ಸಂಘದವರ ಪಿ.ಐ.ಎಲ್. ವಜಾ ಆಗಿ ಹಾಳು ಬಿದ್ದು ಹೋಗಲಿ. ಆದರೆ, ಅವರು ಪಿ.ಐ.ಎಲ್. ಹಾಕಿದ್ದರಿಂದ ಒಳ್ಳೆಯ ಪರಿಣಾಮ ಏನಾಯಿತೆಂದರೆ, ಸುಪ್ರೀಂ ಕೋರ್ಟ್ ನಮಗೆ ಒಂದು ಹಿಂಟ್ ಕೊಟ್ಟಿತ್ತು. ಸುಪ್ರೀಂ ಕೋರ್ಟ್‌ನವರು ಹೇಳಿರುವುದನ್ನು

ಈಗಲಾದರು ಬಳಸಿಕೊಳ್ಳಿ ಎಂದು ಹೇಳುತ್ತಿದ್ದೇನೆ. ಈ ಸರ್ಕಾರ ಸುಪ್ರೀಂ ಕೋರ್ಟ್‌ನವರು ಕೊಟ್ಟಿರುವ ಹಿಂಟ್ ಅನ್ನಾದರೂ ಇಟ್ಟುಕೊಂಡು ಈ ಐತೀರ್ಪಿನ ಬಗ್ಗೆ ಇನ್ನೊಂದು ಸಲವಾದರೂ ಯೋಚನೆ ಮಾಡಿ ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆ ಎಂದರೆ,

"The State of Karnataka reserves its right to make appropriate submission on the functioning of the Hon'ble Tribunal and the prejudicial impact on the decision and the adjudicatory process involved therein including adverse impact on the lives of future generations of Karnataka people, particularly, farmers."

ಇದಕ್ಕಿಂತ ಅಸ್ತ್ರ ಬೇಕೇ? ಇಂಥ ಅಸ್ತ್ರವನ್ನು ನಮಗೆ ಕೊಟ್ಟು ಐತೀರ್ಪನ್ನು ಪ್ರಶ್ನೆ ಮಾಡುವ ಎಲ್ಲ ಹಕ್ಕನ್ನು ನೀವು ಉಳಿಸಿಕೊಂಡಿದ್ದೀರಿ. ಅಂದರೆ, ಆ ನ್ಯಾಯ ಮೂರ್ತಿಗಳ prejudicial ನಡವಳಿಕೆಯನ್ನು ಪ್ರಶ್ನೆ ಮಾಡುವ ಹಕ್ಕನ್ನು ಕರ್ನಾಟಕದವರು ಉಳಿಸಿಕೊಂಡಿದ್ದೀರೆಂದು ಹೇಳಿದ ಮೇಲೂ ಕೂಡ ನಾವು ಕಾವೇರಿ ಐತೀರ್ಪನ್ನು ಒಪ್ಪಿಕೊಂಡಿದ್ದೇವೆಂದು ಇಲ್ಲಿ ಬರೆದುಕೊಂಡು ಕುಳಿತರೆ ಏನಾಗುತ್ತದೆ? ನಮ್ಮ ಹಕ್ಕನ್ನು ನಾವು ಕಳೆದುಕೊಳ್ಳುತ್ತಿಲ್ಲವೇ? ಸುಪ್ರೀಂ ಕೋರ್ಟ್ ನಮಗೆ ದತ್ತವಾಗಿ ಕೊಟ್ಟಿರುವಂಥ ಹಕ್ಕು ಇದಾಗಿದೆ. ಈ ರೀತಿಯಾಗಿ ನೀವು ಪ್ರಶ್ನೆ ಮಾಡಿ ಎಂದು ಹೇಳಿದರೂ ಸಹ ಮಾಡದೆ ಇದ್ದರೆ ಅದು ತಪ್ಪಾಗುವುದಿಲ್ಲವೇ? ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದು ನಾವು ಹಾಕಿರುವ ಎಸ್.ಎಲ್.ಪಿ., ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇದ್ದಂಥ ಸಂದರ್ಭದಲ್ಲಿ 2007ರಲ್ಲಿ ಐತೀರ್ಪು ಬಂದಾಗ ಆ ಐತೀರ್ಪನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹಾಕಿರುವಂಥ ಎಸ್.ಎಲ್.ಪಿ. ಇವತ್ತಿನದಿವಸ ಕೋರ್ಟ್‌ನಲ್ಲಿದೆ. ಈ ಐತೀರ್ಪನ್ನು ನಾವು ಪ್ರಶ್ನೆ ಮಾಡಿದ್ದೇವೆ ಹೊರತು ಅದನ್ನು ನಾವು ಇನ್ನೂ ಒಪ್ಪಿಕೊಂಡಿಲ್ಲ. ಅಷ್ಟೇ ಅಲ್ಲದೆ ಈ ಎರಡು ಸದನಗಳಲ್ಲಿ ಮಾನ್ಯ ಹೆಚ್.ಕೆ.ಪಾಟೀಲ್‌ರವರು ನಿರ್ಣಯ ಮಂಡನೆ ಮಾಡಿರುವುದು ಇಲ್ಲಿ ಅನುಮೋದನೆ ಕೂಡ ಆಗಿದೆ. ಅದು 13ನೇ ಏಪ್ರಿಲ್, 2007ರಲ್ಲಿ ಇದಾಗಿದೆ. ಅದೇನೆಂದರೆ,

"ಕಾವೇರಿ ನ್ಯಾಯಾಧಿಕರಣ ದಿನಾಂಕ:5-02-2007ರಂದು ತನ್ನ ಅಂತಿಮ ಐತೀರ್ಪನ್ನು ನೀಡಿದೆ. ಈ ಐತೀರ್ಪಿನಿಂದ ರಾಜ್ಯದ ಹಾಗೂ ರೈತರ ಹಿತಾಸಕ್ತಿಗೆ ಮಾರಕವಾಗಿದೆ. ಕಾವೇರಿ ಕಣಿವೆ ಜಲಾನಯನ ನೈಜ ಸ್ಥಿತಿ ಹಿನ್ನಲೆಯಲ್ಲಿ ಐತೀರ್ಪನ್ನು ಕಾರ್ಯಗತಗೊಳಿಸುವುದಕ್ಕೆ ಸಾಧ್ಯವಾಗದಿರುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಜಲ ನೀತಿಯನ್ನು ಸೂಕ್ತವಾಗಿ ಮಾರ್ಪಡಿಸಿ, ಅಂತರರಾಜ್ಯ ನದಿ ವಿವಾದಗಳನ್ನು ಆ ನೀತಿಯ ಕಡೆಗೆ ಪರಸ್ಪರ ಸಹಕಾರದೊಡನೆ ಇತ್ಯರ್ಥ ಮಾಡುವವರೆಗೆ ಅಂತಿಮವಾಗಿ ಪ್ರಕಟಣೆಯನ್ನು ಹೊರಡಿಸಬಾರದೆಂದು ಹಾಗೂ ರೈತರ ಹಿತಾಸಕ್ತಿ ಹಾಗೂ ಬೆಂಗಳೂರು ಹಾಗೂ ಇತರ ನಗರಗಳ ಕುಡಿಯುವ ನೀರಿನ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ಸಂವಿಧಾನತ್ಮಕ ಹಾಗೂ ಕಾನೂನಾತ್ಮಕ ಹೋರಾಟಗಳನ್ನು ರಾಜ್ಯ ಮುಂದುವರಿಸಿಕೊಂಡು ಹೋಗಬೇಕೆಂದು, ಕೇಂದ್ರ ಸರ್ಕಾರ ಪರಿಣಾಮಕಾರಿ ವಾತಾವರಣವನ್ನು ನೀಡಬೇಕೆಂದು ಬರಗಾಲಕ್ಕೆ ಪದೇಪದೇ ತುತ್ತಾಗುತ್ತಿರುವ ಕರ್ನಾಟಕ ರಾಜ್ಯಕ್ಕೆ ನ್ಯಾಯ ಕೊಡಬೇಕೆಂಬ ನಿರ್ಣಯವನ್ನು ಮಂಡಿಸಲಾಗಿದೆ."

ಈ ಸದನದಲ್ಲಿ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಮಂಡಿಸಿರುವ ನಿರ್ಣಯ ಇದಾಗಿದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂಥ ನಿರ್ಣಯಗಳನ್ನು ಎರಡು ಸದನಗಳು ಒಕ್ಕೊರಲಿನಿಂದ ಅನುಮೋದನೆ ಮಾಡಿ ಈ ಐತೀರ್ಪಿಗೆ ನಮ್ಮ ಸಹಮತ ಸಂಪೂರ್ಣವಾಗಿ ಇಲ್ಲವೆಂದು ಈ ರಾಜ್ಯದ ಅತ್ಯುಚ್ಛವಾದ ಈ ಸದನ, ಜನತಾಂತ್ರಿಕ ಹೌಸ್‌ನಲ್ಲಿ ಈ ರೀತಿಯಾದ ಒಂದು ನಿರ್ಣಯ ಮಾಡಿಕೊಂಡಿದ್ದರೂ ಮತ್ತೆ ಇದೇ ಸದನದಲ್ಲಿ ಆ ಐತೀರ್ಪನ್ನು ಒಪ್ಪಿಕೊಳ್ಳುತ್ತೇವೆಂಬ ಅರ್ಥದಲ್ಲಿ ಮಾನ್ಯ ರಾಜ್ಯಪಾಲರ ಕೈಯಲ್ಲಿ ಹೇಳಿಸಿದ್ದೀರಿ. ಇದು ಎಂಥ ದೊಡ್ಡ ಪ್ರಮಾದ ಅಲ್ಲವೇ? ಇವತ್ತಿನದಿವಸ ಒಂದೊಂದು ಶಬ್ಧ ಕೂಡ ಬಹಳ ಮುಖ್ಯವಾಗುತ್ತದೆ. ಆ ಐತೀರ್ಪಿನ ಬಗ್ಗೆ ನಿರ್ಣಯ ಮಂಡನೆ ಆಗಿ ಎರಡು ಹೌಸ್‌ನಲ್ಲಿ ಅನುಮೋದನೆ ಸಹ ಆಗಿದೆ. ಇನ್ನೂ ಎಷ್ಟೋ ವಿಷಯಗಳನ್ನು ನಾನು ಹೇಳಬೇಕಾಗಿತ್ತು. ಆದರೆ, ನನಗೂ ಸಹ ಆಸಕ್ತಿ ಕಡಿಮೆ ಆಗುತ್ತಿದೆ. ನಾನು ರಾಜಕೀಯಕೋಸ್ಕರ ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಕೈಮುಗಿದು ಕೇಳಿಕೊಳ್ಳುವುದೇನೆಂದರೆ, ಆಗಿರುವ ತಪ್ಪುಗಳನ್ನು ಹಾಗೆ ಬಿಟ್ಟುಕೊಂಡು ಹೋದರೆ ಖಂಡಿತವಾಗಿ ಮುಂದೆ ಘನಘೋರವಾಗುತ್ತದೆ. ಆದ್ದರಿಂದ, ಸರ್ಕಾರಕ್ಕೆ ಈಗಲೂ ಸಹ ಮನಸ್ಸಿದ್ದರೆ ಅಂದರೆ, ನೆನ್ನೆದಿವಸ ಒಂದು

ಮಾತನ್ನು ಹೇಳಿದ್ದೆ. ಐತೀರ್ಪಿಗೆ ಅನುಸಾರವಾಗಿ ಎನ್ನುವುದರ ಜೊತೆಗೆ Karnataka reserves its rights ಎಂದು ಸುಪ್ರೀಂ ಕೋರ್ಟ್ ಹೇಳಿರುವ ಹಾಗೆ ಅದನ್ನಾದರೂ ಹೊಸದಾಗಿ ಸೇರಿಸಿದ್ದರೆ ನಮ್ಮ ಹಕ್ಕನ್ನು ನಾವು ಉಳಿಸಿಕೊಂಡಂತೆ ಆಗುತ್ತಿತ್ತು. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕಾವೇರಿ ವಿಚಾರವನ್ನು ನಾನು ಬಹಳ ಆಸಕ್ತಿಯಿಂದ ಮಾತನಾಡಬೇಕೆಂದು ಇದ್ದೆ. ಆದರೆ ಅದು ಆಗಲಿಲ್ಲ. ಮತ್ತೆ ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಕೈಗೆತ್ತಿಕೊಳ್ಳಬೇಕೆಂದು ನಮ್ಮ ಆಲೋಚನೆ ಇದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಇವರು ಯಾವುದಾದರೂ ಹೇಳಲಿ, ಅದನ್ನು ಇವರು ಮಾಡುತ್ತಾರೆಂದು ನಾನು ಒಪ್ಪಿಕೊಳ್ಳುತ್ತೇನೆ. ನೀರಾವರಿ ಸಚಿವರಾಗಿರುವ ಮಾನ್ಯ ಎಂ.ಬಿ.ಪಾಟೀಲ್‌ರವರು ಇದ್ದರೆ ನನ್ನ ಮಾತನ್ನು ಕೇಳಿಸಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದ 78 ನೀರಾವರಿ ಯೋಜನೆಗಳನ್ನು ಮುಗಿಸಿಬಿಡುತ್ತೇವೆಂದು ಮತ್ತು ಈ ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿಯ ಬಹಳ ಕೆಟ್ಟ ಕೆಟ್ಟ ಅನುಭವವನ್ನು ನಾವು ಕಂಡಿದ್ದೇವೆ. Upper Krishna projectಗೆ ಇಂದಿರಾಗಾಂಧಿಯವರನ್ನು ಮಾನ್ಯ ನಿಜಲಿಂಗಪ್ಪ-ನವರು ಬಿಜಾಪುರಕ್ಕೆ ಕರೆದುಕೊಂಡು ಬಂದು ಬಿಜಾಪುರದಲ್ಲಿ ಚಿನ್ನದಿಂದ ತುಲಾಭಾರ ಮಾಡಿಸಿ, 'ಅವ್ವಾ, ಕೇಂದ್ರದಿಂದ 5 ಪೈಸೆಯಾದರೂ ಕೊಡಿ.' ಎಂದು ಕೇಳಿಕೊಂಡರು. ಕೇಂದ್ರ ಸರ್ಕಾರದಿಂದ ಒಂದು ರೂ. ಬರಲಿಲ್ಲ. ಸತ್ಯ ಸತ್ಯಾನೆ. ಇಂಥವುಗಳು ದಾಖಲೆಗಳಿಗೆ ಹೋಗಬೇಕಾಗುತ್ತದೆ ಮತ್ತು ಸ್ಮರಿಸಿಕೊಳ್ಳಬೇಕಾಗುತ್ತದೆ. ನಿನ್ನೆ ಸನ್ಮಾನ್ಯ ರಮೇಶ್ ಕುಮಾರ್‌ರವರು ಒಳ್ಳೆಯ ಕೆಲಸ ಮಾಡಿದ ಪುಣ್ಯಾತ್ಮರನ್ನು ಸ್ಮರಿಸಿಕೊಳ್ಳಬೇಕು ರಾಜಕೀಯ ಬೇಡವೆಂದು ಹೇಳಿ ಮಾನ್ಯ ಹೆಚ್.ಕೆ.ಪಾಟೀಲ್‌ರನ್ನು ಕೇಳಿದರು. ಇವತ್ತು ಈ ಸದನದ ಮೂಲಕ ಒಂದು ಸಂದೇಶ ಹೋಗಬೇಕಾಗುತ್ತದೆ. ರಾಷ್ಟ್ರೀಯ ಯೋಜನೆಗಳನ್ನು ಮಾಡುತ್ತಾರೋ ಬಿಡುತ್ತಾರೋ ಅದು ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ನೀರಾವರಿ ಯೋಜನೆಗಳಿಗೆ ಮೊಟ್ಟಮೊದಲನೆಯದಾಗಿ ಒಂದು ರೂಪಾಯಿ ಕಂಡಿದ್ದು ಯಾವಾಗ ಎಂದರೆ, ದೇವೇಗೌಡರು ಪ್ರಧಾನಮಂತ್ರಿಗಳು ಆಗಿದ್ದಾಗ ಮಾತ್ರ. 1956 ರಲ್ಲಿ ಕರ್ನಾಟಕ ರಾಜ್ಯವಾಯಿತು, 1996ರಲ್ಲಿ ದೇವೇಗೌಡರು ಪ್ರಧಾನ ಮಂತ್ರಿಗಳು ಆಗುವವರೆಗೂ ಒಂದು ರೂ.

ಕೇಂದ್ರ ಸರ್ಕಾರದಿಂದ ನೀರಾವರಿ ಯೋಜನೆಗಳಿಗೆ ನಮ್ಮ ರಾಜ್ಯಕ್ಕೆ ಬಂದಿರಲಿಲ್ಲ. ಮಾನ್ಯ ದೇವೇಗೌಡರು ಒಂದು ಹೊಸ ಸ್ಕೀಂ ತಂದರು. ಅದಕ್ಕೆ ಹೇಳುವುದು, ರಾಜಕೀಯ ಜಾಣ್ಮೆ, ಬದ್ಧತೆ ಮತ್ತು ಇಚ್ಚಾಶಕ್ತಿ ಇರಬೇಕು. ಮಾನ್ಯ ದೇವೇಗೌಡರ ಮನಸ್ಸಿನಲ್ಲಿದ್ದಿದ್ದು ಕೃಷ್ಣಾ ಪ್ರಾಜೆಕ್ಟ್‌ಗೆ ದುಡ್ಡು ಕೊಟ್ಟು ಬಿಟ್ಟರೆ ಪ್ರಧಾನ ಮಂತ್ರಿಯಾಗಿ ದೇವೇಗೌಡರು ಕರ್ನಾಟಕಕ್ಕೆ ದುಡ್ಡು ಕೊಟ್ಟು ಬಂದು ಬಿಟ್ಟರು ಎಂದು ಅನ್ನುತ್ತಾರೆಂದು ಹೇಳಿ ಒಂದು ಹೊಸ ಸ್ಕೀಂ ಅನ್ನು ಕೊಡಿಸಿದರು. Brain - child of Deve Gowda. Accelerated Irrigation Benefit Programme (AIBP).ನಮ್ಮ ಅಧಿಕಾರಿಗಳು ಗ್ಯಾಲರಿಯಲ್ಲಿ ಕುಳಿತಿರುತ್ತಾರೆ ಅವರು ಆಡಳಿತ ನಡೆಸುವವರಿಗೆ ಸತ್ಯ ಹೇಳಬೇಕು. ಎಷ್ಟು ಕೊಟ್ಟರು ಗೊತ್ತಾ? ಎಲ್ಲಾ ರಾಜ್ಯಕ್ಕೂ ಕೊಟ್ಟು ಬಿಡುತ್ತೇನೆಂದು ಹೇಳಿದರು. Ongoing irrigation projects. ತಮಿಳುನಾಡಿನವರಾದರೂ ಮಾಡಿಕೊಳ್ಳಿ ದುಡ್ಡು ಕೊಡುತ್ತೇನೆ. West Bengal ದವರಾದರೂ ಮಾಡಿಕೊಳ್ಳಿ ದುಡ್ಡು ಕೊಡುತ್ತೇನೆ, ಕರ್ನಾಟಕದವರಾದರೂ ಮಾಡಿಕೊಳ್ಳಿ ಎಂದು ಹೇಳಿದರು. ದೇವೇಗೌಡರು ಆ ಸ್ಕೀಂ ತಂದಿರುವ ಆ ಉದ್ದೇಶ ಎಲ್ಲಾ ರಾಜ್ಯಕ್ಕೂ ಕೊಡುವ ನೆಪದಲ್ಲಿ first time Central Government ದುಡ್ಡು ಕರ್ನಾಟಕಕ್ಕೆ ಬರಲಿ ಎಂದು ಹೇಳಿ. ಇದುವರೆಗೆ ನನ್ನ ಹತ್ತಿರ ಇರುವ ಅಂಕಿ ಅಂಶ 2012ನೇ ಇಸವಿಯವರೆಗೆ Accelerated Irrigation Benefit Programmeನಲ್ಲಿ ಎಷ್ಟು ದುಡ್ಡು ಬಂದಿದೆ ಎಂದರೆ ನನ್ನ ಲೆಕ್ಕ ಇನ್ನು ಜಾಸ್ತಿ ಇರಬಹುದು. ನನ್ನ rough estimate ಸುಮಾರು 8,000 ಕೋಟಿ ರೂ.ಗಳು ಬಂದಿದೆ. ಬಿಜೆಪಿಯವರು ಹೇಳುತ್ತಿದ್ದರು ಚೆಕ್ ಡ್ಯಾಂ ಮಾಡಿಸಿ ಬಿಟ್ಟರಿ ಅಲ್ಲಿಗೊಂದು 5 ಕೋಟಿ ರೂ.ಗಳನ್ನು ಕೊಟ್ಟು ಬಿಟ್ಟರಿ. ಈ Minor Irrigation ದಲ್ಲಿ ಮಾಡಿ ಬಿಟ್ಟರಿ. ಚೆಕ್ ಡ್ಯಾಂ ಗೆ ಕೊಟ್ಟಿರುವ ಎಲ್ಲಾ ದುಡ್ಡು ಮಾನ್ಯ ದೇವೇಗೌಡರು ಕೊಟ್ಟಿರುವ ದುಡ್ಡು. ಈ AIBPನಲ್ಲಿ ಏನು 8,000 ಕೋಟಿ ರೂ.ಗಳು ಬಂತು ಅದರಿಂದಲೇ ನಡೆಯುತ್ತಿರುವುದು. ಆದ್ದರಿಂದ ನಾವು ಸತ್ಯವನ್ನು ಮರೆ ಮಾಚುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು

ಯಾವುದೇ ಒಂದು ಯೋಜನೆಯನ್ನು ಮಾಡಬೇಕಾದಾಗ ಎಲ್ಲಾ ರಾಜ್ಯಗಳಿಂದ ಬರತಕ್ಕಂಥ ಮಾದರಿಯ ಹಿನ್ನೆಲೆಯಲ್ಲಿ ಸಲಹೆಯ ಹಿನ್ನೆಲೆಯಲ್ಲಿ ನೆನೆಗುದಿಗೆ ಬಿದ್ದಿರತಕ್ಕಂಥ ಯೋಜನೆಗಳನ್ನು ತರುವುದಕ್ಕೋಸ್ಕರ ಪ್ರಸ್ತಾವನೆ ಬಂದು ಅದು ಅಂತಿಮವಾಗಿ ಜಾರಿಗೊಳ್ಳುವಂಥ ಸಂದರ್ಭಕ್ಕೆ ಅದು ಅನೇಕ ವರ್ಷಗಳು ತಡೆಯುತ್ತದೆ ಅದು ನಿಜ. AIBP ಯೋಜನೆ ಎನ್ನತಕ್ಕಂಥದ್ದು ದೇವೇಗೌಡರು ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಆಗಿದ್ದರು. ಅಂದರೆ ಯೋಜನೆ ಪ್ರಾರಂಭ ಆಗಿದ್ದು ಅನುಷ್ಠಾನ ಆಗಿದ್ದು 11 ತಿಂಗಳಲ್ಲಿ ಅಲ್ಲ. ಕೇಂದ್ರ ಸರ್ಕಾರದಿಂದ ಇದು ನಡೆಯುತ್ತಲೇ ಇರುತ್ತದೆ. ದಯಮಾಡಿ ಕೇಳಿ ಈ AIBP ಯೋಜನೆಯಲ್ಲಿ ಅದನ್ನು ಬಂಡವಾಳ ಮಾಡಿಕೊಂಡು ನಾವು ಇವತ್ತು Minor Irrigation ದಲ್ಲಿಯೂ ಕೊಟ್ಟಿರುವಂಥ ಕೆಲಸವನ್ನು ಕೂಡ ನಾವು ಮಾಡಿರುತ್ತೇವೆ. ಅತಿ ಹೆಚ್ಚಿನ ಹಣವನ್ನು ನಾನೂ ಕೂಡ ನನ್ನ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗಿರುತ್ತೇನೆ. ದಯಮಾಡಿ ನಾನು ಹೇಳುತ್ತಿದ್ದೇನೆ, ತಾವು ಒತ್ತಿ ಒತ್ತಿ ಹೇಳುತ್ತಿದ್ದೀರಿ 11 ತಿಂಗಳಲ್ಲಿ ಎಲ್ಲಾ ಆಯಿತು ಎಂದು, ನಾನು ಒಂದನ್ನು ಒಪ್ಪುತ್ತೇನೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದಂಥ ಸಂದರ್ಭದಲ್ಲಿ ಯೋಜನೆ ಅನುಷ್ಠಾನವಾಗಿದೆ ನಾನು ಒಪ್ಪುತ್ತೇನೆ. ಆ ಯೋಜನೆಗೆ ಸಹಾಯವಾಗುತ್ತದೆ. ಆದರೆ ಯೋಜನೆ ಪೂರಕವಾಗಿ ಜಾರಿ ಆಗಬೇಕಾದಾಗ ಪೂರ್ವಭಾವಿಯಾಗಿ ಎಲ್ಲಾ ರಾಜ್ಯಗಳ ಜೊತೆಯಲ್ಲಿ ಚಿಂತನೆ ಆಗಿ ಕಾರ್ಯಗತವಾಗಬೇಕಾದಾಗ ತನ್ನದೇ ಆದ ಕಾಲವನ್ನು ತೆಗೆದುಕೊಂಡಿರುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಜಯಚಂದ್ರರವರು ಹೇಳಿರುವ ಮಾತನ್ನು ನಾನು ಒಪ್ಪುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನೀವು ಆ ಯೋಜನೆ ಹಂತ ಹಂತವಾಗಿ ಬಂದು ಮಾನ್ಯ ದೇವೇಗೌಡರು 11 ತಿಂಗಳು ಪ್ರಧಾನ ಮಂತ್ರಿಯಾದಾಗ ಆ ಸ್ಕೀಂ implement ಆಯಿತು ಎಂದು ಹೇಳಿದಿರಿ. ನೀವು ಸದನವನ್ನು ದಾರಿ ತಪ್ಪಿಸಬೇಡಿ. ಆಗ ನಾನು ಲೋಕಸಭಾ ಸದಸ್ಯನಾಗಿದ್ದೆ. ಆ ಸ್ಕೀಂ ಅನ್ನು ತರುವುದಕ್ಕೆ ಮೊದಲನೆಯ ಬಾರಿಗೆ ಹೊರಟಾಗ ಮಾನ್ಯ ಚಂದ್ರಬಾಬು ನಾಯ್ಡುರವರು ದೇವೇಗೌಡರಿಗೆ

ಏನು ಹೇಳಿದರು ಎನ್ನುವುದನ್ನು ನೆನೆಪಿಸಿಕೊಡುವುದಕ್ಕೆ ಬಯಸುತ್ತೇನೆ. 'ನಿಮ್ಮನ್ನು ಪ್ರಧಾನ ಮಂತ್ರಿ ಮಾಡಿದ್ದು ಕರ್ನಾಟಕದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಹಣ ಕೊಡಲಿಕ್ಕೆ ಮಾಡಲಿಲ್ಲ' ಎಂದು ಹೇಳಿದರು. 'ಪ್ರಧಾನ ಮಂತ್ರಿ ಆಗುವುದಕ್ಕೆ ನಿಮ್ಮನ್ನು ಕೇಳಿ ನಾನು ಅರ್ಜಿ ಹಾಕಿಕೊಂಡು ಬಂದಿಲ್ಲ ಎಂದು ದೇವೇಗೌಡರು ಅವರಿಗೆ ತಿರುಗೇಟು ಕೊಟ್ಟಿದ್ದಾರೆ. ಆ ಸ್ಕೀಂ ಅನ್ನು ತರಬೇಕೆಂದು ಯಾವ ರಾಜ್ಯವು ಪ್ರಪೋಸಲ್ ಕೊಟ್ಟಿರಲಿಲ್ಲ. ದುಡ್ಡು ಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಕೇಳಿದಾಗ ಕೇಂದ್ರ ಸರ್ಕಾರ Irrigation project ಗಳಿಗೆ ಹಣ ಕೊಡತಕ್ಕಂಥ ಔದಾರ್ಯವನ್ನು ತೋರಿರಲಿಲ್ಲ. ಆದ್ದರಿಂದ ಕಾರ್ಯಕ್ರಮ ತರಲಿಕ್ಕೆ ಹಿಂದಿನಿಂದ ನಡೆದುಕೊಂಡು ಬಂದ ಕಾರ್ಯಕ್ರಮಗಳು ಅಲ್ಲ. ಅದು ದೇವೇಗೌಡರು ಕೊಟ್ಟಿರತಕ್ಕಂಥ ಕಾರ್ಯಕ್ರಮ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಲ್ಲಿ ಇದು ಯಾವಾಗ ಜಾರಿ ಆಯಿತು, ಎಷ್ಟು ಹಣ ಬಂತು, ಈಗ ಅವರು 8,000 ಕೋಟಿ ರೂ.ಗಳು ಎಂದು ಹೇಳುತ್ತಿದ್ದಾರೆ. ಅದು ಇನ್ನು ಜಾಸ್ತಿ ಇದೆ ಎಂದು ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ಆ ಎಲ್ಲಾ ಮಾಹಿತಿಯನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು : ತಾವು ಬೇಗ ಮುಗಿಸಿ, ಇದನ್ನು close ಮಾಡಿ. ಮತ್ತೆ ವಿಷಯವನ್ನು ಹಿಂದಕ್ಕೆ ತೆಗೆದುಕೊಂಡು ಹೋಗಬೇಡಿ.

ಶ್ರೀ ವೈ.ಎಸ್.ವಿ.ದತ್ತ :-ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಂತೆ ಈ AIBP ಯೋಜನೆ ಬಗ್ಗೆ, ಇದು ರೆಕಾರ್ಡ್‌ಗೆ ಸರಿಯಾಗಿ ಹೋಗಬೇಕಾಗುತ್ತದೆ. ನನ್ನ ಹತ್ತಿರ ದಾಖಲೆ ಇದೆ. AIBP ಎನ್ನುವಂಥದ್ದು ಹೊಸ ಕಲ್ಪನೆ ಅದು ದೇವೇಗೌಡರ ಮೆದುಳಿನ ಕೂಸು, ಅದನ್ನು ಹಿಂದೆ ಯಾರೂ ಯೋಚನೆ ಮಾಡಿರಲಿಲ್ಲ. ಇದು ಬಹಳ important. ಅದಕ್ಕೂ ಮುಂಚೆ ಪ್ರಪೋಸಲ್ ತರಿಸಿಕೊಳ್ಳಬೇಕೆಂದು ಮಾನ್ಯ ಜಯಚಂದ್ರರವರು ಹೇಳಿದರು ಅವರಿಗೆ ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ದೇವೇಗೌಡರು ಪ್ರಧಾನ ಮಂತ್ರಿಗಳಾಗಿ ಕುಳಿತುಕೊಂಡಾಗ ಅವರು ರಾಜ್ಯ ಸರ್ಕಾರಕ್ಕೆ ಪತ್ರವನ್ನು ಬರೆದರು. ನೀವು ಪ್ರಪೋಸಲ್ ಕಳುಹಿಸಿ ಅದರ ಮೇಲೆ ಪ್ಲ್ಯಾನ್ ಬಿಲ್ಡ್-ಅಪ್ ಮಾಡುತ್ತೇನೆಂದು ಹೇಳಿದರು. ಮಾನ್ಯ ದೇವೇಗೌಡರಿಗೆ ಆ ಜಾಣ್ಮೆ ಇತ್ತು.

ಅಧ್ಯಕ್ಷರು : ಜಾಣ್ಮೆ ಇತ್ತು, ಗೊತ್ತು.

ಶ್ರೀ ಟಿ.ಬಿ.ಜಯಚಂದ್ರ : ಮಾಡಿದವರ ಪಾಪ ಆಡಿದವರ ಬಾಯಿಯಲ್ಲಿ ಎಂದಂತೆ... . .. ..

ಶ್ರೀ ವೈ.ಎಸ್.ವಿ.ದತ್ತ :– ಎರಡು ಲೇಖನ ಇದೆ. ಅದನ್ನು ನಾನು ಓದಲ್ಲ, ಅದು ಬಹಳ important. ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಬಹಳ ಆಸೆ, ನಿರೀಕ್ಷೆ ಇರುವುದರಿಂದ ನಾನು ಈ ಲೇಖನಗಳನ್ನು ಕಳುಹಿಸುತ್ತಿದ್ದೇನೆ. ಏಕೆಂದರೆ ಐತೀರ್ಪಿನ ಅನುಸಾರವಾಗಿ ಹಾಕಿದರೆ ಏನಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ದೂರದೃಷ್ಟಿತ್ವವನ್ನು ತೋರಿ ಹೇಳಿದರು. ರಾಮಸ್ವಾಮಿ ಆರ್.ಐಯ್ಯರ್ ಎಂದು Irrigation Department ನಲ್ಲಿ ಕಾರ್ಯದರ್ಶಿಗಳಾಗಿದ್ದರು. ಮತ್ತೆ ಈಗ World Bank ನಲ್ಲಿ advisor ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಹಿಂದು ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದರು. 'Cauvery dispute-a lament and a proposal. 'The supreme Court and River water disputes' ಎಂದು ಇನ್ನೊಂದು Financial Timesನಲ್ಲಿ ಬಂದಿರುವಂಥ ಲೇಖನ. ಈ ಎರಡು ಲೇಖನಗಳನ್ನು ತಮ್ಮ ಮೂಲಕ ಅವರಿಗೆ ಕಳುಹಿಸುತ್ತೇನೆ. ಏಕೆಂದರೆ ನಾನು ಓದುವುದಕ್ಕೆ ಹೋದರೆ ನೀವು ನನಗೆ time ಕೊಡುವುದಿಲ್ಲ. ಎಷ್ಟು ಮಹತ್ವದ್ದು ಇದೆ ಎಂದರೆ, ರಾಮಸ್ವಾಮಿ ಆರ್.ಐಯ್ಯರ್ ಎಂದರೆ ಅವರು ತಮಿಳುನಾಡಿನವರು. ತಮಿಳುನಾಡಿನವರ ಪರ ಹೇಳಬಹುದಾಗಿತ್ತು.

ಅಧ್ಯಕ್ಷರು : ಈಗ ಏನು ಮಾಡಬೇಕು ಗೊತ್ತೆ, Irrigation demand ಬರುತ್ತದೆ ನೋಡಿ ಆ time ನಲ್ಲಿ ಇವೆಲ್ಲವನ್ನು ಮಾತನಾಡಬೇಕು.

ಶ್ರೀ ವೈ.ಎಸ್.ವಿ.ದತ್ತ :– ಆಗಲೂ ನೀವು ಹೀಗೆ ಮಾಡಿ ಬಿಟ್ಟರೆ?

ಅಧ್ಯಕ್ಷರು : Debate initiate ಮಾಡಲು ನಿಮಗೇ ಕೊಟ್ಟು ಬಿಟ್ಟರೆ ಆಗ ಎಲ್ಲಾ ಹೇಳುವುದಕ್ಕೆ ಬರುತ್ತದೆ.

ಶ್ರೀ ವೈ.ಎಸ್.ವಿ.ದತ್ತ :– Irrigation Department ವಿಷಯ ಬಂದಾಗ 2–3 ಗಂಟೆ ಸಮಯ ಕೊಡುತ್ತೀರಾ?

ಅಧ್ಯಕ್ಷರು : ಖಂಡಿತ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಈ ಎರಡು ಲೇಖನಗಳನ್ನು ನಾನು ಕಳುಹಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನೋಡಲಿ. ತಮಿಳುನಾಡಿನವರಾಗಿ ಅವರು ಹೇಳುತ್ತಾರೆ. ಏಕೆಂದರೆ ಇದು ಬಹಳ importamt. ನನಗೆ ದೇವೇಗೌಡರು ಹೇಳಿದರು, ಈ points ಅನ್ನು ಅರ್ಥಮಾಡಿಕೊಂಡರೆ ನಾವು ಹೇಗೆ ಮಾಡಬಹುದೆಂದು ಅವರೇ ಹೇಳುತ್ತಾರೆ. ಅವರು ತಮಿಳುನಾಡಿನವರಿಗೆ ಸಲಹೆ ಕೊಟ್ಟಿದ್ದಾರೆ. 20 ಟಿ.ಎಂ.ಸಿ. ನೀರು ಜಾಸ್ತಿ ಕೊಟ್ಟುಬಿಡಿ ಹೊಂದಾಣಿಕೆ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತು. ಈಗ ನೀರಾವರಿ ವಿಷಯ ಆಯಿತು.

(ಗೊಂದಲ)

ಅಧ್ಯಕ್ಷರು : ನೀವು Senior Member ಆಗಿ Co-operate ಮಾಡದಿದ್ದರೆ ನಾನು ಏನು ಮಾಡುವುದಕ್ಕಾಗುತ್ತದೆ? ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ವೈ.ಎಸ್.ವಿ.ದತ್ತ :- ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬಗ್ಗೆ ಒಂದು ಸಲಹೆ ಕೊಡುತ್ತಿದ್ದೇನೆ ಮಾನ್ಯ ಸಚಿವರು ಗಮನಿಸಬೇಕು. ಆರೋಗ್ಯ ಇಲಾಖೆಯ ಬಗ್ಗೆ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು. ನನಗೆ ಆಗ ಜ್ಞಾಪಕ ಬಂತು. ಏಕೆಂದರೆ ಜಿಲ್ಲೆಗೊಂದು ಆಸ್ಪತ್ರೆ ಮಾಡಿ ಎಂದು ಅವರು ಹೇಳಿದರು. Super Speciality Hospital ಮಾಡುವುದು ಬೇಡ, ತಾಲ್ಲೂಕು ಆಸ್ಪತ್ರೆಗಳನ್ನು ಸರ್ಕಾರ ಮೇಲ್ದರ್ಜೆ ಎಂದು ಮಾಡಿದೆ. ಅಲ್ಲಿ ಡಾಕ್ಟರ್‌ಗಳು ಇಲ್ಲ. ನಮ್ಮ ಕಡೂರಿನಲ್ಲಿ 12 sanctioned posts ಇದ್ದರೆ 4 ಜನ ಡಾಕ್ಟರ್ಸ್ ಇದ್ದಾರೆ. 8 ಜನ ಡಾಕ್ಟರ್ಸ್ ಅನ್ನು ಎರಡು ವರ್ಷದಿಂದ ನೇಮಕ ಮಾಡಿಲ್ಲ. ಏಕೆ ಎಂದು ನಾವು ಕೇಳಿದರೆ, Health Commissioner ನವರನ್ನು ಕೇಳಿ ಎಂದು DHO ರವರು ಹೇಳುತ್ತಾರೆ. Health Commissioner ನವರು ಏನು ಹೇಳುತ್ತಾರೆಂದರೆ, Health Commissioner ನವರು ಗ್ಯಾಲರಿಯೊಳಗೆ ಬಂದಿದ್ದರೆ ಹೇಳಬೇಕು. 'ಹಿಂದೆ ಇದ್ದಂತಹ ಬಿ.ಜೆ.ಪಿ. ಸರ್ಕಾರ, ಡಾಕ್ಟರ್‌ಗಳನ್ನೂ ಕೂಡ ಮೇಷ್ಟ್ರುಗಳ ರೀತಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುತ್ತಿದ್ದೇವೆ ಒಂದು ವಿಧೇಯಕವನ್ನು ತಂದು ಅಪ್ರೂವ್ ಮಾಡಿದ್ದಾರೆ. ಎಂತಹ ಘನ ಘೋರವಾದ ತಪ್ಪಾಗಿದೆ.

ಇದರಿಂದ ಎಲ್ಲಾ ಡಾಕ್ಟರ್‌ಗಳು ಕೌನ್ಸಿಲಿಂಗ್‌ಗೆ ಹೋಗಿ ನನಗೆ ಎಗಟಿ ಬೇಡ, ನನ್ನನ್ನು ಮೂಡಿಗೆರೆಗೆ ಹಾಕಿ, ನನಗೆ ಮೂಡಿಗೆರೆ ಬೇಡ ಬಣಕಲ್‌ಗೆ ಹಾಕಿ ಎಂದು ಮಾಡಿಸಿಕೊಂಡು ಕುಳಿತುಕೊಳ್ಳುತ್ತಿದ್ದಾರೆ. ಡಾಕ್ಟರ್‌ಗಳನ್ನು ಕೇಳಿದರೆ, ಅವರನ್ನು ಏಕೆ ಕಳುಹಿಸುತ್ತಿದ್ದೀರಿ relieve ಮಾಡಬೇಡಿ ಎಂದರೆ, ಅವರಿಗೆ transfer ಆಗಿದೆ. ನಾವು relieve ಮಾಡಬೇಕಾಗುತ್ತದೆ ಎಂದು ಇವರು ಹೇಳುತ್ತಾರೆ. ಹಾಗಾಗಿ ಎಲ್ಲಾ ಕಡೆ ಇವತ್ತು ಡಾಕ್ಟರ್‌ಗಳ ಕೊರತೆ ಇದೆ. ಎಲ್ಲಾ ಹಳ್ಳಿಗಳಲ್ಲಿ ಜನ ಡೆಂಗ್ಯೂ ಜ್ವರಕ್ಕೆ ಒಳಗಾಗಿ ಪಜೀತಿಗೆ ಒಳಗಾಗಿದ್ದಾರೆ. ಅಲ್ಲಿ ಔಷಧಿಗಳನ್ನು ಬರೆದುಕೊಡುವವರು ಕೂಡ ಒಬ್ಬರೂ ಗತಿ ಇಲ್ಲ. ಎಲ್ಲಾದರೂ ಮಣಿಪಾಲ್‌ಗೆ ಕರೆದುಕೊಂಡು ಹೋಗಿ, ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿ ಎಂದು ಬರೆದುಕೊಡುತ್ತಿದ್ದಾರೆ. ಬಹಳ ಕಷ್ಟವಾಗುತ್ತಿದೆ. ಸರ್ಕಾರ ವಿಧೇಯಕ ತಂದಿದೆ ಎಂದು ಇಟ್ಟುಕೊಂಡು ಡಾಕ್ಟರ್‌ಗಳು ಬರದ ಹಾಗೆ ಆಗಬಾರದು.

ಅಧ್ಯಕ್ಷರು : ಕೌನ್ಸಿಲಿಂಗ್ ಅನ್ನು ತೆಗೆಯಬೇಕು. ಅದನ್ನು ಹೇಳಿ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತ : ಕೌನ್ಸಿಲಿಂಗ್ ಇರುವುದರಿಂದ ಬಹಳ ಕಷ್ಟವಾಗಿದೆ. ಇದರಿಂದ ರಾಜ್ಯಕ್ಕೆ ಬಹಳ ಪಜೀತಿಯಾಗಿದೆ.

(ಗೊಂದಲ)

ಅಧ್ಯಕ್ಷರು : ನನಗೂ ಅದೇ ಅನುಭವವಾಗಿದೆ. ಮೊನ್ನೆ ನಾನು ಹೋಗಿದ್ದಾಗ ಈ ಕೌನ್ಸಿಲಿಂಗ್‌ನಿಂದಾಗಿ ಅಲ್ಲಿ ಡಾಕ್ಟರ್‌ಗಳು ಯಾರೂ ಇಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತ : ಈಗ ತಕ್ಷಣವೇ ಸದನ ಮುಗಿಯುವುದರೊಳಗೆ ಸರ್ಕಾರ ಡಾಕ್ಟರ್‌ಗಳನ್ನು ಹೇಗೆ ತುಂಬಿಕೊಳ್ಳಲಾಗುವುದು ಎನ್ನುವುದನ್ನು ಹೇಳಬೇಕು.ನನಗೆ ಇದರ ಬಗ್ಗೆ ಒಂದು writing ನಲ್ಲಿ ಕೊಡಪ್ಪಾ ಎಂದು DHO ರವರನ್ನು ಕೇಳಿದೆ. ಆಗ ಅವರು 'ನಾವು ಯಾರಾದರೂ ಸ್ಥಳೀಯ ಅಭ್ಯರ್ಥಿಗಳನ್ನು ಡಾಕ್ಟರ್‌ಗಳನ್ನಾಗಿ ತುಂಬಿಕೊಳ್ಳುವುದಕ್ಕೆ ತಿಂಗಳಿಗೆ 10,000 ರೂಪಾಯಿಯನ್ನು ಕೊಡುತ್ತೇವೆ, 15,000 ರೂಪಾಯಿ ಕೊಡುತ್ತೇವೆ ಕೆಲಸ ಮಾಡುತ್ತೀರಾ ಎಂದರೆ ಯಾರೂ ಮುಂದೆ ಬಂದಿಲ್ಲ. ಎರಡು ಬಾರಿ ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟಿದ್ದೇವೆ.' ಎಂದು ಹೇಳುತ್ತಾರೆ. ಇದು ವಸ್ತುಸ್ಥಿತಿ ಮಾನ್ಯ ಅಧ್ಯಕ್ಷರೆ, ಏಕೆಂದರೆ ನಾವು ಹಳ್ಳಿಯಲ್ಲಿ ತಿರುಗುವವರು. ದಿನ ಬೆಳಗಾದರೆ

ನೋಡುತ್ತೇವೆ. ನಮಗೆ ground realities ಗೊತ್ತಿರುತ್ತದೆ. ಆ ಕಾರಣಕ್ಕೆ ಬಹಳ ಕಷ್ಟ. ನಮ್ಮನ್ನು ಗೆಲ್ಲಿಸಿರುವವರು 'ಏನಪ್ಪಾ ಡಾಕ್ಟರ್ಸ್ ಹಾಕಿಸಲಿಲ್ಲವಲ್ಲಾ?' ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕೈ ಮುಗಿದು ಕೇಳುತ್ತೇನೆ, ಇವತ್ತು ನಾಳೆಯೊಳಗೆ ಸರ್ಕಾರ ಏನು ಮಾಡುತ್ತದೆ? ಡೆಂಗ್ಯೂ ಜ್ವರ ಕಾಡುತ್ತಿದೆ, ಮಳೆ ಬಂದಿದೆ, ಸೊಳ್ಳೆ ಕಾಟ, ಹಳ್ಳಿಗಳ ಪರಿಸ್ಥಿತಿ ಬಹಳ ಪಜೀತಿಯಾಗಿದೆ. ದಯವಿಟ್ಟು ಸರ್ಕಾರ ಇದಕ್ಕೆ ಸಮರೋಪಾದಿಯಲ್ಲಿ ಒಂದು ತೀರ್ಮಾನ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಆದರೆ, ನನ್ನ ಉತ್ಸಾಹ ಕುಗ್ಗಿದೆ. ಹೇಳಬೇಕಾದಂತಹ ವಿಷಯವನ್ನು ಮನಸ್ಸಿನಲ್ಲಿಯೇ ಇಟ್ಟುಕೊಂಡಿದ್ದೇನೆ. ಇನ್ನೊಮ್ಮೆ ತಾವು ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತಿದ್ದೇನೆ. ನಮಸ್ಕಾರ.

ಅಧ್ಯಕ್ಷರು : ಶ್ರೀ ನಾರಾಯಣಸ್ವಾಮಿಯವರು ಮಾತನಾಡುವುದು. ಅವರು ಹಾಜರಿಲ್ಲ. ಶ್ರೀ ಬಿ.ಆರ್.ಯಾವಗಲ್‌ರವರು ಮಾತನಾಡುವುದು. ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ಮಾನ್ಯ ದತ್ತರವರಿಗೆ ಸಮಯ ಕೊಟ್ಟಿದ್ದು ನೋಡಿದರೆ ನಾವೂ ಎಳೆಯಬಹುದು ಅನಿಸುತ್ತದೆ.

ಅಧ್ಯಕ್ಷರು : ಆಯಿತು, ಮಾತನಾಡಿ.

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಇವತ್ತು ಸದನದಲ್ಲಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲಿ ನಾನು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಲು ಬಯಸುತ್ತೇನೆ. ರಾಜ್ಯಪಾಲರ ಭಾಷಣ, ಕಾಂಗ್ರೆಸ್ ಸರ್ಕಾರದ, ಮಾನ್ಯ ಸಿದ್ದರಾಮಯ್ಯನವರ ನೇತೃತ್ವ ಸರ್ಕಾರದ ಒಂದು ಮುನ್ನೋಟವನ್ನು ಐದು ವರ್ಷಗಳ ಕಾಲ ತನ್ನ ಆದ್ಯತೆ, ತನ್ನ ಗೊತ್ತುಗುರಿಗಳು, ತನ್ನ ಪ್ರಾಶಸ್ತ್ಯಗಳು, ತನ್ನ ಬದ್ಧತೆಯನ್ನು ಸೂಕ್ಷ್ಮವಾಗಿ ಇವತ್ತು ಈ ಸದನದಲ್ಲಿ ರಾಜ್ಯಪಾಲರ ಭಾಷಣದ ಮೂಲಕ ಪ್ರಚುರಪಡಿಸಿದ್ದಾರೆ. ಅದನ್ನು ಒಪ್ಪಿಸಿದ್ದಾರೆ. ಹಾಗಾಗಿ ನೂತನವಾಗಿ ಈ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಂತಹ ಸರ್ಕಾರ, ಬಹಳ ಜನರ ಅಪೇಕ್ಷೆಯೂ ಆಗಿತ್ತು. ಕರ್ನಾಟಕ ರಾಜ್ಯದಲ್ಲಿ ಏನು 4–5 ವರ್ಷಗಳಿಂದ ರಾಜಕೀಯ ಅತಂತ್ರತೆ ಗೊಂದಲಗಳು ನಿರ್ಮಾಣವಾಗಿತ್ತು, ಆ ಗೊಂದಲಕ್ಕೆ ಒಂದು ಸರಿಯಾದಂತಹ ದಾರಿಯನ್ನು, ಗುರಿಯನ್ನು ರಾಜ್ಯದ ಜನತೆ,

ಮತದಾರರು ತಮ್ಮ ತೀರ್ಮಾನದ ಮೂಲಕ ಇವತ್ತು ಸರ್ಕಾರ ರಚನೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇದೊಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ಶ್ಲಾಘನೀಯವಾದಂತಹ, ಮೆಚ್ಚ ಬೇಕಾದಂತಹ ಸಂಗತಿ. ಬಹಳ ಅಚ್ಚುಕಟ್ಟಾಗಿ ಜನ ಮಾಡಿದ್ದಾರೆ. ಒಂದು ಆದೇಶವನ್ನು ನೀಡಿದ್ದಾರೆ. ಒಂದು ಸ್ಥಿರತೆಗೋಸ್ಕರ, ರಾಜ್ಯದ ಆಡಳಿತಕ್ಕೋಸ್ಕರ, ರಾಜ್ಯದ ರಾಜಕೀಯ ವ್ಯವಸ್ಥೆಗೋಸ್ಕರ ಎಂದು ನಾನು ಭಾವಿಸುತ್ತೇನೆ. ಅದು ವಿಶೇಷವಾಗಿ, ಹಲವಾರು ವರ್ಷಗಳ ಆಡಳಿತಗಳಿದ್ದು, ಆಡಳಿತಗಳ ನಂತರ ಏನು ಒಂದು ಕಾಲದಲ್ಲಿ ಈ ರಾಜ್ಯ ಪ್ರಗತಿಪರ ಎಂದು ಅನಿಸಿಕೊಂಡಿತ್ತು. ತನ್ನ ಆರ್ಥಿಕ ಧೋರಣೆಗಳ ಮೂಲಕ ಅನೇಕ ವಿಧವಾದಂತಹ ಕ್ರಾಂತಿಕಾರಕ ಬದಲಾವಣೆಗಳ ಮೂಲಕ ವಿಶೇಷವಾಗಿ ಭೂ ಕಾಯ್ದೆಯನ್ನು ಈ ರಾಜ್ಯದಲ್ಲಿ ತರುವುದರ ಮೂಲಕ, ಗೇಣಿದಾರರಿಗೆ ಹಕ್ಕನ್ನು ಕೊಡುವುದರ ಮೂಲಕ, ಏನು ಜಮೀನ್ದಾರಿ ಪದ್ಧತಿ ಇತ್ತು, ಅದಕ್ಕೆ ಮಂಗಳ ಹಾಡುವುದರ ಮೂಲಕ ರಾಜ್ಯದ ಲಕ್ಷ ಲಕ್ಷ ಗೇಣಿದಾರರಿಗೆ ಅವರ ಆಸ್ತಿ ಹಕ್ಕನ್ನು ನೀಡುವುದರ ಮೂಲಕ ಅವರಿಗೆ ಒಂದು ಸ್ಥಿರತೆಯನ್ನು ತಂದು ಕೊಡುವುದರ ಮೂಲಕ ಅವರ ಜೀವನಕ್ಕೆ, ಅವರ ಕುಟುಂಬಕ್ಕೆ ಶಾಶ್ವತವಾದಂತಹ ಅಸ್ತಿತ್ವವನ್ನು ತಂದು ಕೊಡುವುದರ ಮೂಲಕ ಅವರ ಬದುಕಿಗೆ ಒಂದು ದಾರಿಯನ್ನು ತೋರಿಸುವುದರ ಮೂಲಕ ಬಹಳ ಕ್ರಾಂತಿಕಾರಕ ಬದಲಾವಣೆಯನ್ನು ತಂದಿದ್ದು ಈ ರಾಜ್ಯದಲ್ಲಿ ನಾವು ನೋಡಿದ್ದೇವೆ.

(ಈ ಹಂತದಲ್ಲಿ ಡಾ.ಎ.ಬಿ.ಮಾಲಕರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದರಲ್ಲೂ ಕೂಡ ಸಮಾನತೆಯನ್ನು, ಸಾಮಾಜಿಕ ಬದಲಾವಣೆಯನ್ನು ರಾಜಕೀಯ ಪ್ರಕ್ರಿಯೆ ಮೂಲಕ ನಿರ್ಧಾರಗಳ ಮೂಲಕ ಮಾಡಿ ರಾಜ್ಯದ ಹಿಂದುಳಿದ ವರ್ಗಗಳು ಬಡವರು, ಯಾರಿಗೆ ಸಹಾಯದ ಅವಶ್ಯಕತೆ ಇತ್ತು, ಯಾರಿಗೆ ಸರ್ಕಾರದ ಬೆಂಬಲ ಬೇಕಾಗಿತ್ತು ಹಲವಾರು ವಿಧಾನಗಳಿಂದ, ಹಲವಾರು ನೂತನ ಶಾಸನಗಳ ಮೂಲಕ ಸರ್ಕಾರದ ನೀತಿ–ನಿಯಮಗಳ ಮೂಲಕ, ಬಡ ಮಕ್ಕಳಿಗೆ ಶಾಲೆಯಲ್ಲಿ ಕಾಯ್ದಿರಿಸುವಿಕೆ, ನೌಕರಿಯಲ್ಲಿ ಕಾಯ್ದಿರಿಸುವಿಕೆ ಮತ್ತು ರಾಜಕೀಯ ವಿಕೇಂದ್ರಿಕರಣದ ಮೂಲಕ ಯಾರಿಗೆ ಅಧಿಕಾರದಿಂದ ದೂರವಾಗಿದ್ದರು, ವಂಚಿತರಾಗಿದ್ದರು, ಯಾರಿಗೆ ಅಧಿಕಾರದಲ್ಲಿ

ಇಲ್ಲಿಯವರೆಗೂ ಭಾಗವಹಿಸಲು ಅವಕಾಶ ಸಿಕ್ಕಿರಲಿಲ್ಲ, ಅವರೆಲ್ಲರಿಗೂ ಸಹಿತ ರಾಜಕೀಯ ಪ್ರಕ್ರಿಯೆಯಲ್ಲಿ, ಜನತಂತ್ರ ವ್ಯವಸ್ಥೆಯಲ್ಲಿ ಭಾಗವಹಿಸುವಂತಹ ಕ್ರಾಂತಿಕಾರಕ ಬದಲಾವಣೆ ತರುವಂತಹ ಒಂದು ಕೆಲಸ ನಡೆದಿದೆ. ಈ ರಾಜ್ಯದಲ್ಲಿ ನಡೆದಿರುವುದನ್ನು ನಾವು ನೋಡಿದ್ದೇವೆ. ಹಾಗಾಗಿ ಹಲವಾರು ವರ್ಷಗಳಿಂದ ಈ ಬದಲಾವಣೆ ಪ್ರಕ್ರಿಯೆ ಸ್ವಲ್ಪ ನಿಧಾನವಾಗಿತ್ತು ಎನ್ನುವ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಈ ಬಾರಿ ಬಂದಿರತಕ್ಕಂಥ ಆದೇಶ ಬಹಳ ಸ್ಪಷ್ಟವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ಸ್ಥಗಿತಗೊಂಡಂತಹ, ನಿಧಾನಗೊಂಡಂತಹ ಈ ಪ್ರಕ್ರಿಯೆಗಳೂ ಸಹಿತ ವೇಗದಲ್ಲಿ ನಡೆದು ಸಾಕಷ್ಟು ಬದಲಾವಣೆ ಈ ರಾಜ್ಯದಲ್ಲಿ ಬರಬೇಕು. ಪರಿವರ್ತನೆಯಾಗಬೇಕು ಎನ್ನುವಂತಹ ಉದ್ದೇಶದಿಂದ ಈ ಸರ್ಕಾರ ವಿಶೇಷವಾಗಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸರ್ಕಾರ ಬರಲಿಕ್ಕೆ ಕಾರಣವಾಯಿತು ಎನ್ನುವ ಆದೇಶವನ್ನು ಈ ಜನರ ಆದೇಶದಿಂದ ನಾವು ನೋಡಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಹಲವಾರು ವಿಚಾರಗಳನ್ನು ತಮ್ಮ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಲಾಗಿದೆ. ನಾನು ವಿಶೇಷವಾಗಿ ರೈತಾಪಿವರ್ಗದ ಬಗ್ಗೆ, ಕೃಷಿಯ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಕೃಷಿಯ ಬಗ್ಗೆ ಹೇಳುವುದಾದರೆ collapse ಆಗುವಂತಹ ಮಟ್ಟಕ್ಕೆ ಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವತ್ತು ಕೃಷಿಯನ್ನು ಮಾಡುವಂತಹ ಸುಮಾರು 60 ರಿಂದ 65% ಜನರು ಅದರಿಂದ ಬದುಕುವುದಕ್ಕೆ ಮತ್ತು ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಿದರೆ ತಮ್ಮ ಜೀವನವು ನಡೆಯುವುದಿಲ್ಲ. ಇಲ್ಲಿ ಕೃಷಿಗೂ ಭವಿಷ್ಯವಿಲ್ಲ ಮತ್ತು ತಮಗೂ ಭವಿಷ್ಯವಿಲ್ಲ ಎನ್ನುವಂತಹ ಸನ್ನಿವೇಶವನ್ನು ನಾವು ಇವತ್ತು ಕಾಣುತ್ತಿದ್ದೇವೆ. ಇದು ಸುಮಾರು 20 ರಿಂದ 30 ವರ್ಷಗಳಲ್ಲಿ ಈ ರೀತಿಯಾಗಿ ನಡೆದುಕೊಂಡು ಬಂದಿರುವುದನ್ನು ಮತ್ತು ಬದಲಾವಣೆಯಾಗಿ ಮೂಡಿರುವುದನ್ನು ನಾವು ನೋಡಿದ್ದೇವೆ. ಒಂದು ಕಾಲದಲ್ಲಿ ಅನೇಕ ಕಾರಣಗಳು ಇರಬಹುದು. ಏನು ಕೃಷಿಯ ಮೇಲೆ ಒತ್ತಡವಿತ್ತು ಮತ್ತು ಅವಲಂಬನೆಯು ಇತ್ತು ಅದನ್ನು ಬಹಳ ಶಾಸ್ತ್ರಿಯವಾಗಿ domestic ಆಗಿ ನಾವು ಕಡಿಮೆ ಮಾಡಬೇಕೆನ್ನುವಂತಹವಾದ ರಾಜ್ಯ ಮಟ್ಟದಲ್ಲಿ ಹಾಗೂ ದೇಶೀಯ ಮಟ್ಟದಲ್ಲಿತ್ತು. ಅದರ ಮೇಲಿದ್ದಂತಹ 60 ರಿಂದ 70% ಜನರು ಇದ್ದಾರೆ ಅದರ ಮೇಲೆ ಅವಲಂಬನೆಯಾಗಿದ್ದರು. ಇದನ್ನು

ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆ ಯೋಜನೆಯನ್ನು ಸದ್ಯಕ್ಕೆ ಕೇಂದ್ರ ಸರ್ಕಾರದಲ್ಲಿ ಅದನ್ನು ಹಾಕಿಕೊಂಡರು ಎಂದು ನಾನು ಭಾವಿಸುತ್ತೇನೆ. ಅದರ ಬಗ್ಗೆ ವಿಸ್ತೃತವಾದಂತಹ ಮಾಹಿತಿಯನ್ನು ವ್ಯಾಪಕತೆಯೂ ಇನ್ನು ಬಂದಿಲ್ಲವೆಂದು ಹೇಳಿ ನಾನು ತಿಳಿದುಕೊಂಡಿದ್ದೇನೆ. ಭೂಚೇತನ ಯೋಜನೆಯನ್ನು ಬಹುತೇಕ ಬಹಳ ವಿಶೇಷವಾಗಿ ವಿಶಿಷ್ಟವಾಗಿ ಗಮನಹರಿಸಿ ಅದಕ್ಕೆ ಆದ್ಯತೆಯನ್ನು ಕೊಟ್ಟು ಇದರಿಂದ ಬಡವರಿಗೆ ಬಹಳಷ್ಟು ಅವಶ್ಯಕತೆ ಇದೆ. ಅದರ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಬೇಕಾಗಿದೆ. ಅದರ viability ಯನ್ನು ನೋಡಬೇಕಾಗಿದೆ. ಅದರ ಬಗ್ಗೆ ಮಾರ್ಗದರ್ಶನ ಮಾಡಬೇಕಾಗಿದೆ. ಅದಕ್ಕೆ ಏನು ಬೇಕೋ ತಾಂತ್ರಿಕ ನೈಪುಣ್ಯತೆಯನ್ನು ಅವರಿಗೆ ಕೊಡಬೇಕಾಗಿದೆ. ಅದೆಲ್ಲಕ್ಕಿಂತ ಹೆಚ್ಚಾಗಿ ಏನು ದುಡಿಯುವಂತಹ ಜನರ ಕೊರತೆ ಇದೆ ಆ ದುಡಿಮೆಗೆ ಎಷ್ಟು ತಾಸುಗಳು ಬೇಕು, ಅದಕ್ಕೆ ಎಷ್ಟು ಸಮಯದಲ್ಲಿ ಆಗಬೇಕು. ಪರ್ಯಾಯ ವ್ಯವಸ್ಥೆ ಏನು, ಅದನ್ನು ಮಾನವ ಸಂಪನ್ಮೂಲದ ಮೂಲಕ ಮಾಡಿಸುತ್ತೀರೋ ಅಥವಾ ಮೆಷಿನ್ ಮೂಲಕ ಮಾಡಿಸುತ್ತೀರೋ ಆ ಬದಲಿ ವ್ಯವಸ್ಥೆಯಿಂದ ತುಂಬಿಕೊಡುತ್ತೀರೋ mechanization ಮಾಡುತ್ತೀರೋ ಅದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ತಾವು ಕೊಡುವಂತಹ subsidy ಇರಬಹುದು. ಮೆಷಿನ್ ಮೇಲೆ ಇರಬಹುದು, ಬೀಜದ ಮೇಲೆ ಇರಬಹುದು, ಅದರಲ್ಲೂ ವಿಶೇಷವಾಗಿ mechanization ಮಾಡುವುದಕ್ಕೆ ನಮಗೆ ಹೇಳಿರುವಂತಹ ಪಾಲಿಸಿ ಇದೆ. ತ್ರಾಷರ್ ಕೊಟ್ಟು, ಕುಂಟೆಗೆ ಕೊಟ್ಟು ರೆಂಟ್‌ಗೆ ಕೊಟ್ಟನೋ, ಟ್ರಾಕ್ಟರ್‌ಗೆ ಕೊಟ್ಟನೋ ಇವೆಲ್ಲ ಇರುವಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಟ್ರಾಕ್ಟರಿಗೆ ಕೊಡುವಂತಹ ಸಬ್ಸಿಡಿಯ ಹಣ ಬದಲಾಗಿದೆಯೆನ್ನುವ ಬಗ್ಗೆ ಕೇಳುತ್ತಿದ್ದೇವೆ. ಆ ಹಣವು ರೈತರಿಗೆ ಮುಟ್ಟಬೇಕಾದರೆ ಶೇಕಡ 50% ಗಿಂತ ಹೆಚ್ಚು ಸೋರಿಕೆಯಾಗುತ್ತದೆ. ಪ್ರತಿಯೊಬ್ಬರ ಪಾಲು ಸಹಿತ ಅಲ್ಲಿ ಕಟ್ ಆಗುತ್ತದೆ ಎಂಬ ಸುದ್ದಿಯನ್ನು ನಾನು ಕೇಳಿದ್ದೇನೆ. ಅಲ್ಲಿ ಸಲಕರಣೆಗಳನ್ನು ಕೊಡುವುದಕ್ಕೂ ಸಹಿತ ತಾರತಮ್ಯ ಮಾಡುತ್ತಾರೆ. ಅದರ ಮೇಲೆ ಲಾಭ ಮಾಡಿಕೊಳ್ಳುತ್ತಾರೆ. ದುರ್ಲಾಭ ಮಾಡಿಕೊಳ್ಳುತ್ತಾರೆ. ಬಹಳ ವ್ಯವಸ್ಥಿತವಾಗಿ ಆಡಳಿತ ನಡೆಯುತ್ತಿಲ್ಲ. ತಾವು resituation ಮಾಡಬೇಕು ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಬೇಕು ಒಂದು ತಾಲ್ಲೂಕಿಗೆ ಸುಮಾರು 5 ಕೋಟಿ ರೂಪಾಯಿಯ ಸಬ್ಸಿಡಿ ಹಣವು

ಬರುತ್ತದೆ. ಬೀಜ ಮತ್ತು ಗೊಬ್ಬರ, ಸಲಕರಣೆಗಳು, ಮತ್ತೊಂದು ಬರುತ್ತದೆ.. ಈ ಹಣವನ್ನು ತಾವು ಸರಿಯಾಗಿ ಪೋಲ್ ಮಾಡದೆಯೇ ಅದು ಸರಿಯಾಗಿ ರೈತರಿಗೆ ಹೋಗಿ ಮುಟ್ಟದೇ ಇದ್ದರೆ ಒಂದು ಉದ್ದೇಶ ಅದರ ಬಗ್ಗೆ ಏನು ಗುರಿ ಇದೆ ಅದನ್ನು ತಾವು subsidise ಮಾಡಬೇಕು. ಅವರಿಗೆ ಸಹಾಯಧನ ಕೊಡಬೇಕು ಒಳ್ಳೆಯ ಗುಣಮಟ್ಟದ ಬೀಜಗಳನ್ನು ಕೊಡಬೇಕು. ಬೆಲೆ ಏರಿದಂತಹ ಗೊಬ್ಬರವನ್ನು ಕಡಿಮೆ ದರದಲ್ಲಿ ಕೊಡುವ ಬಗ್ಗೆ ಸಹಾಯವನ್ನು ಮಾಡಬೇಕು. ಮೆಷಿನ್‌ಗಳನ್ನು ಕೊಡಬೇಕು ಈ ಬಗ್ಗೆ ಬಹಳ ಗಂಭೀರವಾಗಿ ಅಧ್ಯಯನ ಮಾಡಿ ಇದಕ್ಕೆ ಒಂದು ವ್ಯವಸ್ಥೆ ಮಾಡುವಂತಹ ಕೆಲಸ ಮಾಡಬೇಕು. ಅದರಲ್ಲೂ ವಿಶೇಷವಾಗಿ ನಾನು ಹೇಳುತ್ತೇನೆ. ಬೀಜದ ವಿಚಾರದಲ್ಲಿ ಆ ಬೀಜ ಬಂದಾಗ ಅವರ್ಯಾರೋ ಒಬ್ಬರು ದಳ್ಳಾಳಿಗಳು ಬಂದು ಕುಳಿತಿರುತ್ತಾರೆ. ಅವರು ಕೊಡುವಂತಹ ಬೀಜದ ಬೆಲೆ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ಇರುವುದಿಲ್ಲ. ಅದಕ್ಕೊಂದು brand ಹಾಕುತ್ತಾರೆ. ಎಲ್ಲೋ ಒಂದು ಚೀಲ ಮಾಡಿಕೊಳ್ಳುತ್ತಾರೆ. ಅದಕ್ಕೊಂದು brand ಹಾಕಿಕೊಂಡು ಶೇಖರಣೆ ಮಾಡಿ ಆ ಇಲಾಖೆಗೆ ಬಂದು supply ಮಾಡುತ್ತಾರೆ. ಆ supply ಮಾಡಿರುವಂತಹ ಬೀಜವನ್ನು ಅವರೆಲ್ಲರ ಖರ್ಚು ಸೇರಿ ಆ ಬೀಜದ ಖರ್ಚು ಮತ್ತು ದುಡ್ಡು ಸೇರಿ ಅವರು ಏನು ಮಾರಾಟ ಮಾಡುತ್ತಾರೆ ಆ ಮಾರಾಟದ ಬೆಲೆಯಷ್ಟು ಮಾತ್ರ ಅದರ ಮೇಲೆ ವ್ಯಯ ಮಾಡುತ್ತಾರೆ. ನೀವು ಕೊಡುವಂತಹ ಸಬ್ಸಿಡಿ ಹಣವನ್ನು ಅವರು ಲಾಭದ ಹಣವನ್ನಾಗಿ ಮಾಡಿಕೊಳ್ಳುತ್ತಾರೆ. ಇದು ವಾಸ್ತವಿಕವಾದಂತಹ ಸ್ಥಿತಿಯಾಗಿದೆ. ಅದಕ್ಕೆ ಗೊಬ್ಬರ, ಬೀಜ, ಮತ್ತೊಂದು ಏನು ಆಗಬೇಕು ಅವು ಸಹಿತ ಕೆಲವ್ಯಕ್ತಿಗಳ ಪಾಲಾಗುತ್ತದೆ ಯಾರೋ ಒಬ್ಬ ಮಾರಾಟಗಾರರಲ್ಲಿ ಹೋಗಿ ಮಾರುತ್ತಾರೆ. ಅದರಲ್ಲಿ ಸ್ವಲ್ಪ ಕೊರತೆ ಆದರೆ ಆ ಬೀಜ ಸಹ ಜನರಿಗೆ ಸಿಗುವುದಿಲ್ಲ. ಅದು ರಾಜಕಾರಣಿಗಳು ಅಥವಾ ಮತ್ತೊಬ್ಬರು ಕಡೆಗೆ ಹೋಗುವಂತಹ ಪರಿಸ್ಥಿತಿ ಬರುತ್ತದೆ. ಇದರ ಸರ್ಕಾರವು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಗೊಬ್ಬರದ ಬೆಲೆಯು 2 ರಿಂದ 3 ಪಟ್ಟು ಗೊಬ್ಬರದ ಬೆಲೆಯೂ ಗಗನಕ್ಕೆ ಏರಿದೆ. ಆ ಗೊಬ್ಬರದ ಬೆಲೆಯನ್ನು ತಾವು ರಾಜ್ಯ ಸರ್ಕಾರದ ಮಟ್ಟದಲ್ಲಿ ಎಷ್ಟು ಸಾಧ್ಯವಿದೆಯೋ ಅದನ್ನು ಮಾಡಬೇಕು. Saletax ಮತ್ತೊಂದನ್ನು ಬಿಟ್ಟರೆ ಅದು ಸಾಧ್ಯ ಇರಬಹುದು. ಈ ವಿಚಾರದ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಕೂಡ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಬೇಕು.

ಈ ಗೊಬ್ಬರದ ಬೆಲೆಯನ್ನು ವಿಶೇಷವಾಗಿ ತಾವು ಈಗ ಏನೋ ಹೊಸನೀತಿ, ನೈಸರ್ಗಿಕ ಕೃಷಿನೀತಿಯನ್ನು ಮಾಡಬೇಕೆಂದು ಹೇಳುತ್ತಿದ್ದೀರಿ ಅದು ಅಷ್ಟು ಸುಲಭವಾಗುವಂತಹ ಕೆಲಸವಲ್ಲ. ಇದು ಹತ್ತಾರು ವರ್ಷಗಳಲ್ಲಿ ಬದಲಾವಣೆ ಆಗುವಂಥ ಕೆಲಸ ಅಲ್ಲ. ಒಂದು ಕಡೆ productivity ನೋಡುತ್ತೇವೆ. ಜಾಸ್ತಿ ಉತ್ಪಾದನೆ ಮಾಡುವುದನ್ನು ನೋಡುತ್ತೇವೆ. ಆ ಉತ್ಪಾದನೆ ಮಾಡುವಾಗ ಇದು ಹೊಸ ವಿಚಾರವೇನಲ್ಲ. ಒಂದು cycle ಆಗಿದೆ. productivity ಅನ್ನು ಬಹಳ highest ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಕೊರತೆಯನ್ನು ಇವತ್ತು ಹೋಗಲಾಡಿಸುತ್ತಿದ್ದೇವೆ. ಆ process ಅನ್ನು reverse ಮಾಡುವಾಗ ಏನೇನು ತೊಂದರೆಗಳು ಬರುತ್ತವೆ, productivity ಹೋಗುತ್ತದೆ. ಆ soil structure ಹೋಗಿರುತ್ತದೆ. ಅದು ರಿಪೇರಿ ಮಾಡಬೇಕು. ಅದರ ಮೂಲಕ ತಾವು ನಮ್ಮ ಜೀವನ ಬದ್ಧತೆಯನ್ನು ಮಾಡಬೇಕು. ನಮ್ಮ ಆದಾಯವನ್ನು ನೋಡಬೇಕು. ಇವೆಲ್ಲದರ ಮೇಲೆ ಗಮನಹರಿಸಿ ಬಹಳ ವೈಜ್ಞಾನಿಕವಾಗಿ ಕ್ರಮ ಕೈಗೊಳ್ಳದಿದ್ದರೆ ಬಹಳ ದೊಡ್ಡ ಗಂಡಾಂತರ ಬಯಲುಸೀಮೆಗೆ ಕಾದಿದೆ ಎಂದು ಹೇಳುತ್ತೇನೆ. ಹಾಗಾಗಿ ತಾವು ಕೃಷಿ ಪದವೀಧರರನ್ನು ನಿರಂತರವಾಗಿ ತೊಡಗಿಸಿಕೊಳ್ಳಿ ಎಂದು ಹೇಳುತ್ತೇವೆ. ಯಾವ ಕೃಷಿ ಪದವೀಧರರು ಸಹ ಕೃಷಿ ಕೆಲಸ ಮಾಡಲಿಕ್ಕೆ ತಯಾರಿಲ್ಲ. ಅವರೆಲ್ಲಾ ಗೊಬ್ಬರದ ಮಾರ್ಕೆಟ್‌ನಲ್ಲಿರಬಹುದು ಅಥವಾ ಬೇರೆ ಬೀಜದ ಕಂಪೆನಿಯಲ್ಲಿರಬಹುದು. ಯಾರೂ ಆ ಕೃಷಿಯಲ್ಲಿ ಕೆಲಸ ಮಾಡಲಿಕ್ಕೆ ತಯಾರಿಲ್ಲ. ಇದಕ್ಕೆ ಕಾರಣವೇನು ಎಂದು ಪತ್ತೆ ಹಚ್ಚಲಿಕ್ಕೆ ಸರ್ಕಾರದ ಮಟ್ಟದಲ್ಲಿ, ಯೂನಿವರ್ಸಿಟಿ ಮಟ್ಟದಲ್ಲಿ ಪ್ರಯತ್ನವಾಗಬೇಕು. ಯೂನಿವರ್ಸಿಟಿಗಳ ಬಗ್ಗೆ ಹೇಳಿದರೆ ಏನೂ ತಪ್ಪಾಗಲಿಕ್ಕಿಲ್ಲ. ನಾನು ಒಂದು ಕಾಲದಲ್ಲಿ Board of Regents ನಲ್ಲಿದೆ. ನನಗೆ ಕೃಷಿಯಲ್ಲಿ ವಿಶೇಷವಾದ ಆಸಕ್ತಿಯಿದ್ದುದರಿಂದ ಬಹಳ ಆಸೆ ಪಟ್ಟು ನಾನು ಮತ್ತಷ್ಟು ಕೃಷಿಯ ಬಗ್ಗೆ ಕಲಿಯುತ್ತೇನೆಂದು ಹೋಗಿದ್ದೆನು. ಅದರಿಂದ ಏನಾದರೂ ಲಾಭವಾಗುತ್ತದೆ, ಹೊಸ ತಂತ್ರಜ್ಞಾನ ಮತ್ತೊಂದು ಏನಾದರೂ ಕಲಿಯುತ್ತೇನೆಂದು ಹೋಗಿದ್ದೆನು. ಅಲ್ಲಿಗೆ ಹೋದರೆ ಬರೀ ರಾಜಕಾರಣ, ಅವರನ್ನು ಪ್ರೊಫೆಸರ್ ಮಾಡಬೇಕು, ಇವರನ್ನು ಡೀನ್ ಮಾಡಬೇಕು, ಮತ್ತೊಬ್ಬರನ್ನು ವೈಸ್ ಚಾನ್ಸೆಲರ್ ಮಾಡಬೇಕು, ತಮ್ಮವರನ್ನು ನೇಮಕ ಮಾಡಬೇಕು. ಕೆಳಹಂತದವರೆಗೆ ತಮ್ಮ ಜನವೇ

ಇರಬೇಕು ಎನ್ನುವಂಥ ಕೆಟ್ಟ ರಾಜಕಾರಣವನ್ನು ನಾನು ಅಲ್ಲಿ ನೋಡಿದೆ. ಅವರು ಯಾವುದೇ research, extension ಬಗ್ಗೆ ಎಳ್ಳಷ್ಟೂ ಕಾಳಜಿ ಮಾಡಲಾರದಂಥ ಪರಿಸ್ಥಿತಿ ಇತ್ತು. ಅದಕ್ಕೆ ಕೊನೆ ಪ್ರಾಶಸ್ತ್ಯ. ತಮ್ಮ ಸೌಲಭ್ಯಗಳು, ತಮ್ಮ ಸಂಬಳಗಳು, ಹೊಸ ಹೊಸ ಹುದ್ದೆಗಳನ್ನು create ಮಾಡುವುದು ಮತ್ತು ಭರ್ತಿ ಮಾಡುವುದು ಅಷ್ಟಕ್ಕೆ ಮಾತ್ರ ಸೀಮಿತವಾಗಿದೆ. ICAR ನಿಂದ ದೊಡ್ಡ ದೊಡ್ಡ ಹಣ ಬರುತ್ತಿತ್ತು. ಪ್ರಾಜೆಕ್ಟ್ ಬರುತ್ತಿತ್ತು. ಅದನ್ನು ತೆಗೆದುಕೊಂಡು ಬಂದು ಅದರಲ್ಲಿ ಎಷ್ಟಾಗುತ್ತದೋ ಅಷ್ಟು ಮಾಡುವುದು. ಮೊದಲು ಪೋಸ್ಟ್ create ಮಾಡುವುದು. ಬಹಳ ಮಜವಾಗಿ ಜೀವನ ಮಾಡಿಕೊಂಡು ಕೃಷಿಗೆ ಮತ್ತು ಕೃಷಿಕರಿಗೂ ಅವರಿಗೂ ಏನೂ ಸಂಬಂಧವಿಲ್ಲ ಎನ್ನುವಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಹಾಗಾಗಿ ಈ ಕೃಷಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುವಂಥ ಹೊಸ ನೀತಿ ಧೋರಣೆಯನ್ನು ಸರ್ಕಾರದ ಮಟ್ಟದಲ್ಲಿ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡುತ್ತೇನೆ. ಅಧ್ಯಕ್ಷರು ನನಗೆ ಕೊಟ್ಟಂಥ ಸಮಯದ ಸಮೀಪವಾಗಿದೆ. ವಿಶೇಷವಾಗಿ ನೀರಾವರಿ ಯೋಜನೆಯ ಬಗ್ಗೆ ಈ ಸರ್ಕಾರ ಆಡಳಿತಕ್ಕೆ ಬರುವ ಪೂರ್ವದಲ್ಲಿ ಪಾದಯಾತ್ರೆ ಮಾಡಿದೆ. ಆಗ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದರು. ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ. ನಮ್ಮ ಸರ್ಕಾರ ಈ ಪಕ್ಷಗಳು ನಾವೆಲ್ಲರೂ ಸೇರಿ ನೀರಾವರಿಗೆ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿ ಬಹಳ ಗಟ್ಟಿ ಧ್ವನಿಯಲ್ಲಿ ನಾವೆಲ್ಲಾ ಹೇಳಲಿಕ್ಕೆ ಹೋಗಿದ್ದೆವು. ಹಿಂದಿನ ಸರ್ಕಾರಗಳಲ್ಲಿ ಏನೊಂದು ರೀತಿ ಅಲಕ್ಷ್ಯ ಇತ್ತು. 38% ನಿಂದ 13–17% ಗೆ ತಂದರು, ನೀರಾವರಿ ಮೇಲೆ ಅವರೇನು ಖರ್ಚು ಮಾಡಿದ್ದರು. ಅದರ ಬದಲಾಗಿ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಖರ್ಚು ಮಾಡುತ್ತೇವೆಂದು ಹೇಳಿ ನಾವು ನಮ್ಮ ವಾಗ್ದಾನವನ್ನು ಈ ಕೃಷಿಕರಿಗೆ, ರಾಜ್ಯದ ಜನರಿಗೆ ನಾವು ಕೊಟ್ಟಿದ್ದೇವೆ. ಸುಮಾರು 78 ಯೋಜನೆಗಳೇನು ಇವತ್ತು ವಿಳಂಬವಾಗಿವೆ. ಆ ಕೆಲಸಗಳು ಪೂರ್ಣವಾಗಿಲ್ಲ, ಅವನ್ನು ಮುಗಿಸುತ್ತೇವೆಂದು ಇವತ್ತು ನಾವೆಲ್ಲ ಮಾತನ್ನು ಕೊಟ್ಟಿದ್ದೇವೆ. ಅವನ್ನು ದಯವಿಟ್ಟು ಮುಗಿಸಲೇಬೇಕೆಂಬ ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು. ಹತ್ತುಸಾವಿರ ಕೋಟಿ ರಾಜ್ಯದ ಬಜೆಟ್‌ನಲ್ಲಿ ಬಹಳ ದೊಡ್ಡ ಮೊತ್ತವೇನಲ್ಲ. ಒಂದು ಲಕ್ಷ ಕೋಟಿ ದಾಟಿದಂಥ

ಈ ಯೋಜನೆಯೊಳಗೆ ಹತ್ತು ಸಾವಿರ ಕೋಟಿ ಬಹಳ ದೊಡ್ಡದೇನಲ್ಲ. ಅದು ಕೃಷ್ಣಾ ಕಣಿವೆ ಯೋಜನೆ ಇರಬಹುದು. ಕಾವೇರಿ ಕಣಿವೆ ಯೋಜನೆ ಇರಬಹುದು. ಈ ಯೋಜನೆಯನ್ನು ಮುಗಿಸುವುದು, modernization ಮಾಡುವುದು ಇರಬಹುದು, optimum use ಮಾಡಲಿಕ್ಕೆ ಏನೇನು ಮಾಡಬೇಕೋ ಅದನ್ನು ಮಾಡುವುದು ಇರಬಹುದು. ಹೊಸ ಕಲ್ಪನೆಗಳು, ಹೊಸ ಆವಿಷ್ಕಾರಗಳು, ಹೊಸ ರೀತಿಯಾದ ನೀರಿನ utility ಅನ್ನು ಉಪಯೋಗವನ್ನು ಜಾಸ್ತಿ ಮಾಡಲಿಕ್ಕೆ (ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) optimum ಮಾಡಲಿಕ್ಕೆ ಅತಿ ಗರಿಷ್ಠವಾಗಿ ಮಾಡಲಿಕ್ಕೆ ಹಿಂದಿನ ಸರ್ಕಾರದಲ್ಲಿ ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಅದನ್ನು ನಾನು ಮೆಚ್ಚುತ್ತೇನೆ. ತುಂತುರು ನೀರಾವರಿ ಇರಬಹುದು, ಹನಿ ನೀರಾವರಿ ಇರಬಹುದು, ಇದು ಎರಡನೆ ಹಂತದ ಕಾರ್ಯಕ್ರಮ. ದಯವಿಟ್ಟು ಅದನ್ನು ಮಾಡಿ. ನಮ್ಮ ರಾಜ್ಯದಲ್ಲಿ ಸಿಗುವಂಥ ನೀರನ್ನು ಅತಿ ಗರಿಷ್ಠವಾಗಿ ಉಪಯೋಗ ಮಾಡಲಿಕ್ಕೆ ಇದೇನು ದೊಡ್ಡ ಕಾರ್ಯಕ್ರಮವಲ್ಲ. ದೊಡ್ಡ ಹಣಕಾಸಿನ ಭಾರ ಇದಕ್ಕೆ ಬೀಳುವುದಿಲ್ಲ. ಲಭ್ಯತೆ ಸಾಕಷ್ಟಿದೆ ಅದನ್ನೆಲ್ಲಾ ಸರಿಯಾಗಿ ಉಪಯೋಗ ಮಾಡಬೇಕು. ಇವತ್ತೇನು ರಾಜ್ಯ ಇರಬಹುದು ಅಥವಾ ದೇಶದ ಬೇರೆ ಕಡೆ ಇರಬಹುದು ಅತಿ democratization ವ್ಯವಸ್ಥೆಯನ್ನು ಮಾಡಲಿಕ್ಕೆ ಹೋಗಿ ರಾಜ್ಯದಲ್ಲಿ ದುಡಿಯುವ ವರ್ಗವನ್ನು over politicize ಮಾಡಿದ್ದೇವೆಂಬ ಭಾವನೆ ಇವತ್ತು ನಮಗೆ ಇದೆ. ಇವತ್ತು ವಿಶೇಷವಾಗಿ ಹಳ್ಳಿಗಾಡಿನ ಜನರ ಬಗ್ಗೆ, ರೈತರ ಬಗ್ಗೆ ಹೇಳಬೇಕಾದರೆ ತಾವು ಅವರಿಗೇನು ಕೊಡುವುದು ಬೇಡ, ಎಷ್ಟೇ ಖರ್ಚಾದರೂ ನೀರನ್ನು ಕೊಡುವಂಥ ಪುಣ್ಯದ ಕೆಲಸವನ್ನು ಮಾಡಿದರೆ ಯಾವ ಕಾಲಕ್ಕೂ ತಮ್ಮನ್ನು ಅವರು ಮರೆಯುವುದಿಲ್ಲ. ಅವರಿಗೆ ಕೇವಲ ಈ ರಾಜಕಾರಣ, ಸಬ್ಸಿಡಿ ಹಿಂದೆ ಓಡಾಡುವುದನ್ನು ಬಿಟ್ಟು ದುಡಿಯಲಿಕ್ಕೆ ಹೆಚ್ಚಿದಂತೆ ಆಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ನಾವು ನಮ್ಮ ಬಹಳಷ್ಟು ಗಮನವನ್ನು ಕೃಷ್ಣಾ ಕೊಳ್ಳದ ಮೇಲೆ ಇಲ್ಲವೇ ಕಾವೇರಿ ಕೊಳ್ಳದ ಮೇಲೆ ಹರಿಸಿ ಆದ್ಯತೆಯನ್ನು ಕೊಡುತ್ತೇವೆ. ಕೃಷ್ಣಾ ಕೊಳ್ಳದ ಹೆಚ್ಚಿನ 178 ಟಿಎಂಸಿ ನೀರನ್ನು ನಾವು ಬಿ–ಸ್ಕೀಮ್‌ನಲ್ಲಿ ಉಪಯೋಗ ಮಾಡಬೇಕು. ಅದಕ್ಕೆ ನಾನೂ ಸಹ ಒತ್ತಾಯ ಮಾಡುತ್ತೇನೆ. ಅವೆಲ್ಲಾ ಆಗುವಂಥ ಕೆಲಸಗಳೇ. ಕಾವೇರಿ, ಕೃಷ್ಣಾ ನೀರಾವರಿ

ಯೋಜನೆಯಡಿಯಲ್ಲಿ ಅನೇಕ ಹಿಂದುಳಿದಿರುವ ಯೋಜನೆಗಳು ಕೆಲಸ ಆಗಬೇಕು. Modernize ಆಗಬೇಕು. ಜಾಸ್ತಿ ನೀರನ್ನು ಪಡೆಯುವಂಥ ಎಲ್ಲಾ ಪ್ರಯತ್ನಗಳು ಆಗಬೇಕು. ಒಂದು ಗಂಭೀರವಾದಂಥ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಮಾನ್ಯ ಅಧ್ಯಕ್ಷರೆ, ಇವತ್ತು ನಾವು ಮಹದಾಯಿ ಕೊಳ್ಳದಿಂದಲೂ ಸಹಿತ ಸಾಕಷ್ಟು ನೀರನ್ನು ಪಡೆಯಬಹುದು. 178 ಟಿಎಂಸಿ ನೀರನ್ನು ಪಡೆಯಲಿಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅದೇ ರೀತಿ 200 ಟಿ.ಎಂ.ಸಿ.ನೀರು ಮಹದಾಯಿಕೊಳ್ಳದಲ್ಲಿದೆ. ಕರ್ನಾಟಕದ ಪಾಲು ಸುಮಾರು 45 ಟಿಎಂಸಿ ನೀರು ಪಡೆಯಲಿಕ್ಕೆ ಸಾಧ್ಯವಿದೆ. ಇವತ್ತು ಆ ನೀರು ಕಾರಣಾಂತರಗಳಿಂದ ನೈಸರ್ಗಿಕವಾಗಿ ಪಶ್ಚಿಮಕ್ಕೆ ಹರಿಯುತ್ತಿದೆ. ಆ ನೀರಿನಲ್ಲಿ ನಮ್ಮ ಪಾಲು 45 ಟಿಎಂಸಿ ನೀರು ಇದೆ. ಅದೇ ರೀತಿ ಕಳಸಾಬಂಡೂರಿಗೆ ಸಾಕಷ್ಟು ಪ್ರಚಾರ ಇದೆ. ಸಾಕಷ್ಟು ಸರ್ಕಾರಗಳು ಹೇಳಿಕೆಗಳು, ಕೆಲವು ಸರ್ಕಾರಗಳು ಅದರ ಮೇಲೆ ಚುನಾವಣೆಯನ್ನು ಮಾಡಿದವು. ಹಲವಾರು ಶಾಸಕರು, ಮಂತ್ರಿಗಳಾದರು, ಮುಖ್ಯಮಂತ್ರಿಗಳಾದರು, ಕಳಸಾಬಂಡೂರಿ ಯೋಜನೆ ಮಾಡುತ್ತೇವೆಂದು ಕೆಲವರು ರಕ್ತದಲ್ಲಿ ಬರೆದು ಕೊಟ್ಟರು. ಅವರೇ ಮಂತ್ರಿಗಳು, ಮುಖ್ಯಮಂತ್ರಿಗಳಾದರೂ ಸಹ ಆ ಕೆಲಸ ಮುಗಿಸಲಿಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಅದಕ್ಕೆ ಕೇಂದ್ರ ಸರ್ಕಾರದಿಂದ ತಡೆಯೂ ಇರಬಹುದು. ಅದಕ್ಕೆ ಕೇಂದ್ರ ಸರ್ಕಾರದಲ್ಲಿದ್ದಂಥ ವಾಜಪೇಯಿಯವರು ತಡೆಹಾಕಿದ್ದರು, ಇವರು ತಡೆ ಹಾಕಿರಲಿಲ್ಲ. ಅದಕ್ಕೆ ಕಾರಣವೇನೆಂದರೆ ಈ ಯೋಜನೆ ಮೂರು ರಾಜ್ಯಗಳಿಗೆ ಸೇರಿದಂಥ ನೀರಾವರಿ ಯೋಜನೆಯಾಗಿದೆ. ಈ ಯೋಜನೆಯನ್ನು ತನ್ನ ಎಲ್ಲಾ ವಿಧವಾದಂಥ ಸಮ್ಮತಿಯನ್ನು ಪಡೆದುಕೊಂಡು ಇದಕ್ಕೆ ಹೊಂದುವಂಥ, ಒಪ್ಪುವಂಥ ಎಲ್ಲಾ ಟ್ರಿಬ್ಯುನಲ್ ಆದೇಶದ ಮೇಲೆ ಮಾತ್ರ ಮಾಡಲಿಕ್ಕೆ ಸಾಧ್ಯವಿರುವುದರಿಂದ ಅದನ್ನು ಪಡೆಯುವುದಕ್ಕೆ ಅಂದು ಸಾಧ್ಯವಾಗದ ಕಾರಣ. ಕುಡಿಯುವ ನೀರಿಗೆಂದು ನಾವೇನು ಮಾಡಿಕೊಂಡಿದ್ದೆವು ಅದು ಯಶಸ್ವಿಯಾಗದ ಕಾರಣ, ಈ ಕಳಸಾಬಂಡೂರಿ ಎನ್ನುವಂಥ ಬಿಕ್ಕಟ್ಟು ನಮ್ಮ ಎದುರಿಗೆ ಇದೆ. ಅದನ್ನು ಬಿಡಿಸಲಿಕ್ಕೆ ಸಾಧ್ಯವಾಗಿಲ್ಲ. ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೆನ್ನುವಂಥ ಭಾವನೆ ಇತ್ತು, ಆದರೆ ಇವತ್ತು ನ್ಯಾಯಾಧಿಕರಣ ನೇಮಕವಾಗಿದೆ. ಹಾಗಾಗಿ ಈ ಯೋಜನೆ ಬಗ್ಗೆ ನದಿ ನೀರಿನ ಬಗ್ಗೆ ಆ ನ್ಯಾಯಾಧಿಕರಣದ ಎದುರುಗಡೆ

ಪ್ರಾಶಸ್ತ್ಯದ ಮೇಲೆ, ಆದ್ಯತೆ ಮೇಲೆ ಇವತ್ತು ತಾವು ಈ ಒಂದು ಸರ್ಕಾರ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಅದಕ್ಕೆ ಬೇಕಾಗುವಂಥ ಮಾಹಿತಿಯನ್ನು ಒದಗಿಸಿ ತೀರ್ಪನ್ನು ಪಡೆಯಲಿಕ್ಕೆ ಅವರು ಕಾರಣರಾಗಿ ಅದಕ್ಕೆ ಬೇಕಾದಂಥ ಹಣವನ್ನು ಹೂಡಿ, ಅದಕ್ಕೆ ಬೇಕಾದಂಥ ಯೋಜನೆಗಳನ್ನು ತಯಾರು ಮಾಡಿ ಅಷ್ಟು ನೀರನ್ನು ಪಡೆದರೆ ಒಳ್ಳೆಯದಾಗುತ್ತದೆ. ಮಲಪ್ರಭಾ ಯೋಜನೆ ಕಾರಣಾಂತರಗಳಿಂದ ಅದು ಕೃಷ್ಣಾ ಕಣಿವೆ ಯೋಜನೆ ಆಗಿರಬಹುದು. ಅದರ capacity only 27 TMC. ಮೊದಲನೆ ಬಾರಿ ಅದನ್ನು assess ಮಾಡಿದಾಗ 47 ಟಿಎಂಸಿ ಎಂದು ಹೇಳಿದರು, ಆಮೇಲೆ 36 ಟಿಎಂಸಿ ಎಂದು ಹೇಳಿದರು, ಇವತ್ತು 27 ಟಿಎಂಸಿ ಅಷ್ಟು ನೀರು ಶೇಖರಣೆ ಆಗುವುದಿಲ್ಲ. ಹೀಗಾಗಿ ಸುಮಾರು 5 ಲಕ್ಷ ಎಕರೆ ಜಮೀನಿಗೆ ಆ ಯೋಜನೆ ಏನು ಬರಬೇಕಾಗಿತ್ತು. 2 ವರ್ಷಗಳಿಂದ ಬರ ಇದೆ, ಒಂದು ತಿಂಗಳಿಗಾಗುವಷ್ಟು ನೀರು ಸಹ ಬರುತ್ತಿಲ್ಲ. ಜನಗಳು ವಲಸೆ ಹೋಗಿದ್ದಾರೆ, ದುಡಿಯಲಿಕ್ಕೆ ಮಂಗಳೂರು, ಗೋವಾ ಮತ್ತೊಂದು ಕಡೆ ಹೋಗುತ್ತಾರೆ, 200, 300–00 ರೂಪಾಯಿಗಳಿಗಾಗಿ ಹಳ್ಳಿಗಳಿಂದ ಹುಬ್ಬಳ್ಳಿ–ಧಾರವಾಡ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡುತ್ತಾರೆ. ನೀರಾವರಿ ಯೋಜನೆಯಿಂದ ಜನರ ಪರಿಸ್ಥಿತಿ ಏಕೆ ಹೀಗಾಯಿತು ತಾವು ಗಂಭೀರವಾಗಿ ನೋಡಬೇಕು. ಹೀಗಾಗಿ ನಾನು ಸರ್ಕಾರದಲ್ಲಿ ಮನವಿ ಮಾಡುತ್ತೇನೆ, ಈ ಮಹದಾಯಿ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕೆ ತಾವು ದಯವಿಟ್ಟು ಆದ್ಯತೆಯನ್ನು ಕೊಡಬೇಕು. ಆ ನೀರನ್ನು power ಗೆ ಹಾಗೂ ನೀರಾವರಿಗೂ ಉಪಯೋಗ ಮಾಡಬಹುದು. ಅಷ್ಟು ನೀರನ್ನು ಪಡೆಯಲಿಕ್ಕೆ ತಾವು ದಯವಿಟ್ಟು ಅನುವು ಮಾಡಿಕೊಡಬೇಕು ಎಂದು ಹೇಳಿ ನಾನು ತಮ್ಮಲ್ಲಿ ಹೇಳಬಯಸುತ್ತೇನೆ. ಇನ್ನಷ್ಟು ಮಾತನ್ನು ಮುಂದುವರೆಸಿ ಎಂದು ತಿಳಿಸಿದರೆ ನಾನು ಮಾತನಾಡುತ್ತೇನೆ ಬೇಡವೆಂದರೆ ಬಿಡುತ್ತೇನೆ. ಶ್ರೀ ದತ್ತರವರಿಗೆ ಸಮಯ ಕೊಟ್ಟಿದ್ದನ್ನು ನೋಡಿ ನಾವು ಇನ್ನು ಸ್ವಲ್ಪ ಜಗ್ಗಬಹುದು ಎಂದು ತಿಳಿದುಕೊಂಡಿದ್ದೆನು.

ಅಧ್ಯಕ್ಷರು : ಸಾಕು, ಇವತ್ತು ಚರ್ಚೆಯನ್ನು ಪೂರ್ಣಗೊಳಿಸಬೇಕು.

ಶ್ರೀ ಬಿ.ಆರ್.ಯಾವಗಲ್ : ಇದು ಇವತ್ತು ಕೊನೆಯಲ್ಲ, ಇದು ಪ್ರಾರಂಭ ಎಂದು ಭಾವಿಸುತ್ತೇನೆ. ಇವತ್ತು ಆ ಮಲಪ್ರಭ ಯೋಜನೆಯ ಬಗ್ಗೆ ರೈತರ ವಿಶೇಷ ಬೇಡಿಕೆ ಇದಾಗಿದೆ. ತಾವು ನೀರಾವರಿ ಯೋಜನೆಯನ್ನು

ಕೊಟ್ಟಿದ್ದೀರಿ. ಆ ಯೋಜನೆ ಏನಾದರೂ ಯಶಸ್ವಿ- ಆಯಿತೆಂದು ಅನಿಸಿಕೊಳ್ಳಬೇಕಾದರೆ ಹೊರಗಡೆ ಇದ್ದಂತಹ ಪ್ರದೇಶದಿಂದ ನೀರನ್ನು ಪಡೆದುಕೊಂಡು ಇಲ್ಲಿಗೆ ಕೊಡದಿದ್ದರೆ ತಲೆತಲಾಂತರದಿಂದ ಶತಮಾನಗಳಿಂದ ಬರಗಾಲಕ್ಕೆ ತುತ್ತಾಗಿರುವಂತಹ ನಾಡು ಅದು ಬೆಳಗಾವಿ, ಗದಗ್, ಧಾರವಾಡ ಜಿಲ್ಲೆಗಳಿರಬಹುದು ಅಥವಾ ಪಕ್ಕದ ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಿರಬಹುದು, ಆ ಪ್ರದೇಶದ ಐದು ಲಕ್ಷ ಜನರ ಜೀವನದಲ್ಲಿ ಹೊಸತನ ಬರಬೇಕೆಂದರೆ ಅವರು ಚೆನ್ನಾಗಿ ಬದುಕಬೇಕೆಂದರೆ ಆ ನೀರನ್ನು ತಂದುಕೊಡಬೇಕಾಗುತ್ತದೆ. ಆ ನೀರಿಗಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತಾ, ಆ ಯೋಜನೆಯನ್ನು ಮಾಡುವುದಕ್ಕೆ ನಾವು ಆ ಪ್ರದೇಶದಲ್ಲಿ ಜನ ಜಾಗೃತಿಯನ್ನು ಮಾಡುತ್ತಿದ್ದೇವೆ. ದಯವಿಟ್ಟು ತಾವು ಅದಕ್ಕೆ ಮಾನ್ಯತೆಯನ್ನು ಕೊಡಬೇಕು. ಇಲ್ಲವಾದಲ್ಲಿ ಜನ ಬೀದಿಗಿಳಿಯುವ ಪರಿಸ್ಥಿತಿ ಬರುತ್ತದೆ. ದಯವಿಟ್ಟು ಈ ವಿಷಯವನ್ನು ತಾವು ಗಂಭೀರವಾಗಿ ಪರಿಶೀಲನೆ ಮಾಡಬೇಕು. ಈಗಿರುವಂತಹ ಕಾಲುವೆ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ಅದನ್ನು ರಿಪೇರಿ ಮಾಡಿಸಿಕೊಡಬೇಕೆಂದು ಹೇಳುತ್ತಾ, ಇನ್ನೂ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಬಹುದಾಗಿತ್ತು, ಆದರೆ ಸೀಮಿತ ಅವಕಾಶವಿರುವುದರಿಂದ ಮತ್ತೊಂದು ಸಂದರ್ಭದಲ್ಲಿ ಮಾತನಾಡುತ್ತೇನೆಂದು ಹೇಳುತ್ತಾ ತಮಗೆ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಕೆ.ಜಿ.ಬೋಪಯ್ಯರವರೆ, 15 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ ತಾವು ಕೊಟ್ಟಿರುವ ಕಾಲಾವಧಿಯಲ್ಲಿ ಮುಗಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ತಂದಿದ್ದಾರೆ. ಸಾಮಾನ್ಯವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ನೂತನ ಸರ್ಕಾರದ ಕಾರ್ಯಸೂಚಿಯೆಲ್ಲವೂ ಇರುತ್ತದೆ. ಹಿಂದಿನ ಸರ್ಕಾರವನ್ನು ಟೀಕೆ ಮಾಡುವುದು ಇವತ್ತು ಹೊಸ ಸಂಪ್ರದಾಯವಾಗಿದ್ದು, ಅದರ ಬಗ್ಗೆ ಸಾಕಷ್ಟು ಹೇಳಿದ್ದು, ನಾನು ಮತ್ತೆ ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಬಹುಶಃ ಇವತ್ತು ಅನೇಕ ವಿಚಾರಗಳನ್ನು, ಕಾರ್ಯಕ್ರಮಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ

ಹೇಳಿಸಿದೆ. ವಿಶೇಷವಾಗಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತಿರುವ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಪಡಿಸುತ್ತೇವೆಂದು ಹೇಳಿದ್ದೀರಿ. ಅದರಲ್ಲಿ ವಿಶೇಷವಾಗಿ ಕೊಡವ ಭಾಷೆಯನ್ನು ಅಭಿವೃದ್ಧಿಪಡಿಸುತ್ತೇವೆಂದು ಹೇಳಿದ್ದೀರಿ. ಇದನ್ನು ಖಂಡಿತವಾಗಿ ನಾನು ಸ್ವಾಗತ ಮಾಡುತ್ತೇನೆ. ಕೊಡವ ಭಾಷೆಯನ್ನು 8ನೇ ಷೆಡ್ಯೂಲ್‌ಗೆ ಸೇರಿಸಬೇಕೆನ್ನುವುದು ಕೊಡಗಿನ ಜನರ ಬಹಳ ವರ್ಷಗಳ ಬೇಡಿಕೆಯಾಗಿದೆ. ಅದಕ್ಕೆ ಪೂರಕವಾಗಿ ಸರ್ಕಾರ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು, 8th Schedule ಗೆ ಕೊಡವ ಭಾಷೆಯನ್ನು ಸೇರಿಸಿಕೊಳ್ಳುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಅದರ ಜೊತೆಗೆ ಬೇರೆ ಬೇರೆ ಭಾಷೆಗಳ ಬಗ್ಗೆ ಕೂಡ ಹೇಳಿದ್ದಾರೆ. ಕೊಡಗಿನಲ್ಲಿ ಬಹಳ ಮುಖ್ಯವಾಗಿ ಅರೆ ಭಾಷೆಯೆಂದು ಇದ್ದು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುವವರು ಅರೆಭಾಷೆಯನ್ನು ಮಾತನಾಡುತ್ತಿದ್ದಾರೆ. ಕಳೆದ ವರ್ಷ ಸರ್ಕಾರ ಅರೆಭಾಷೆ ಅಭಿವೃದ್ಧಿಗಾಗಿ ಅರೆಭಾಷೆ ಸಾಹಿತ್ಯ ಅಕಾಡೆಮಿಯೆಂದು ಮಾಡಿದ್ದಾರೆ. ಆದರೆ ಅರದ ಪ್ರಸ್ತಾಪವಿಲ್ಲ. ಕೊಡವ ಭಾಷೆಯ ಜೊತೆಗೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಅದರಲ್ಲೂ ವಿಶೇಷವಾಗಿ ಸುಳ್ಯ ಮತ್ತು ಪುತ್ತೂರು ಭಾಗದಲ್ಲಿ ಮತ್ತೊಂದು ಕೊಡವ ಭಾಷೆಯಾದ ಈ ಅರೆಭಾಷೆಯ ಅಭಿವೃದ್ಧಿಗೆ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಬಹಳ ವಿಶೇಷವಾಗಿ ತಾವು ಆಶ್ರಯ ಮನೆಗಳಿಗೆ ಒಂದು ಲಕ್ಷ ರೂಪಾಯಿಗಳಿರುವುದನ್ನು ಒಂದೂಕಾಲು ಲಕ್ಷ ರೂಪಾಯಿಗಳಿಗೆ ಹೆಚ್ಚು ಮಾಡಿ ಕೊಡುತ್ತೇವೆಂದು ಹೇಳಿರುವುದು ಸ್ವಾಗತಾರ್ಹ. ಆದರೆ ಅಲ್ಲಿನ ಪರಿಸ್ಥಿತಿಯೇನಾಗಿದೆಯೆಂದರೆ ಹಿಂದೆ ಯಾವುದೇ ಫಲಾನುಭವಿಗಳು ಆದಾಯ ದೃಢೀಕರಣ ಪತ್ರವನ್ನು ಕೊಡುವುದು ಬೇಡವೆಂದು guidelines ಕೊಟ್ಟಿದ್ದರು. ಆದರೆ ಈಗ ಅದರಲ್ಲಿ first condition ಇರುವುದೇನೆಂದರೆ ನೀವು ಹೊಸದಾಗಿ ಆದಾಯ ದೃಢೀಕರಣ ಪತ್ರವನ್ನು ಕೊಡಬೇಕೆಂದು ಎಲ್ಲಾ

ಪಂಚಾಯಿತಿಗಳಿಗೆ ಕಳುಹಿಸಿದ್ದೀರಿ. ಉದ್ಯೋಗ ಖಾತರಿಯಲ್ಲಿ ಯಾರು job card holder ಇದ್ದಾರೆ ಅವರ ವಾರ್ಷಿಕ ಆದಾಯ ಎಷ್ಟಾಗುತ್ತದೆ? ಅದನ್ನು ಹಿಂದಿನ ಸರ್ಕಾರದಲ್ಲಿ ತೆಗೆದುಹಾಕಿತ್ತು. ಮತ್ತೆ introduce ಮಾಡಿರುವುದರಿಂದ ಅನೇಕ ಪಂಚಾಯಿತಿಗಳಲ್ಲಿ ಆ ಕಂಪ್ಯೂಟರ್ open ಆಗುತ್ತಿಲ್ಲ. ಆಶ್ರಯ ಮನೆಗಳಲ್ಲಿ ಯಾರು holder ಇರುತ್ತಾರೋ ಅವರು ಯಾರು ಹೊಸದಾಗಿ ಮಾಡುತ್ತಾರೋ ಅವರಿಗೆ ಜಾಮೀನು ಅಥವಾ ಫಲಾನುಭವಿಗೆ ಅರ್ಹ ಎಂದು ಸಹಿ ಮಾಡಬೇಕೆಂದು ಸಹ ಸೇರಿಸಿದ್ದೀರಿ. ಬಹಳ ಮನೆಗಳನ್ನು ಕೊಡಬೇಕೆಂದು ತಾವೇನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರೋ ಅದ್ಯಾವುದೂ ಇದರಿಂದ ಆಗುವುದಿಲ್ಲ. ಯಾವುದೇ ಗ್ರಾಮ ಪಂಚಾಯಿತಿಗಳಲ್ಲಿ ಹೋಗಿ ನೋಡಿದರೂ ಕಂಪ್ಯೂಟರ್‌ನಲ್ಲಿ on line open ಆಗುವುದಿಲ್ಲ. ಈ ರೀತಿ ಆದರೆ ಎಲ್ಲಿಂದ ಮನೆಗಳನ್ನು ಕೊಡುತ್ತೀರಿ? ಕೊಟ್ಟಿರುವಂತಹ ಆಶ್ರಯ ಮನೆಗಳಿಗೆ ಹಣ ಬಿಡುಗಡೆಯಾಗದಿರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಕ್ಕುಪತ್ರ ಕೊಡಬಾರದೆಂದು ಹಿಂದೆ guidelines ಏನಿತ್ತೋ ಆ ರೀತಿ ಕೊಡಬೇಕೆಂದು ಅದರಲ್ಲೂ ವಿಶೇಷವಾಗಿ ಮಲೆನಾಡು ಪ್ರದೇಶಗಳಲ್ಲಿ ಹಕ್ಕುಪತ್ರವಿಲ್ಲದೆ ಆಶ್ರಯ ಮನೆಗಳನ್ನು ಕೊಡಬೇಕೆಂದು ಅಧಿಕಾರಿಗಳಿಗೆ ಹೇಳಿ. ಪಂಚಾಯಿತಿಯು ವಾಸ ದೃಢೀಕರಣ ಪತ್ರ ಇಷ್ಟನ್ನು ಕೊಟ್ಟು 14 ಷರತ್ತುಗಳು ಏನೇನಿದೆಯೋ ಅದೆಲ್ಲವೂ ಇದೆ. ಅಧಿಕಾರಿಗಳು ಮನಸ್ಸು ಬಂದ ಹಾಗೆ guidelines ಮಾಡುತ್ತಿದ್ದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಹಳ ಮುಖ್ಯವಾಗಿ ಮಲೆನಾಡು ಪ್ರದೇಶದಲ್ಲಿರುವಂತಹ ಅರಣ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲು ನನ್ನ ಸರ್ಕಾರ ಬದ್ಧವಾಗಿದೆಯೆಂದು ಇದೆ. ಇವತ್ತು ಎಲ್ಲಾ ಕಡೆ ವಿಶ್ವ ಪರಿಸರ ದಿನವೆಂದು ಆಚರಣೆ ಮಾಡುತ್ತಿದ್ದೀರಿ. ಇದನ್ನು ಹೇಗೆ ಮಾಡುತ್ತಿದ್ದೀರೆಂದರೆ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ಒಂದಿಷ್ಟು ಮಕ್ಕಳುಗಳನ್ನು ಸೇರಿಸುವುದು ಒಂದೆರಡು ಗಿಡಗಳನ್ನು ನೆಡುವುದು.

ಇದರಿಂದ ನೀವೇನಾದರೂ ಅರಣ್ಯಗಳನ್ನು ಉಳಿಸುತ್ತೇನೆಂದರೆ ಖಂಡಿತ ಸಾಧ್ಯವಿಲ್ಲ. ನಿಜವಾಗಿ ಅರಣ್ಯ ಉಳಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಬಹುಶಃ ನಮ್ಮ ಜಿಲ್ಲೆಯ ಮಟ್ಟಿಗೆ ಅಥವಾ ಮಲೆನಾಡು ಪ್ರದೇಶದಲ್ಲಿ reserve forest ಎಂದು ಏನಿದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಏನಾದರೊಂದು ಕಾರ್ಯಕ್ರಮವನ್ನು ಹಾಕಿ. ಇಂದು ನಿರಂತರವಾಗಿ ಕಳ್ಳ ಸಾಗಾಣಿಕೆ ನಡೆಯುತ್ತಿದೆ. ವಿಶೇಷವಾಗಿ ನಮ್ಮ ಕೇರಳದ ಗಡಿ ಭಾಗದಲ್ಲಿ ಮರಗಳೇ ಇಲ್ಲ. ಅರಣ್ಯ ಭವನದಲ್ಲಿರುವ ಅಧಿಕಾರಿಗಳಿಗೆ ಈ ಕಡೆ ಒಂದು round ಬರುವುದಕ್ಕೆ ಹೇಳಿ. ಅಲ್ಲಿ ಹೋಗಿ ನೋಡಿದರೆ reserve forest ಪರಿಸ್ಥಿತಿ ಹೇಗಿದೆಯೆಂದು ತಿಳಿಯುತ್ತದೆ. ಮಳೆಗಾಲದಲ್ಲಿ ಹೆಚ್ಚಿನ ಅಂಶ ಎಲ್ಲಾ ಹೊಳೆಗಳು ಕೊಡಗಿನಿಂದ ಕೇರಳಕ್ಕೆ ಹರಿದುಹೋಗುತ್ತವೆ. ಇವರು ಎಲ್ಲಾ ಮರಗಳನ್ನು ಕಡಿದು ಹೊಳೆಗೆ ಹಾಕಿ ಸಾಗಿಸುವುದು. ಇಷ್ಟೆ ಅಲ್ಲಾ ಬೇರೆ ಎಲ್ಲಾ ಅರಣ್ಯ IFS ಅಧಿಕಾರಿಗಳಿಗೆ ಎಲ್ಲಾ ಸೌಲಭ್ಯಗಳಿವೆ. ನಮ್ಮದೊಂದು ಪುಟ್ಟ ಜಿಲ್ಲೆಯಾಗಿದ್ದು, ಮೂರು ತಾಲ್ಲೂಕುಗಳಿಗೆ ಅಲ್ಲಿರುವ DFOಗಳು ಐದು ಜನ. ಎಲ್ಲಾ ವಿಭಾಗಗಳಿಗೆ DFO ಗಳೇ, ಇಷ್ಟೇ ಅಲ್ಲ ಕೆಲವು ಕಡೆ DFO ಗಳ್ಯಾರು ಎಂದರೆ IFS ಆಗಿರುವವರೆ ಆಗಬೇಕು. ಕರ್ನಾಟಕದಲ್ಲಿ ರೇಂಜರ್ ಆಗಿ ಕಷ್ಟಪಟ್ಟು DFO ಆದರೆ ಆತನಿಗೆ ಅಲ್ಲಿ posting ಇಲ್ಲ. ಅವರಿಗೆ ನಿಜವಾದ ಸಮಸ್ಯೆ ಗೊತ್ತಿರುತ್ತದೆ. IFS ಆದವರೇ ಆಗಬೇಕು. ಅವರೇನು ಮಾಡುತ್ತಾರೆ? ಒಂದು ರೀತಿ ಬಿಳಿ ಆನೆಗಳನ್ನು ಸಾಕಿದ ಹಾಗೆ ಸಾಕುತ್ತೀರಿ. ಇದರಿಂದ ಅರಣ್ಯವನ್ನು ಉಳಿಸುವ ಕೆಲಸ ಖಂಡಿತ ಆಗುವುದಿಲ್ಲ. ಅದರ ಜೊತೆಗೆ daily wages watcher ಗಳನ್ನು ನೇಮಕ ಮಾಡಿಕೊಂಡಿದ್ದು, ಅವರು ಗಡಿ ಭಾಗದಲ್ಲಿ ಅರಣ್ಯವನ್ನು ಕಾಯುತ್ತಾರೆ ಆದರೆ ಅವರಿಗೆ 5–6 ತಿಂಗಳಾದರೂ ಸಂಬಳವನ್ನೇ ಕೊಡುವುದಿಲ್ಲ. ಅವರು ಏನು ಮಾಡುತ್ತಾರೆಂದರೆ smugglers ಜೊತೆ ಸೇರಿಕೊಂಡು ಮರಗಳನ್ನು ಕಡಿದು ಸಾಗಿಸುವುದಕ್ಕೆ ಸಹಾಯ ಮಾಡುತ್ತಾರೆ. ಅವರೂ ಕೂಡ ಬದುಕಬೇಕು. ಅವರಿಗೆ ಜೀವನದ

ಪ್ರಶ್ನೆ, ಸರಿಯಾಗಿ ಸಂಬಳ ಕೊಡುವುದಿಲ್ಲ. ಹೀಗಾದರೆ ಅರಣ್ಯ ಹೇಗೆ ಉಳಿಯುತ್ತದೆ. ವಿಶ್ವ ಪರಿಸರ ದಿನ ಆಚರಣೆಯಿಂದ ಅರಣ್ಯವನ್ನು ಉಳಿಸುವುದಕ್ಕೆ ಸಾಧ್ಯವಿಲ್ಲ. ಒಂದು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿ. ಇವತ್ತು ಮರ ಬೆಳೆಸುತ್ತೀರಿ ಆದರೆ ಎಂತಹ ಮರಗಳನ್ನು ಬೆಳೆಸುತ್ತೀರಿ? ಅದರಿಂದ ಪರಿಸರ ರಕ್ಷಣೆಯಾಗುವ ಯಾವುದೇ ಮರಗಳನ್ನು ಬೆಳೆಸುವುದಿಲ್ಲ. ಇರುವ ಅರಣ್ಯಗಳನ್ನು ರಕ್ಷಣೆ ಮಾಡುವುದರ ಜೊತೆಗೆ ನೀವು ನೆಡುವಂತಹ ಮರಗಳ ಬಗ್ಗೆ ಕೂಡ ಗಮನಹರಿಸಿ. ಆನೆಗಳ ಹಾವಳಿ ಬಗ್ಗೆ ನಿನ್ನೆ ಕೂಡ ಪ್ರಸ್ತಾಪವಾಗಿದೆ. ನಮ್ಮ ಜಿಲ್ಲೆಯಲ್ಲಿ ದಿನನಿತ್ಯ ಆನೆಗಳ ಹಾವಳಿ ಜಾಸ್ತಿಯಾಗುತ್ತಿದೆ. ಇವತ್ತು ಕೂಡ ಆಟೋರಿಕ್ಷಾದಲ್ಲಿ ದೈನಂದಿನ ಬಾಡಿಗೆಗೆಂದು ಮುಖ್ಯರಸ್ತೆಯಲ್ಲಿ ಹೋಗುವಾಗ ಒಬ್ಬರ ಮೇಲೆ ಆನೆ ದಾಳಿ ಮಾಡಿದ್ದು, ತೀವ್ರತರವಾದ ಗಾಯವಾಗಿದೆ. ನಿನ್ನೆ ಒಬ್ಬ ರೈತ ಜೀಪಿನಲ್ಲಿ ಕೆಲಸದವರನ್ನು ಕರೆದುಕೊಂಡು ತೋಟಕ್ಕೆ ಹೋಗುವಾಗ ಕೂಡ ಆನೆ attack ಮಾಡಿದೆ. ಮೂರು ದಿವಸಗಳ ಹಿಂದೆ ಒಬ್ಬ ವ್ಯಕ್ತಿ ಮುಖ್ಯರಸ್ತೆಯಲ್ಲಿ ಮೋಟರ್ ಬೈಕ್‌ಸಲ್ಲಿ ತೋಟಕ್ಕೆ ಹೋಗುವಾಗ ಆನೆ attack ಮಾಡಿದ್ದು, ಮೃತಪಟ್ಟಿದ್ದಾರೆ. ಬಹುಶಃ ನೀವು ರೈತರ ಬಗ್ಗೆ ಎಲ್ಲಾ ವಿಚಾರಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳೀದ್ದೀರಿ. ಕಾಡಾನೆಗಳ ಹಾವಳಿಯನ್ನು ತಡೆಯುವ ಬಗ್ಗೆ ಏಕೆ ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ನನ್ನ ಜಿಲ್ಲೆಯಲ್ಲಿ ಐದು ವರ್ಷಗಳಿಂದ ಸುಮಾರು 67 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಪ್ರಾಣ ಕಳೆದುಕೊಂಡವರು ಬೇರ್‍ಯಾರು ಅಲ್ಲ ಗಿರಿಜನ ಬಂಧುಗಳು, ಅರಣ್ಯದಲ್ಲಿ ವಾಸ ಮಾಡುವವರು, ಕೃಷಿ ಕಾರ್ಮಿಕ ವರ್ಗದವರೇ ಹೆಚ್ಚು ಮಂದಿ, 5–6 ಜನ ಬೇರೆಯವರು ಇರಬಹುದು. ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಯುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅಥವಾ ಅವುಗಳಿಗೆ ಬೇಕಾದಂಥ ಮೇವು ಮಾಡುವುದಕ್ಕೆ ಏನೇನೂ ಕಾರ್ಯಕ್ರಮಗಳಿಲ್ಲ. ಅದರ ಬದಲಾಗಿ ಕೇವಲ ಒಂದು ರೀತಿಯ ಘೋಷಣೆಗಳನ್ನು ಮಾಡುತ್ತಾರೆ. ವಿಶ್ವ ಪರಿಸರ ದಿನವೆಂದು ಆಚರಣೆ ಮಾಡುವುದನ್ನು ಮಾಡಿದರೆ ಈ

ಸಮಸ್ಯೆ ಬಗೆಹರಿಯುವುದಿಲ್ಲ. ನೀವು ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇವರು ಬೆಳೆಸುವಂತಹ ಮರಗಳನ್ನು ನೋಡಬೇಕು, ಅರಣ್ಯ ಬೆಳೆಸಲಿಕ್ಕೆ ರೈತರಿಗೆ ಮರಗಳನ್ನು ಕೊಡುತ್ತೇವೆಂದು ಹೇಳುತ್ತೇವೆಂದು ಹೇಳುತ್ತಿದ್ದಾರೆ. ಯಾವಾಗ ಕೊಡುವುದು? ಮರ ಬೆಳೆಸುವ ಸಮಯ ಯಾವುದು? ಜೂನ್‌ನಲ್ಲಿ ಕೊಡಬೇಕು. ಜುಲೈನಲ್ಲಿ ನೀವು ಕೊಡದಿದ್ದರೂ ಸಹ ನಮ್ಮ ಭಾಗದ ರೈತರು ಕಾಫಿ ತೋಟಗಳಲ್ಲಿ ಏನು ಮರ ಬೆಳೆಸಬೇಕೋ ಅದನ್ನು ಬೆಳೆಸುತ್ತಾರೆ, ಬೆಳೆಸುವುದಕ್ಕೆ ನೀವು ಬಿಟ್ಟರೆ ಸಾಕು. ಅಥವಾ ಅವರು ಬೆಳೆಸಿದ ಮರಗಳನ್ನು ಅವರಿಗೆ ಬೇಕಾದ ರೀತಿಯಲ್ಲಿ ಉಪಯೋಗಿಸುವುದಕ್ಕೆ ಬಿಡುವುದಿಲ್ಲ. ನಿನ್ನೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್ ಅವರು ಮಾತನಾಡುತ್ತಾ ಒಬ್ಬ ರೈತ ಒಂದು ಮರ ಸ್ವಂತಕ್ಕೆ ಉಪಯೋಗಿಸಬೇಕಾದ ಸಮಯದಲ್ಲಿ ಅನುಮತಿ ಕೇಳಿದರೆ ಎಷ್ಟು ಗೋಳಾಡಿಸುತ್ತಾರೆ ಎಂಬುದನ್ನು ಹೇಳಿದರು. ಉಪಯೋಗಿಸುವುದಕ್ಕೆ ಅವಕಾಶವೇ ಕೊಡುವುದಿಲ್ಲ. ರೈತರಿಗೆ ಯಾವಾಗ ಗಿಡ ಸಪ್ಲೈ ಮಾಡುತ್ತೀರಿ? ಅರಣ್ಯದಲ್ಲಿ ಮರ ನೆಡುವ ಕೆಲಸವನ್ನು ನಮ್ಮಲ್ಲಿ ಫೆಬ್ರವರಿ ತಿಂಗಳಿನಲ್ಲಿ ಮಾಡುತ್ತಾರೆ.

ಶ್ರೀ ಬಿ.ರಮಾನಾಥ ರೈ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮುಂದೆ ಸರಿ ಹೋಗುತ್ತದೆ.

ಶ್ರೀ ಕೆ.ಜಿ.ಬೋಪಯ್ಯ : ಮುಂದೆ ಸರಿ ಹೋಗುತ್ತದೆ. ಆದರೆ ನಾನು ಐದು ವರ್ಷದ್ದು ಹೇಳುತ್ತಿಲ್ಲ. ಹಿಂದಿನಿಂದಲೂ ಇದೆ.

ಶ್ರೀ ಬಿ.ರಮಾನಾಥ ರೈ : ನಿಮ್ಮ ಕಾಲದಲ್ಲಿ ಸರಿಯಾಗಿ ಆಗಿಲ್ಲ.

ಶ್ರೀ ಕೆ.ಜಿ.ಬೋಪಯ್ಯ : ಅದಕ್ಕಾಗಿಯೇ ನಾವು ಈ ಕಡೆ ಬಂದಿದ್ದೇವೆ. ನಿಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಿ. ಅರಣ್ಯದ್ದು ಇವತ್ತು ನಿನ್ನೆಯ ಸಮಸ್ಯೆ ಅಲ್ಲ. ನಾನು ಹೇಳುತ್ತೇನೆ.

ಶ್ರೀ ಬಿ.ರಮಾನಾಥ ರೈ : ಇರಬಹುದು. ಆದರೆ ನೀವು ಮಾತನಾಡಬೇಕಾದರೆ ಇವತ್ತು ನಿನ್ನೆಯದಲ್ಲ ಈ ಸಮಸ್ಯೆ ಎಂದು ಹೇಳಬಹುದಲ್ಲ?

ಶ್ರೀ ಕೆ.ಜಿ.ಬೋಪಯ್ಯ : ಇವತ್ತು ನಿನ್ನೆಯದಲ್ಲವೆಂದೇ ಹೇಳುತ್ತೇನೆ. ಐದು ವರ್ಷದಲ್ಲಿ ಅರಣ್ಯ ಬೆಳೆಸಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಬಿ.ರಮಾನಾಥ ರೈ : ಹೌದು ಮಾನ್ಯ ಅಧ್ಯಕ್ಷರೆ, ಅರ್ಥವಾಯಿತು, ಅವರು ಹೇಳಿದ ಪ್ರಕಾರ ನಿನ್ನೆ ಇವತ್ತಿನದ್ದಲ್ಲ, ಇದು ಹೀಗೆಯೇ ಆಗುತ್ತಾ ಬರುತ್ತಿದೆ, ನಮ್ಮ ಕಾಲದಲ್ಲಿ ಆಗಿದೆ. ಆದರೆ ನಾವು ಇದನ್ನು ಸಾಧ್ಯವಾದಷ್ಟು ಮಟ್ಟಿಗೆ ಸರಿಪಡಿಸಲಿಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಸ್ವಲ್ಪ ಸಮಯದ ನಂತರ ಮಾತನಾಡಿ.

ಶ್ರೀ ಸಿ.ಟಿ.ರವಿ : ಈಗ ಮಾನ್ಯ ಸದಸ್ಯರಾದ ಶ್ರೀ ರಮಾನಾಥ ರೈ ಅವರು ಅರಣ್ಯ ಸಚಿವರಾಗಿದ್ದಾರೆ. ಅವರು ಎಲ್ಲಾ ಕಾಡಾನೆಗಳನ್ನು ಕಟ್ಟಿ ಹಾಕುತ್ತಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅರಣ್ಯ ಸಚಿವರು ಮೀಟಿಂಗ್ ಕರೆದಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್ ಅವರು ಮಾತನಾಡುತ್ತಾರೆಂದು ಹೇಳಿರುವುದರಿಂದ ಇಲ್ಲಿ ಕುಳಿತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅವರು ಸದನ ಮುಗಿದ ನಂತರ ಮೀಟಿಂಗ್ ಮಾಡಬೇಕು. 4 ಗಂಟೆಗೆಂದು ಹೇಳಿದ್ದಾರೆ. ಆದರೆ 4 ಗಂಟೆಗೆ House ಎಲ್ಲಿ ಮುಗಿಯುತ್ತದೆ?

ಶ್ರೀ ಬಿ.ರಮಾನಾಥ ರೈ : ಸಾಧ್ಯವಾದಷ್ಟು ಸಂಖ್ಯೆಯಲ್ಲಿ ಮಾನ್ಯ ಸದಸ್ಯರುಗಳು ಬರುತ್ತಾರೆಂದು ಮೀಟಿಂಗ್ ಕರೆದಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : 4 ಗಂಟೆಗೆ ಇರುವ ಮೀಟಿಂಗ್‌ನ್ನು 6 ಗಂಟೆಗೆ ನಡೆಸಿದರೆ ಚೆನ್ನಾಗಿರುತ್ತದೆ.

ಶ್ರೀ ಬಿ.ರಮಾನಾಥ ರೈ : 4 ಗಂಟೆಗೆ ಇದೇ ವಿಷಯ ಚರ್ಚೆ ಮಾಡುವುದಕ್ಕೆ ಇದೆ. ನಾವು ಚರ್ಚೆ ಮಾಡೋಣ. ನೀವು ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ದಯಮಾಡಿ 6 ಗಂಟೆಗೆ ಮೀಟಿಂಗ್ ಮಾಡಿ. House ನಡೆಯುವ ಕಾರಣದಿಂದ 4 ಗಂಟೆಗೆ ಆಗುವುದಿಲ್ಲ.

ಅಧ್ಯಕ್ಷರು: ಕೆಲವರು ಇಲ್ಲಿ ಇರುತ್ತಾರೆ. ಎಲ್ಲರೂ ಬರುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುವಂತಹ ಎಲ್ಲಾ ತಾಲ್ಲೂಕುಗಳಲ್ಲಿ ಈ ಸಮಸ್ಯೆ ಇದೆ.

ಶ್ರೀ ಬಿ.ರಮಾನಾಥ ರೈ : ಈಗ 4 ಗಂಟೆ ಎಂದು ಹೇಳಿದ್ದೇವೆ. ಪರಿಸ್ಥಿತಿಯನ್ನು ನೋಡೋಣ. ಸಮಯ ಸಂದರ್ಭವನ್ನು ನೋಡಿಕೊಂಡು ಹೆಚ್ಚು ಮಾಡುವುದೋ ಬೇಡವೇ ಎಂಬುದನ್ನು ನೋಡೋಣ. ಅದನ್ನು ತಿಳಿಸುತ್ತೇವೆ.

ಅಧ್ಯಕ್ಷರು: ಆಯಿತು. ಬೋಪಯ್ಯನವರೆ, ಮಾತನಾಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಒಂದು ನಿಮಿಷ ಬೋಪಯ್ಯನವರೆ, ಮಾನ್ಯ ಸದಸ್ಯರಾದ ಬೋಪಯ್ಯ ನವರ ಮಾತಿಗೆ ಪ್ರತಿಕ್ರಯಿಸಿ ಮಾನ್ಯ ಅರಣ್ಯ ಸಚಿವರು ಬಹಳ ಉತ್ಸಾಹದಲ್ಲಿ ಮಾತನಾಡುತ್ತಿದ್ದರು. ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ ಸರ್ಕಾರವನ್ನು ನೀವು defend ಮಾಡುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಸರ್ಕಾರದ ನೀತಿಯನ್ನು ಸಮರ್ಥಿಸಿಕೊಳ್ಳುವುದಕ್ಕೆ ನಾವು ವಿರೋಧ ಮಾಡುವುದಿಲ್ಲ. ಆದರೆ ಕೆಲವು ವಿಚಾರಗಳಲ್ಲಿ ನಾವೆಲ್ಲರೂ ಸದನದ ಸದಸ್ಯರಾಗಿ ವರ್ತಿಸೋಣ, ಜನ ಪ್ರತಿನಿಧಿಗಳಾಗಿ ವರ್ತಿಸೋಣ, ಆಡಳಿತ, ವಿರೋಧ, ಅವರು ಹೇಳಿದರು, ಇವರು ಹೇಳಿದರು, ಹೀಗೆ ಹೇಳಿದರು ಎಂದು ತಿಳಿದುಕೊಳ್ಳುವುದು ಬೇಡ. ಯಾವ್ಯಾವ ರೀತಿಯ ಗಿಡಗಳನ್ನು ಕೊಡುತ್ತಾರೆಂದು ಮಾನ್ಯ ಸದಸ್ಯರಾದ ಬೋಪಯ್ಯನವರು ಹೇಳಿದರು. ರಾಜ–ಮಹಾರಾಜರ ಕಾಲದಲ್ಲಿ ರಸ್ತೆ ಬದಿಗಳಲ್ಲಿ ಹೊಂಗೆ, ನೇರಳೆ, ಹುಣಸೆ ಮರಗಳನ್ನು ನೆಡುತ್ತಿದ್ದರು. ಇದರಿಂದ ಹಕ್ಕಿಗಳಿಗೆ, ಪ್ರಯಾಣಿಕರಿಗೆ, ಮನುಷ್ಯರಿಗೆ ಇದರಿಂದ ಪ್ರಯೋಜನ ಆಗುತ್ತಿತ್ತು. ಇವರು ನಮ್ಮ ಊರುಗಳಲ್ಲಿ ಕರಿಜಾಲಿ, ನೀಲಗಿರಿ, ಹರ್‌ಕ್ಯುಲಿಸ್ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಇವತ್ತು ನೀವು ಇಲ್ಲಿ ಇದ್ದೀರಿ, ಅವರು ಅಲ್ಲಿದ್ದಾರೆ, ನಾಳೆಯ ದಿವಸ ಎಲ್ಲಿ ಕುಳಿತುಕೊಳ್ಳುತ್ತೇವೆಯೋ ಗೊತ್ತಿಲ್ಲ. ಇವರನ್ನು ಸಮರ್ಥಿಸುವ ಉದ್ವೇಗದಲ್ಲಿ ಅವಿವೇಕಿಗಳನ್ನು ಸಮರ್ಥಿಸುವುದಕ್ಕೆ ಹೋಗಬೇಡಿ. ಈಗಾಗಲೇ ಈ ಇಲಾಖೆ ರಾಜ್ಯದಲ್ಲಿ ಎಷ್ಟು ಅನಾಹುತ ಮಾಡಿದೆಯೆಂದರೆ, ಇದರ ಬಗ್ಗೆ 2–3 ದಿನಗಳ ಕಾಲ ಪ್ರತ್ಯೇಕವಾಗಿ ಮಾತನಾಡಬೇಕಾಗುತ್ತದೆ. ಅವರಿಗೆ ಜನಪರವಾದಂತಹ ನಿಲುವಿಲ್ಲ. ನಮಗೆ all India cadre ಪ್ರಕಾರ ಎಷ್ಟು IFS strength ಬೇಕು? ಕರ್ನಾಟಕ ರಾಜ್ಯಕ್ಕೆ ಅಲಾಟ್ ಮಾಡಿರುವುದೆಷ್ಟು? ಏನೇನು ಉದ್ಯೋಗಗಳಿವೆ? ಇವರು ಜಿಲ್ಲಾ ಪಂಚಾಯಿತಿ Chief Executive Officers ಆಗಬಹುದು. ಅಲ್ಲೊಂದು ಪರೀಕ್ಷೆ ಪಾಸ್

ಮಾಡುವುದು. IAS, IPS ಸಿಗಲಿಲ್ಲವೆಂದರೆ IFS ಕೊಡುತ್ತಾರೆ ಎಂದು ಹೇಳುವುದು. ಅಲ್ಲೊಂದು ಟ್ರೈನಿಂಗ್ ಮುಗಿಸಿಕೊಂಡು ಬಂದು ನಮ್ಮ ಮೇಲೆ ಬೀಳುತ್ತಾರೆ. ಕೆಲವರ ಮಕ್ಕಳು ತಾಯಿಯ ಹಾಲು, ತೊಟ್ಟಿಲು ಆದ ಮೇಲೆ ಹಾಗೆ ಹೀಗೆ ಬೆಳೆಯುತ್ತಾರೆ. ಆದರೆ ಇವರೆಲ್ಲಾ ತಾಯಿ ಹಾಲು ಬಿಟ್ಟ ತಕ್ಷಣವೇ ಸರ್ಕಾರಿ ನೌಕರಿಗೆ ಬಿದ್ದಂತಹವರು. ಇದರಲ್ಲೇ ಉದ್ಧಾರವಾಗಬೇಕು. Mr. Ramanath Rai, Hon'ble Minister, please be very very cautious. Don't be in a hurry to defend them. All of us will have to stand in one voice as members of the House to check these people to put them under control.

ಶ್ರೀ ಡಿ.ಎನ್.ಜೀವರಾಜ್ (ಶೃಂಗೇರಿ) : IFS, ಅಧಿಕಾರಿಗಳಾದಂತಹ ತುಂಬಾ ಜನರಿಗೆ, ನಮ್ಮನ್ನು ಸೇರಿಸಿಕೊಂಡು ತಲೆ ಮಾತ್ರ ಇದೆ, ಹೃದಯ ಇಲ್ಲದ ಹಾಗೆ ಆಗಿದೆ. ಹೃದಯ ಇದ್ದರೆ ಹೀಗೆ ಆಗುತ್ತಿರಲಿಲ್ಲ. ತಲೆಯ ಜೊತೆಗೆ ಹೃದಯವನ್ನು ಸೇರಿಸಿಕೊಂಡರೆ ಒಳ್ಳೆಯದು.

ಶ್ರೀ ಕೆ.ಜಿ.ಬೋಪಯ್ಯ : ಈಗ ಹೇಳಿದ ಹಾಗೆ ಎಂತಹ ಮರಗಳನ್ನು ನೆಡುತ್ತೀರೆಂದು ಹೇಳಿದ್ದೀರಿ. ಈ ಮರಗಳನ್ನು ನೆಡುವುದು ಫೆಬ್ರವರಿ ತಿಂಗಳಿನಲ್ಲಿ. ಫೆಬ್ರವರಿ ತಿಂಗಳಿನಲ್ಲಿ ನೆಟ್ಟರೆ ಉಳಿಯುತ್ತದೆಯೇ? ಏಕೆ ಈ ರೀತಿಯ ಕಾರ್ಯಕ್ರಮಗಳನ್ನು ಹಾಕುತ್ತೀರೋ ಗೊತ್ತಿಲ್ಲ. ಅಕ್ಟೋಬರ್ ತಿಂಗಳಿನಲ್ಲಿ ಅಲ್ಲ, ಈಗ ನೆಡಬೇಕು. ನಾನೊಬ್ಬ ರೈತನ ಮಗನಾಗಿ ಹೇಳುವುದೇನೆಂದರೆ ಮರ ಏನಾದರೂ ನೆಡಬೇಕಾದರೆ ಜೂನ್-ಜುಲೈ ತಿಂಗಳಿನಲ್ಲಿ ನೆಡಬೇಕು. ನಾಗರಹೊಳೆಯಲ್ಲಿ ಅಭಯಾರಣ್ಯ ಟೈಗರ್ ರಿಸರ್ವ್ ಎಂದು ಡಿಕ್ಲೇರ್ ಆಗಿದೆ. ಆದರೆ ಇವರು ಅಲ್ಲಿ ನೆಡುವುದು ಟೀಕ್-ವುಡ್. ಆ ಮರಗಳ ಕೆಳಗೆ ಏನಿರುತ್ತದೆ? ಟೀಕ್-ವುಡ್ ಮರದ ಕೆಳಗೆ ಬೇಸಿಗೆಯಲ್ಲಿ ಒಂದು ಹುಲ್ಲೂ ಸಹ ಇರುವುದಿಲ್ಲ. ಆಕಸ್ಮಿಕವಾಗಿ ಪೆಟ್ರೋಲ್ ಏನಾದರೂ ಬಿದ್ದರೆ ನಾಶವಾಗುತ್ತದೆ. ಇದೆಲ್ಲವನ್ನು ನಿಲ್ಲಿಸಿ. ಹುಣುಸೂರಿಗೆ ಹೋದರೆ " ತೇಗದ ನಾಡಿಗೆ ಸ್ವಾಗತ" ಎಂದು ಬೋರ್ಡ್ ಇದೆ. ನಾಗರಹೊಳೆ ತೇಗದ ನಾಡೇ? Tiger reserve ಎಂದು ಹೇಳಿದ್ದೀರಿ. ಹುಲಿಗಳ ಕಾಟದಿಂದ ನಮ್ಮ ಪರಿಸ್ಥಿತಿಯಂತೂ ಹೇಳುವುದಕ್ಕಾಗುವುದಿಲ್ಲ. "ತೇಗದ ನಾಡಿಗೆ ಸ್ವಾಗತ" ಎಂದು ಬೋರ್ಡ್ ಹಾಕುತ್ತೀರಿ. ಇದನ್ನೆಲ್ಲಾ ನಿಲ್ಲಿಸಿ. ಅಕೇಷಿಯಾ ಮರ ನೆಡುವುದನ್ನು ನಿಲ್ಲಿಸಿ.

ಪರಿಸರ ಹಾಗೂ ಜಲವನ್ನು ರಕ್ಷಣೆ ಮಾಡುವಂತಹ ಮರಗಳೇನಿವೆ ಅದನ್ನು ನೆಡಿ. ಆನೆಗಳು ತಿನ್ನುವಂತಹ ವಿಶೇಷ ಮರವಿದ್ದು ಅದನ್ನು ಬೆಂಡೇ ಮರ ಎಂದು ಕರೆಯುತ್ತಾರೆ. ಬಾಟನಿಯಲ್ಲಿ ಅದಕ್ಕೆ ಹೆಸರೇನು ಎನ್ನುವುದು ಗೊತ್ತಿಲ್ಲ. ಬೆಂಡೇ ಮರ ಆನೆಗಳಿಗೆ ಬಹಳ ಪ್ರಿಯ. ಆದರೆ ಅದು ನಿಮಗೆ ಗೊತ್ತೇ ಇಲ್ಲ. IFS, ಮತ್ತೊಂದು ಡಿಗ್ರಿ ತೆಗೆದುಕೊಂಡಿದ್ದಾರಲ್ಲಾ ಅವರನ್ನು ಕರೆದು ಕೇಳಿ. ಎಷ್ಟು ಬೆಂಡೇ ಮರವಿದೆ, ಏಕೆ ನೆಡಬಾರದು ಅಥವಾ ಬಿದಿರು ಮರ ನೆಡುವುದಕ್ಕೆ ಕಾರ್ಯಕ್ರಮವೇನು? ಎಲ್ಲಾ ಹೊಗಿದೆಯೆಲ್ಲಾ? ಎಷ್ಟು ಬಿದಿರು ಗಿಡ ಬೆಳೆಸಿದ್ದಾರೆ ಎಂಬುದನ್ನು ನೋಡಲು plantation ಗೆ ಒಂದು ಸುತ್ತು ಹೋಗಿ ಬನ್ನಿ. ಪ್ರಮಾಣಕ್ಕೊಂದೂ ಇಲ್ಲ, ನೆಡುವುದು ಫೆಬ್ರವರಿಯಲ್ಲಿ, ಆಮೇಲೆ ರೈತರ ಮೇಲೆ ಕೇಸ್‌ಗಳನ್ನು ಹಾಕುತ್ತಾರೆ. ಅಕ್ರಮವಾಗಿ ಮರ ಸಾಗಾಟ ಎಂದು ಫೋಟೋ ಹಾಕಿ ಬಿಡುತ್ತಾರೆ. ಯಾರು ಹಳ್ಳಿಯಲ್ಲಿರುತ್ತಾರೆ, ಮಕ್ಕಳನ್ನು ಓದಿಸುವುದಕ್ಕೆ ಎಲ್ಲಾ ಕಡೆಯೂ ಇರಬಹುದು, ಜೀಪಿನಲ್ಲಿ ತಂದು ಬಿಟ್ಟರೆ ಅವರನ್ನು ಹಿಡಿದು ಫೋಟೋ ಹಾಕಿ ಬಿಡುತ್ತಾರೆ. ಏಕೆಂದರೆ ಇವರು ಸ್ಮಗ್ಲಿಂಗ್ ಚಟುವಟಿಕೆಗಳನ್ನು ಮಾಡುತ್ತಿದ್ದು ಅದನ್ನು ನಿಲ್ಲಿಸುತ್ತಿದ್ದೇವೆಂದು ತೋರಿಸಬೇಕಲ್ಲವೇ? ಇದು ನಿರಂತರವಾಗಿ ನಡೆಯುತ್ತಿದೆ, ಇದನ್ನು ನಿಲ್ಲಿಸಿ. ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವಂತಹ ಕೆಲಸ ಮಾಡಿ. ಮಾತೆತ್ತಿದರೆ deemed forest, ಇನ್ನೊಂದು ಎಂದು ಹೇಳುತ್ತಾರೆ. ನಿಜವಾದ ಅರಣ್ಯ ಎಷ್ಟಿದೆ, ಅದನ್ನು ಸೂಕ್ತವಾಗಿ ರಕ್ಷಣೆ ಮಾಡಿದರೆ, ಏನೇನೂ ಸಮಸ್ಯೆಗಳೂ ಇಲ್ಲ. ಅದಕ್ಕೆ ಸೂಕ್ತ ಕ್ರಮಗಳನ್ನು ಹಾಕಿ. ನಮ್ಮ ಮತಕ್ಷೇತ್ರದಲ್ಲಿ ಈ ಆನೆಗಳಿಂದ ಬೆಳೆ ಹಾನಿ, ಕಳೆದ ಏಪ್ರಿಲ್ 2012 ರಿಂದ ಮಾರ್ಚ್2013 ರವರೆಗೆ 2407 ಪ್ರಕರಣಗಳಾಗಿವೆ. ರೈತರಿಗಾದಂತಹ ನಷ್ಟ, ಪ್ರಾಣ ಹಾನಿ–17, ಗಾಯಾಳುಗಳಾಗಿರುವುದು–27, ಇವತ್ತು ನಿರಂತರವಾಗಿ ನಡೆಯುತ್ತಿದೆ. ಕ್ಷೇತ್ರದಲ್ಲಿ ಯಾರಾದರೊಬ್ಬರು ಸತ್ತು ಹೋದರೆ ನಾವು ಹೋಗಿ ಸಾಂತ್ವನ ಹೇಳುವುದಕ್ಕೆ ಸಾಧ್ಯವಿಲ್ಲ. ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ. ಇದನ್ನು ತಡೆಗಟ್ಟುವುದಕ್ಕೆ ತಕ್ಷಣ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ? ಇದನ್ನು ಮಾಡಬೇಕೆನ್ನುವುದು ನನ್ನ ವಿನಂತಿಯಿದೆ. ಅದರ ಜೊತೆಗೆ ಇನ್ನು ಮುಂದೆಯಾದರೂ forest ಒಳಗೆ ಅಕೇಷಿಯಾ, ಟೀಕ್–ವುಡ್ ನೆಡುವುದನ್ನು ತಕ್ಷಣ ನಿಲ್ಲಿಸಿ. ಅದನ್ನು ತೆಗೆದು ಬೇರೆ ಮರ ನೆಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಿ. ನಾನು ಮೊನ್ನೆ ವಿಶ್ವ

ಪಾರಂಪಾರಿಕ ತಾಣದ ತಮ್ಮ ಭಾಷಣವನ್ನು ಕೇಳಿದೆ. World heritage ಬಗ್ಗೆ ಕಳೆದ ವಿಧಾನಸಭೆಯಲ್ಲಿ ಚರ್ಚೆಯಾಯಿತು. ಪಶ್ಚಿಮ ಘಟ್ಟ ರಕ್ಷಣಾ ಕಾರ್ಯಪಡೆ ಯವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರೇನೂ ರಕ್ಷಣೆ ಮಾಡುವುದಿಲ್ಲ. ಅವರ ಹಿಂದೆ ಹೋದರೆ ಪಶ್ಚಿಮ ಘಟ್ಟಗಳು ಇರುವುದು ಹಾಳಾಗುತ್ತದೆ. ಅಂತಹ ವರದಿಯನ್ನೇ ಅವರು ಕೊಡುತ್ತಾರೆ. ಅದಕ್ಕಾಗಿಯೇ ವಿಧಾನಸಭೆಯಲ್ಲಿಯೇ ಚರ್ಚೆಯಾಗಿ ವಿಶ್ವ ಪಾರಂಪರಿಕ ತಾಣ ಬೇಡ ಎಂದು ಸರ್ವಾನುಮತದಿಂದ ನಿರ್ಣಯವನ್ನು ಮಾಡಲಾಗಿತ್ತು. ನಾವು ಉಳಿಸಿಕೊಳ್ಳುತ್ತೇವೆಂದು ಹೇಳಿ ನಿರ್ಣಯ ಮಾಡಿದ್ದರೆ, ತಾವು ಮೊನ್ನೆ ತಮ್ಮ ಕ್ಷೇತ್ರದಲ್ಲಿ ಮಾತನಾಡುತ್ತಾ ಪಶ್ಚಿಮ ಘಟ್ಟ ರಕ್ಷಣಾ ಕಾರ್ಯಪಡೆ ಕೊಟ್ಟ ವರದಿಯನ್ನು ಅನುಷ್ಠಾನ ಮಾಡುತ್ತೇನೆ ಎಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಬಿ.ರಮಾನಾಥ ರೈ (ಮಾನ್ಯ ಅರಣ್ಯ ಸಚಿವರು) : ನಾನು ಆ ರೀತಿ ಹೇಳಿಲ್ಲ.

ಶ್ರೀ ಕೆ.ಜಿ.ಬೋಪಯ್ಯ : ಪತ್ರಿಕೆಯಲ್ಲಿ ಬಂದಿಲ್ಲವೆಂದರೆ ವಾಪಸ್ಸು ತೆಗೆದುಕೊಳ್ಳುತ್ತೇನೆ. ಪತ್ರಿಕೆಯಲ್ಲಿ ತಮ್ಮದು ಬಂದಿದೆ. ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದೇನೆ. ತಾವು ಹೇಳಿಲ್ಲವೆಂದರೆ ಆ ಪತ್ರಿಕೆ ಮೇಲೆ ಕ್ರಮ ತೆಗೆದುಕೊಳ್ಳಿ. ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳಿದ್ದೇನೆ. ನಾನು ಓದಿದ್ದೇನೆ. ನಿರ್ಣಯ ಆಗಿರುವುದು ತಮಗೆ ಮರೆತು ಹೋಗುತ್ತದೆ ಎಂದರೆ ಇದು ಸರಿಯಲ್ಲ. ಪಶ್ಚಿಮ ಘಟ್ಟ ಕಾರ್ಯಪಡೆ ಅಂಥ ಏನಿದೆ ಅದನ್ನು abolish ಮಾಡಿ. ಅಂಥವರಿಂದ ಅರಣ್ಯ ಉಳಿಯುವುದಿಲ್ಲ. ಅರಣ್ಯ ನಾಶ ಆಗುತ್ತದೆ. ಅವರಿಗೆ office ಬೇಕು. ವಿಧಾನಸೌಧದ ಮೂರನೇ ಮಹಡಿಯಲ್ಲಿ ಈ ಕಾರ್ಯಪಡೆಗೆ ಏನು ಕೆಲಸ? ನಾನು ಇರುವುದನ್ನು ಹೇಳಿದ್ದೇನೆ. ಅವರಿಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಅಲ್ಲ ಕೆಲಸ. ಅವರು ಅರಣ್ಯದಲ್ಲಿ ಇರಲಿ. ಮಲೆನಾಡು ಪ್ರದೇಶದ ರೈತರ ಕಷ್ಟ ಏನು ಎಂದು ಅವರಿಗೆ ಗೊತ್ತಾಗಲಿ. ಅದರ ಜೊತೆಗೆ, ಇವತ್ತು ಬಹಳ ಮುಖ್ಯವಾಗಿ ತಾವು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆಂದು ಹೇಳಿದ್ದೀರಿ. ಕೊಡಗು ಜಿಲ್ಲೆಯಲ್ಲಿ ಸುಮಾರು 4,579.53 ಗ್ರಾಮೀಣ ರಸ್ತೆಗಳು ಇವೆ. ಕಳೆದ 5 ವರ್ಷಗಳಲ್ಲಿ ಎಲ್ಲಾ ಸೇರಿ 1622.26 ಡಾಂಬರೀಕರಣ ರಸ್ತೆಗಳು ಇವೆ. 1,911

ಮಣ್ಣು ರಸ್ತೆಗಳು ಇವೆ. 1045 ಜೆಲ್ಲಿ ರಸ್ತೆಗಳು ಇವೆ. ಇವು ಇನ್ನೂ ಅಭಿವೃದ್ಧಿ ಆಗಬೇಕಾಗಿದೆ. ಹಾಗಾಗಿ ಇವತ್ತು ಡಾ. ನಂಜುಂಡಪ್ಪ ಆಯೋಗದ ವರದಿಯನ್ನು ಅನುಷ್ಠಾನ ಮಾಡುತ್ತೇವೆಂದು ಹೇಳಿದ್ದಾರೆ. ಆ ವರದಿಯಲ್ಲಿ ಕೊಡಗು ಜಿಲ್ಲೆಯ ಬಗ್ಗೆ ಒಂದು sentence ಇದೆ. ಕೊಡಗು ಜಿಲ್ಲೆಯಲ್ಲಿ ವಿಪರೀತ ಮಳೆ ಹೊಡೆಯುವುದರಿಂದ ಪ್ರತ್ಯೇಕ ರಸ್ತೆ ನಿಧಿ ಮಾಡಬೇಕು ಎನ್ನುವಂಥದ್ದು ಡಾ. ನಂಜುಂಡಪ್ಪ ಆಯೋಗದ ವರದಿಯಲ್ಲಿದೆ. ಕಳೆದ 5 ವರ್ಷಗಳಿಂದ ಸತತವಾಗಿ ಹಿಂದಿನ ಸರ್ಕಾರ, ಸನ್ಮಾನ್ಯ ಯಡಿಯೂರಪ್ಪನವರಿಂದ ಪ್ರಾರಂಭವಾಗಿದ್ದು 25 ಕೋಟಿಯಿಂದ 75 ಕೋಟಿಯವರೆಗೆ ಕೊಟ್ಟಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ನಾವು ಎಲ್ಲಾ ರೀತಿಯ ನಷ್ಟಗಳನ್ನು ಮಾಡಿಕೊಂಡು ನಿಮಗೆ ಧಾರಳವಾಗಿ ಮಳೆ ಸುರಿಸಿ ನೀರು ಕೊಡುತ್ತಿದ್ದೇವೆ. ಕಾವೇರಿ, ಕೆ.ಆರ್.ಎಸ್. ಹೇಮಾವತಿ ಎಲ್ಲಾ ತುಂಬಬೇಕಾದರೆ ಕೊಡಗಿನಲ್ಲಿ ಮಳೆ ಹೊಡೆಯುತ್ತದೆ ರಸ್ತೆಗಳು ಹಾಳಾಗುತ್ತವೆ. ಈ ರಸ್ತೆಗಳಿಗೆ ಅನುದಾನ ಕೊಡತಕ್ಕಂಥದ್ದನ್ನು ದಯವಿಟ್ಟು ನಿಲ್ಲಿಸಬೇಡಿ. ಮುಂದಿನ ತಮ್ಮ ಬಜೆಟ್‌ನಲ್ಲಿ ಕನಿಷ್ಠ 100 ಕೋಟಿ ರೂಪಾಯಿಗಳನ್ನಾದರೂ ಈ ರಸ್ತೆಗಳ ಅಭಿವೃದ್ಧಿಗೆ ಹಿಂದೆ ನಿಗದಿ ಮಾಡಿದಂತೆ ಅನುದಾನವನ್ನು ಮಂಜೂರು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಅದರ ಜೊತೆಗೆ ಇವತ್ತು P.W.D.ರಸ್ತೆಗಳಿಗೆ ಸಾಕಷ್ಟು ಅನುದಾನ ಕೊಟ್ಟಿದೆ. ಆ ವ್ಯವಸ್ಥೆಗಳು ಹೇಗಿವೆ ಎಂದರೆ ಇ–ಟೆಂಡರ್. ಯಾರ್‍ಯಾರೋ ಟೆಂಡರ್ ಹಾಕುತ್ತಾರೆ. ಆ ಟೆಂಡರ್ ಹಾಕಿ ಅದರ Process ಆಗಬೇಕಾದರೆ ಆರು ತಿಂಗಳು ಬೇಕಾಗುತ್ತದೆ. ನಿಮಗೆಲ್ಲಾ ಗೊತ್ತಿದೆ ಕೊಡಗಿನಲ್ಲಿ ಯಾವುದೇ ರಸ್ತೆಗಳು ಕೆಲಸ ಮಾಡಲಿಕ್ಕೆ 4 ತಿಂಗಳ ಕಾಲಾವಕಾಶ ಬೇಕು. ಅದಕ್ಕಿಂತ ಹೆಚ್ಚು ಆಗುವುದಿಲ್ಲ. ಮೇ ತಿಂಗಳಿನಲ್ಲಿ ಮಳೆ ಬರಲು ಶುರುವಾಗುತ್ತದೆ. ಆದ್ದರಿಂದ ಮೇ 15 ಕ್ಕೆ ನಿಲ್ಲಿಸಲೇಬೇಕು. ಇ–ಟೆಂಡರ್ ಕರೆಯುವುದು, ಯಾರೋ ಹಾಕಿದ್ದಾರೆ, ಅವರು ಅಲ್ಲಿಂದ ಕೆಲಸನೇ ಮಾಡುವುದಿಲ್ಲ. ಅವರು ಅಲ್ಲಿ ಯಾರಿಗೋ local subcontract ಕೊಡುವುದು. ಉದಾಹರಣೆಗೆ ಮೈಸೂರಿನ ಯಾರೋ ಒಬ್ಬರು Corporator ಸುಮಾರು 15 ಕೋಟಿ ರೂಪಾಯಿ ಕೆಲಸವನ್ನು ಕಳೆದ ಬಾರಿ ತೆಗೆದುಕೊಂಡಿದ್ದಾರೆ. ಈಗ ಕೇಳಿದರೆ ನನಗೆ ಸಮಯವಿಲ್ಲ. ಮೈಸೂರಿನಲ್ಲಿ ಮೇಯರ್‌ಗೆ ಪ್ರಯತ್ನ ಮಾಡುತ್ತಿದ್ದೇನೆ. ಆ ಮೇಯರ್ ಸ್ಥಾನ ಸಿಕ್ಕಿದ ಮೇಲೆ

ನಿಮ್ಮ ಕೆಲಸವೆಂದು ಹೇಳಿದರು. ಈತ ಮೇಯರ್ ಆಗುವುದಕ್ಕೂ, ಜಿಲ್ಲೆಗಳ ರಸ್ತೆಗಳಿಗೂ ಏನು ಸಂಬಂಧ? ಇಂಥವರ ಮೇಲೆ ಅಧಿಕಾರಿಗಳು ಏನಾದರೂ ಬರೆದರೆ ಅವರಿಗೆ ಎಲ್ಲಿ ರಕ್ಷಣೆ ಸಿಗುತ್ತದೆ? ದಯವಿಟ್ಟು ಈ ವ್ಯವಸ್ಥೆಯನ್ನು ಸರಿ ಮಾಡಿ. ತಾವು M.L.A. grant ಗೆ ಒಂದು ಲಕ್ಷ ಏನಾದರೂ ಕೊಟ್ಟರೆ Executive Engineer ಅವರಿಗೆ ಏನೂ ಅಧಿಕಾರವಿಲ್ಲ. ಅದು Superintending Engineer ಗೆ ಬರಬೇಕು. ಅವರು ಅಲ್ಲಿ ಒಂದಷ್ಟು ದಿವಸ ಇಟ್ಟುಕೊಳ್ಳುವುದು. ಆಮೇಲೆ chief Engineer ಗೆ ಬರುವಂಥದ್ದು, ಈ ವ್ಯವಸ್ಥೆಗಳು ಏಕೆ? ವಿಕೇಂದ್ರಿಕರಣವೆಂದು ಬಹಳ ದೊಡ್ಡದಾಗಿ ಮಾತನಾಡುತ್ತೇವೆ. ಅದನ್ನು ಸಡಿಲಗೊಳಿಸಿ. ಒಬ್ಬ Executive Engineer ರವರಿಗೆ ಅಧಿಕಾರ ಕೊಡಿ. ಆತನಿಗೆ ಕನಿಷ್ಠ 25 ಕೋಟಿ ರೂಪಾಯಿಗಳನ್ನು ಏಕೆ approval ಮಾಡಬಾರದು? ಇದರಿಂದಾಗಿ ನಿಮ್ಮ ಯಾವ ಕೆಲಸಗಳೂ ಆಗುವುದಿಲ್ಲ. ಎಲ್ಲಾ ಬೆಂಗಳೂರಿಗೆ ಬರಬೇಕು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಬೋಪಯ್ಯನವರು ಮಾತನಾಡುತ್ತಾ ಬಹಳ ಒಳ್ಳೆಯ ಸಲಹೆಯನ್ನು ಕೊಡುತ್ತಿದ್ದಾರೆ. ನಾವು ಆ ಭಾಗದಲ್ಲಿ ಇದ್ದಾಗ ಕೂಡ ಚರ್ಚೆ ಮಾಡಿದ್ದೇವೆ. ನಿಮ್ಮ ಅಧ್ಯಕ್ಷತೆಯಲ್ಲಿ ನಾಲ್ಕು ಮೀಟಿಂಗ್ ಆಯಿತು. ಅದರ ಪರಿಣಾಮ ಏನಾಯಿತು ಎಂದರೆ ಇಲ್ಲಿಯವರೆಗೂ ಆದೇಶ issue ಆಗಲಿಲ್ಲ. ಈಗ ಎತ್ತಿರುವ ವಿಚಾರವನ್ನು ತಮ್ಮ ಅಧ್ಯಕ್ಷತೆಯಲ್ಲಿ ಮುಂದುವರಿಸಬೇಕು. ನಮ್ಮ ಪಕ್ಷದ ಸಭೆಯಲ್ಲೂ ಕೂಡ ಇದು ವ್ಯಾಪಕವಾಗಿ ಚರ್ಚೆ ಆಗಿದೆ. ಅದಕ್ಕೆ ಏನಾದರೂ ಬದಲಾವಣೆಯನ್ನು ತರುತ್ತೇವೆ. ಒಂದು ಲಕ್ಷ ರೂಪಾಯಿಯನ್ನು ಖರ್ಚು ಮಾಡಬೇಕಾದರೆ 3rd party inspection ಅಂಥ ಹೇಳಿ ಇಂಜಿನಿಯರಿಂಗ್ ಕಾಲೇಜಿಗೆ ಹೋಗುತ್ತಾರೆ. Assistant Commissioner ಗೆ ಹಾಕುತ್ತಾರೆ. 5 ವರ್ಷಗಳಿಂದ ದುಡ್ಡು ಖರ್ಚು ಆಗಿಲ್ಲ. ಅದ ಕಂದಾಯ ಇಲಾಖೆಗೆ ಬರುವುದಾರೂ ಕೂಡ ಇವತ್ತು ಸುಮಾರು M.L.A. grants, M.P.grants ಸುಮಾರು 500,600 ಕೋಟಿ ಖರ್ಚಾಗಿರುವುದಿಲ್ಲ. ಇದು ಸರ್ಕಾರದ ಗಮನಕ್ಕೆ ಇದೆ. ಖಂಡಿತವಾಗಿಯೂ ಅದಕ್ಕೆ ಕಾರ್ಯಕ್ರಮವನ್ನು ರೂಪಿಸುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ : ಟೆಂಡರ್ amount ಮೇಲೆ extra ಕೊಡುವಂಥದ್ದಕ್ಕೂ Competition. ಆ Executive Engineer ಗೆ 15% Superintending Engineer ಅಂದರೆ Circle office ಅವರಿಗೆ ಒಂದಿಷ್ಟು percent. C.E.O. ಗೆ ಒಂದು percent ಜಾಸ್ತಿ ಮಾಡುವುದು. 34% ಆಗಬೇಕಾದರೆ ಸರ್ಕಾರಕ್ಕೆ. ಈ ವ್ಯವಸ್ಥೆಗಳು ಏಕೆ? ಸರ್ಕಾರಕ್ಕೆ ಬರುವವರೆಗೂ ನೀವು ಫೈಲ್ ಅನ್ನು ಇಟ್ಟುಕೊಳ್ಳುವುದಾದರೆ ಹೇಗೆ? ಯಾರಿಗಾದರೂ ಸರಿ ಒಬ್ಬರಿಗೆ ಕೊಡಿ. ಒಬ್ಬೊಬ್ಬರಿಗೆ ಒಂದೊಂದು ಅಧಿಕಾರ. ಇದರಿಂದಾಗಿ ಯಾವ ಕೆಲಸನೂ ಆಗುವುದಿಲ್ಲ. ಇದನ್ನು ಸರಿ ಮಾಡುವಂಥ ಕೆಲಸವನ್ನು ಮಾಡಿ.

ಶ್ರೀ ಎಂ.ಪಿ.ಅಶೋಕ : ನಾವು ಮಾಡಿಲ್ಲ. ಮಾನ್ಯ ಉದಾಸಿ ಅವರು ಮಾಡಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಉದಾಸಿಯವರು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ನಿಮಗೆ ಅಧಿಕಾರ ಇದೆಯಲ್ಲಾ?

ಅಧ್ಯಕ್ಷರು : ಇಲ್ಲದೆ ಇರುವವರ ವಿಚಾರವನ್ನು ಹೇಳಬೇಡಿ.

(ಗೊಂದಲ)

ಶ್ರೀ ಕೆ.ಜಿ.ಬೋಪಯ್ಯ : ನಿಮ್ಮ ಹತ್ತಿರ ದಾಖಲೆಗಳು ಇದ್ದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಜೈಲಿಗೆ ಹಾಕಿ. ಸುಮ್ಮನೆ ಏಕೆ ಮಾತನಾಡುತ್ತೀರಿ?

ಶ್ರೀ ಬಿ.ರಮಾನಾಥ ರೈ : ಅವರನ್ನು ತಡೆಯಲು ಹೋಗಿ ನನ್ನ ಅಧಿಕಾರ ಹೋಯಿತು ಎಂದು ಮಾಜಿ ಮುಖ್ಯಮಂತ್ರಿಗಳು ಭಾಷಣ ಮಾಡಿದರು.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಮುಖ್ಯಮಂತ್ರಿಗಳು ಯಾರೇ ತಪ್ಪು ಮಾಡಿದ್ದರೂ ಅವರನ್ನು ಜೈಲಿಗೆ ಹಾಕುತ್ತೇವೆಂದು ಘಂಟಾಘೋಷವಾಗಿ ಹೇಳಿದ್ದಾರೆ. ಹಾಕಿ. We welcome it.

ಶ್ರೀ ಹೆಚ್.ಡಿ.ರೇವಣ್ಣ : ಅಧ್ಯಕ್ಷರೆ, ಸಭೆಯಲ್ಲಿ ಯಾವ ಸದಸ್ಯರು ಇರುವುದಿಲ್ಲವೋ ಅವರ ಹೆಸರನ್ನು ಎತ್ತುವುದಕ್ಕೆ ಅವಕಾಶ ಕೊಡಬಾರದು. ಅವರು defend ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಕೆ.ಜಿ.ಬೋಪಯ್ಯ : ಪ್ರವಾಸೋದ್ಯಮ ಇಲಾಖೆಯು ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ಎಂದು ಗುರುತು ಮಾಡಿದೆ. ಅದಕ್ಕೆ ಕಾರ್ಯಕ್ರಮಗಳು ಏನಿಲ್ಲ. ಸುಮ್ಮನೆ ಪ್ರವಾಸೋದ್ಯಮ ಅಭಿವೃದ್ಧಿ

ಮಾಡುತ್ತೇವೆಂದು ಹೇಳಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ಆಗಬೇಕಾದರೆ ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಸಾಕಷ್ಟು ತಾಣಗಳು ಇವೆ. ಅವೆಲ್ಲಾವನ್ನು ನೋಡಬೇಕು. ಅದು ಆಗಬೇಕಾದರೆ ಅದರಲ್ಲಿ ಹೋಗುವಂಥ ಸಂಪರ್ಕ ವ್ಯವಸ್ಥೆಗಳು ಏನಿದೆ ರಸ್ತೆಗಳಿಗೆ ಹೆಚ್ಚು ಅನುದಾನವನ್ನು ಕೊಡುವಂಥ ಕೆಲಸವಾದರೆ ಮಾತ್ರ ಇದು ಸಾಧ್ಯ. ಕೇವಲ ಭಾಷಣದಲ್ಲಿ ಎಲ್ಲವನ್ನೂ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಆಗಬೇಕಾದರೆ ಸ್ವಲ್ಪ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವಂಥ ಕೆಲಸ ಆಗದೇ ಹೋದರೆ ಅಧಿಕಾರಿಗಳು ಹೇಳಿದ್ದನ್ನೇ ಕೇಳಿ ಕೆಲಸ ಮಾಡುವುದಾದರೆ ಖಂಡಿತ ಮಾಡಲಿಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಬೇಕು. ಒಟ್ಟಿನಲ್ಲಿ ತಾವು ರಾಜ್ಯಪಾಲರ ಭಾಷಣವನ್ನು ಸದನದಲ್ಲಿ ಏನು ಹೇಳಿಸಿದ್ದೀರಿ ಆ ಭಾಷಣ ಅಭಿವೃದ್ಧಿಯ ದಿಕ್ಸೂಚಿ ಅಂತೂ ಅಲ್ಲ. ಮಾಮೂಲಿ ಭಾಷಣ ಆಗುವುದು ಬೇಡ. ವಂದನಾ ನಿರ್ಣಯವನ್ನು ಅನಿವಾರ್ಯವಾಗಿ ವಿರೋಧಿಸಲೇಬೇಕಾಗುತ್ತದೆ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಪುನಃ 2–30ಕ್ಕೆ ಸೇರೋಣ.

(ಸದನವು 1–28ಕ್ಕೆ ಮುಂದೂಡಲ್ಪಟ್ಟು ಪುನಃ 2–30ಕ್ಕೆ ಸೇರಲು ನಿಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ಶ್ರೀ ಹೆಚ್.ಸಿ.ಬಾಲಕೃಷ್ಣ : ಏನು ಮಾತನಾಡುವುದು, ಅಧ್ಯಕ್ಷರೆ? ಎಲ್ಲವನ್ನೂ ನಿಮಗೆ ಬಿಟ್ಟಿದ್ದೇವೆ. ಈಗ ನಾವು ಮಾತನಾಡಿದರೆ ನಮಗೆ ಗೌರವ ಕಡಿಮೆ, ಮಾತನಾಡುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಏನು ಮಾತನಾಡುವುದು, ಅಧ್ಯಕ್ಷರೆ? ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ ಎಂದು ಅಂದುಕೊಂಡಿದ್ದೇವೆ.

ಅಧ್ಯಕ್ಷರು : Time waste, no time. ಕೊಡಿ, ಕೊಡಿ, ಕೋರಂ ಆಗಿದೆ, Come on, Come on.